॥ ಕಂದ ॥

ಸ್ವೀಕರಿಪುದು ಬಸವಪ್ಪಮ |
ಹಾಕವಿ ರಚಿಸಿರ್ಪ ಚಂಡಕೌಶಿಕಕೃತಿಯಂ ||
ಶ್ರೀಕೃಷ್ಣೇಂದ್ರ ಭವತ್ಪರು |
ಣ್ಯೈಕಾಶ್ರಯರಾಮಚಂದ್ರರಾಯಾರ್ಪಿತಮಂ ||

KARNATAKA

HANDA KAUSIKA NATAKAM

ಚಂಡಕೌಶಿಕ ನಾಟಕಂ

BY

THE LATE BASAVAPPA SASTRI

AUTHOR OF

"Karnataka Sakuntala, Surasena Charitra (Shakespear's Othello) etc."

ಶ್ರೀಮನ್ಮಹಾರಾಜರವರ ಆಸ್ಥಾನಕವಿಗಳಾಗಿದ್ದ

ಬಸವಪ್ಪಶಾಸ್ತ್ರಿಗಳಿಂದ

ರಚಿಸಲ್ಪಟ್ಟಿತು

THE G. T. A. PRINTING WORKS, MYSORE.

1909

ಎರಡನೆಯ ಮುದ್ರಣದ ಪೀಠಿಕೆ.

ಚಂಡಕೌಶಿಕ ನಾಟಕದ ಮೊದಲನೆಯ ಮುದ್ರಣದ ಪ್ರತಿಗಳೆಲ್ಲ ಮುಗಿದುಹೋಗಿರುವುದರಿಂದ, ಈಗ ಎರಡನೆಯ ಮುದ್ರಣಮಾಡಿಸುವುದಕ್ಕೆ ಅವಕಾಶವಾಯಿತು. ಈರೀತಿ ಎರಡನೆಯ ಮುದ್ರಣಕ್ಕೆ ಅವಕಾಶಕೊಟ್ಟಿರುವುದಕ್ಕಾಗಿ ವಾಚಕರಿಗೆ ಬಹಳ ಕೃತಜ್ಞನಾಗಿರುತ್ತೇನೆ. ಮೊದಲನೆಯ ಮುದ್ರಣದಲ್ಲಿ ಬಹಳವಾಗಿ ತಪ್ಪುಗಳಿದ್ದುದರಿಂದ ಅವುಗಳನ್ನು ಪರಿಷ್ಕರಿಸಿ ಈ ಗ್ರಂಥವು ಎರಡನೆಯ ಬಾರಿ ಮುದ್ರಿಸಲ್ಪಟ್ಟಿರುತ್ತದೆ.

ಪೂರ್ವದ ಅಭಿಮಾನದಂತೆಯೇ ಈ ಮುದ್ರಣದ ಪ್ರತಿಗಳ ವಿಷಯದಲ್ಲಿಯೂ ಪ್ರೋತ್ಸಾಹಪಡಿಸುವರೆಂದು ನಂಬಿರುತ್ತೇನೆ.

ಮೈಸೂರು,
೫ ನೆಯ ಫೆಬ್ರವರಿ ೧೯೦೯.

ಸಿ. ರಾಮಚಂದ್ರರಾವ್.

ಪೀಠಿಕೆ.

ಶ್ರೀಮನ್ಮಹಾರಾಜರವರ ಆಸ್ಥಾನಕವಿಯಾಗಿದ್ದ ಬಸವಪ್ಪಶಾಸ್ತ್ರಿಗಳು ಆರ್ಯಕ್ಷೇಮೀಶ್ವರನಿಂದ ವಿರಚಿತವಾದ ಚಂಡಕೌಶಿಕವೆಂಬ ಸಂಸ್ಕೃತನಾಟಕವನ್ನು ಕನ್ನಡಿಸಿ ಅದರ ಹಕ್ಕನ್ನು ಮತ್ತು ಅದರ ಸರ್ವಸ್ವಾತಂತ್ರ್ಯವನ್ನು ಕೊಡುವುದಾಗಿ ಒಪ್ಪಿ ಗತಿಸಿದ ಸಿ. ಸುಬ್ಬರಾವ್ ಬಿ.ಎ. ಯವರಿಂದ ಪ್ರಯೋಜನವನ್ನು ಮೊದಲೇ ಹೊಂದಿ ಗ್ರಂಥವನ್ನು ರಚಿಸುವುದಕ್ಕೆ ಉಪಕ್ರಮಿಸಿ ನಾಲ್ಕು ಅಂಕಗಳನ್ನು ಬರೆದು ಅಷ್ಟರಲ್ಲಿ ದೈವಾಧೀನರಾದರು. ಈ ಕಾಲದಲ್ಲಿ ಹುಟ್ಟಿರುವ ಉತ್ತಮಗಳಾದ ಕರ್ಣಾಟಕ ನಾಟಕಗಳೊಳಗೆ ಒಂದಾದ ಇದನ್ನು ಪೂರ್ತಿಮಾಡಿಸಿ ಪ್ರಸಿದ್ಧಪಡಿಸಬೇಕೆಂಬ ನಮ್ಮ ಮಿತ್ರರ ಕೋರಿಕೆಯಂತೆ ಕರ್ಣಾಟಕ ಪಂಡಿತರಾದ ಮ|| ಮೇಲುಕೋಟೆಯ ದೇವಶಿಖಾಮಣಿ ಅಳಸಿಂಗರಾಚಾರ್ಯರಿಂದ ಐದನೆಯ ಅಂಕವನ್ನು ಬರೆಯಿಸಿ ಗ್ರಂಥವನ್ನು ಪೂರ್ತಿಮಾಡಿ ಗ್ರ್ಯಾಜುಯೇಟ್ಸ್ ಟ್ರೇಡಿಂಗ್ ಅಸೋಸಿಯೇಷನ್ ಮುದ್ರಾಕ್ಷರಶಾಲೆಯಲ್ಲಿ ಅಚ್ಚುಹಾಕಿಸಿದೆನು.

ಈ ಗ್ರಂಥವು ಊರ್ಜಿತವಾಗಬೇಕೆಂಬ ಆಸಕ್ತಿಯಿಂದ ಮ|| ಬಿ. ಮಲ್ಲಪ್ಪನವರು ಮಾಡಿರುವ ಅಮೂಲ್ಯವಾದ ಸಾಹಾಯ್ಯಕ್ಕಾಗಿ ನಾನು ಅವರಿಗೆ ಬಹಳವಾಗಿ ಕೃತಜ್ಞನಾಗಿರುತ್ತೇನೆ.

ಇದನ್ನು ಪ್ರಚುರಪಡಿಸುವುದರಲ್ಲಿ ಮಹಾರಾಜಶ್ರೀಯವರುಗಳಾದ ಗರಳಪುರೀ ಅಯ್ಯಶಾಸ್ತ್ರಿಗಳು, ನಂಜನಗೂಡು ಸುಬ್ಬಶಾಸ್ತ್ರಿಗಳು ಮತ್ತು ಇವರ ಮಕ್ಕಳು ಸ್ವರ್ಗಸ್ಥರಾದ ಅನಂತನಾರಾಯಣಶಾಸ್ತ್ರಿಗಳು ಸಹ ಬಹಳವಾಗಿ ಸಹಾಯಮಾಡಿರುತ್ತಾರೆ. ಇವರುಗಳಿಗೂ ನಾನು ಬಹಳ ಕೃತಜ್ಞನಾಗಿರುತ್ತೇನೆ.

ಮೈಸೂರು,
ಡಿಸೆಂಬರ್ ೧೮೯೭.

ಸಿ. ರಾಮಚಂದ್ರರಾವ್

ಶ್ರೀರಸ್ತು.

ಕರ್ಣಾಟಕ

ಚಂಡಕೌಶಿಕ ನಾಟಕಂ.

ಮೊದಲನೆಯ ಅಂಕ.

ವೃತ್ತ॥ ಇಳೆಯುಂ ತ್ರೈಗುಣ್ಯಭೇದಂದಳೆದು ಜನಿಯಿಪಂ ರಕ್ಷಿಪಂ
ಶಿಕ್ಷಿಪಂ ಸಂ। ಗಳಿಪಂ ಮೆಯ್ಯೆಂಟರಿಂದೀ ವಿಭು ಜಗಮನಿವಂಗಿ
ಪ್ಪರ್ರಾರ್ವಂದ್ಯರೆಂದೇ ॥ ತಿಳಿದತ್ತೆಂಬಂತೆವೊಲ್ ನಾಟ್ಯದೆ
ಮೃಡನ ಪದಾಂಭೋಜಮಂ ತಳ್ತ ಪುಷ್ಪಾಂ। ಜಳಿ ನಿಮ್ಮಂ
ರಕ್ಷಿಕೆಂದುಂ ಕಟಕಫಣಧರಾಧೀಶನಿಶ್ವಾಸಕೀರ್ಣಂ ॥

ವೃ॥ ಕಿಸುರಿಡಿದಕ್ಷಿಯಿಂ ಮುರಿದ ಪುರ್ವುಗಳಿಂ ನಸುಕಂಪಿಪೋ
ಷ್ಠದಿಂ। [illegible]ವ ನಿಜಾನನಂ ಶಶಿಯ ಕಾಂತಿಯನೇಳಿಕೆ ಶೋಭ
ನಾಂಗಿ ಯಾ॥ ನೆಸಪನುನೀತಿ ಸಾಕೆಲೆ ಮನಸ್ವಿನಿ ವರ್ಧಿಕೆ
ನಿನ್ನ ಕೋಪಮೆಂ।ದುಸಿರ್ದೊಡನಪ್ಪೆ ದೇವಿ ಮುದವೆತ್ತಭವಂ
ನಿಮಗೀಗೆ ಭದ್ರಮಂ ॥

ವೃ॥ ಜಗುಳ್ದ ಸಮಾಧಿಮೋದದಿನಪರ್ಣೆಯ ಸೌಖ್ಯದೆ ಗಾಡಿವೆತ್ತು
ತ। ನ್ನೊಗೆದ ವಿಕಾರದೊಳ್ ತಳೆದು ಸಂಭ್ರಮವಿಸ್ಮಯಹಾ
ಸಮಂ ಸರ॥ ಲ್ದೆಗೆದಲರ್ವಿಲ್ಲನೊಳ್ ಕೆರಳ್ದ ಬೆಂದವನೊಳ್
ಕೃಪೆವೆತ್ತು ಮಶ್ರು ಕೈ। ಮಿಗೆ ರತಿಶೋಕದಲ್ಲದಿರ್ವ ದೃಷ್ಟಿ
ಗಳೋವುಗೆ ನಿಮ್ಮನೀಶನಾ ॥

ನಾಂದ್ಯಂತದಲ್ಲಿ

ಸೂತ್ರಧಾರ—ಸಾಕು ! ಅತಿವಿಸ್ತರವಂತಿರಲಿ.

ವೃ॥ ನೆಗಳ್ದಷ್ಟಾಮಾತ್ಯಧೀಜಾಲದೆ ಕೆಡೆಯುದ ಸಿಂಹೋರುವೇಗಂ
ನಿಜಭ್ರೂ। ಯುಗಭಂಗಪ್ರೋದ್ಧೃತಾಶೇಷರಿಪುವಿಪುಲಯುದ್ಧಾ
ರ್ಣವಾಂತರ್ಭ್ರಮಚಟ್ಟ ॥ ಸ್ತ್ರಗಬಾಹಾಮಂದರಾಕೃಷ್ಟವಿತತ
ವಿಜಯಶ್ರೀವಿವಾಹಪ್ರಿಯಂ ಸಾ। ಧುಗುಣಂ ತಾನೀಗಳೊಲ್ದಾ
ಣತಿಸಿದನೆನಗಾ ಶ್ರೀಮಹೀಪಾಲದೇವಂ ॥

ಪ್ರಾಚೀನರು ಮಹೀಪಾಲದೇವನ ಪ್ರಾಶಸ್ತ್ಯವನ್ನು ಕುರಿತು ಹೀಗೆ ಹೇಳುವರು.

*ವೃ॥ ಪಿರಿದುಂ ಚಾಣಕ್ಯನೀತ್ಯಾಶ್ರಯಣದಿನವಲೇಪಾಂಧರಂ ನಂದ
ರಂ ಕೊಂ। ದುರುಪುತ್ತ್ರಂ ಗೆಲ್ದನಾವಂ ಕುಸುಮನಗರಿಯಂ
ಚಂದ್ರಗುಪ್ತಕ್ಷಿತೀಂದ್ರಂ ॥ ಧರೆಯೊಳ್ ಕರ್ಣಾಟಕತ್ವಂಬಡೆ
ದುದಯಿಸಿದಾದುಷ್ಟರಂ ಯುದ್ಧದೊಳ್ ಸಂ।ಹರಿಸಲ್ ದೋರ್ದ
ರ್ಪದೃಪ್ತಂ ಮಗುಳ್ದಮವನೆ ತಾಂ ಶ್ರೀಮಹೀಪಾಲನಾದಂ ॥

ಪಾರಿಪಾರ್ಶ್ವಕ—ಆರ್ಯನೆ! ಆ ಮಹೀಪಾಲದೇವನೇನಾಜ್ಞಾಪಿಸಿದನು?
ಸೂತ್ರ—ವಿಜಯಪ್ರಕೋಷ್ಠನ ಹಿರಿಯ ಮೊಮ್ಮಗನಾದ ಆರ್ಯ ಕ್ಷೇಮೀಶ್ವರ ಮಹಾಕವಿಯಿಂದ ರಚಿಸಲ್ಪಟ್ಟ ಅಭಿನವ ಚಂಡಕೌಶಿಕ ನಾಟಕವನ್ನಾಡಿಸಬೇಕೆಂದು ಅಜ್ಞಾಪಿಸಿರುವನು. ಇದಲ್ಲದೆ ಆ ಆರ್ಯಕ್ಷೇಮೀಶ್ವರ ಕವಿಯೇ ನಾಟ್ಯವೇದವಿಚಕ್ಷಣರಾಗಿಯೂ, ವಿದ್ಯಾಕಲಾವಿದರಾಗಿಯೂ, ಲೋಕಜ್ಞರಾಗಿಯೂ ಇರುವ ಸಭಾಸದರನ್ನು ಕುರಿತು ಹೀಗೆ ಹೇಳಿರುವನಲ್ಲವೆ ?

ಕಂ॥ ಇಲ್ಲಂ ದೋಷವಿಹೀನವಮು ।
ಮಿಲ್ಲಂ ಗುಣಹೀನವೆನಿಪುದೊಂದುಂ ನೋಡಲ್ ॥
ಬಲ್ಲರದರಿಂದೆ ದೋಷವು ।
ದುಳ್ಳೊಡೆ ಮರೆಯಿಸುಗೆ ಮೆರೆಯಿಸುಗೆ ಗುಣಗಣಮಂ ॥

ಅದರಿಂದ ಪಾರಿಪಾರ್ಶ್ವಕನೆ ಕುಶೀಲವರೊಡನೆ ಸಂಗೀತವನ್ನು ಏಕೆ ಆರಂಭಿಸದಿರುವೆ?

ಪಾರಿ-(ಭಯದಿಂದ ತಲೆ ತಗ್ಗಿಸಿಕೊಂಡು ನಿಂತು) ಆರ್ಯನೆ! ನೀನು ಆ ಗ್ರಹಣಕಾಲದಲ್ಲಿ ಯಾವ ಬ್ರಾಹ್ಮಣನಿಗೆ ದಕ್ಷಿಣೆಯನ್ನು ಕೊಡುವೆನೆಂದು ಪ್ರತಿಜ್ಞೆಮಾಡಿ ತಪ್ಪಿದೆಯೊ, ಆ ಬ್ರಾಹ್ಮನು ಕುಪಿತನಾಗಿರುವನೆಂದು ಕುಶೀಲವರೆಲ್ಲರೂ ಚಿಂತಾಕ್ರಾಂತರಾಗಿರುವರು.

ಸೂ-(ಭಯವನ್ನಭಿನಯಿಸಿ ಚಿಂತೆಯನ್ನು ನಟಿಸಿ ಸಂತೋಷದಿಂದ) ಇದಕ್ಕೇಕೆ ಚಿಂತೆ? ಇದೋ! ಈಗ ನಾನು—

* ಕಂ॥ ಪೊರೆಯಲ್ ಸತ್ಯಮನೀಗಳೆ ।
ತರುಣೀತನಯಾತ್ಮವಿಕ್ರಯಂಗೆಯ್ದಾಂ ಪೂ ॥
ಣ್ದೊರೆದಾ ದಕ್ಷಿಣೆಯಂ ಭೂ ।
ಸುರೋತ್ತಮಂಗೀವೆನಾ ಹರಿಶ್ಚಂದ್ರನವೊಲ್ ॥

(ತೆರೆಯಲ್ಲಿ) ಪ್ರಿಯಮಿತ್ರನೆ! ಇತ್ತ ಬರಬೇಕಿತ್ತ ಬರಬೇಕು.

ಸೂ-(ತೆರೆಗಿದಿರಾಗಿ ನೋಡಿ) ಓಹೊ! ಪೂಜ್ಯನಾದ ಹರಿಶ್ಚಂದ್ರನು ಮಹೋತ್ಪಾತಸೂಚಿತಗಳಾದ ವಿಪತ್ತುಗಳನ್ನು ಕ್ಷೇಮದಿಂದ ಕೊನೆಗಾಣಿಸುವುದಕ್ಕೆ ವಿವಿಧಶಾಂತಿಕ್ರಿಯೆಗಳನ್ನು ಆರಂಭಿಸುವ ಪುರೋಹಿತನಿಂದ ಉಪದಿಷ್ಟವಾದ ನೇಮದಿಂದ ಜಾಗರಣವನ್ನು ಮಾಡಿ, ಅದರಿಂದುಂಟಾದ ದುಂಮಾನದಿಂದ ಕೂಡಿ ತನ್ನ ಪ್ರಿಯಮಿತ್ರನಾದ ಬೋಧಾಯನನು ತೋರಿಸುವ ಮಾರ್ಗವಾಗಿ ಅಂತಃಪುರಕ್ಕೆ ಹೊರಟೇ ಇರುವನು. ಇವನಾದರೊ

ಕಂ॥ ಅರುಣತೆಯನಾಂತು ಬೆಂಡೆ ।
ಳ್ದರೆ ಜಾಗರದಿಂದೆ ಕಣ್ಗಳಾಸ್ಯಾಬ್ಜಂ ಬಾ ॥
ಡಿರೆ ವಿರಹವ್ಯಥಿತಂ ಪೊ ।
ಳ್ತರೆಯೊಳ್ ಯೂಥಮನಗಲ್ದ ಕರಿಯವೊಲಿಪ್ಪಂ ॥

ಅದರಿಂದ ಬಾ. ಅಲ್ಲಿಗೆ ಹೋಗೋಣ (ಎಂದು ಹೋಗುವರು)

ಪ್ರಸ್ತಾವನೆ.

(ಅನಂತರ ಜಾಗರಣದ ಕ್ಲೇಶವನ್ನು ಅಭಿನಯಿಸುತ ರಾಜನೂ ವಿದೂಷಕನೂ ಬರುವರು.)

ವಿದೂಷಕ-ಎಲೈ ಮಿತ್ರನೆ! ಇದೇನು?

ಕಂ॥ ಅರೆಮೊಗವನಿಕ್ಕಿದಾಮೆಯ ।
ಪರಿಯಿಂ ತೂಂಕಡಿಪ ಕಣ್ಗಳೆಮೆಯುಂ ಪೊಯ್ದುಂ ॥
ತೆರೆದುಂ ಮಾರ್ಗವನರಿಯದ ।
ಕುರುಡಿಲಿಯವೊಲತ್ತಮಿತ್ತಸುತ್ತುತ್ತಿಪ್ಪೈ ॥

ರಾಜ—ಮಿತ್ರನೆ! ನಿದ್ರೆಯೇ ಪ್ರಾಣಿಗಳ ಶರೀರಧಾರಣೆಗೆ ಮುಖ್ಯ ಸಾಧನವಲ್ಲವೆ? ಕೇಳು.

ಕಂ॥ ಬಗೆಯಂ ತಿಳಿಯಿಕುವೊಡಲಂ ।
ಲಗುಗೆಯ್ಗುಂ ಮತಿಯ ಬೆಳಗುಗುಂ ದೋಷಗಳಂ ॥
ತೆಗೆದಪುದು ಧಾತುಸಾಮ್ಯವ ।
ನೊಗೆಯಿಪುದಿತ್ತಪುದು ಯೋಗದಿಂದಹ ಸೊಗಮಂ ॥

ಅದರಿಂದೀಗ ನನಗೂ ನಿದ್ರಾಭಾವದಿಂದುಂಟಾಗಿರುವ ಅವಸ್ಥೆಯನ್ನು ನೋಡು.

ಕಂ॥ ತಳೆವುದು ಮೆಯ್ಯುರಿತಮನಾ ।
ಗುಳಿಕೆಗಳಡಿಗಡಿಗೆ ಬರ್ಕುಮಾಯಸದಿಂ ಸಂ ॥
ಗಳಿಪುದು ಜಾಡ್ಯಂ ಮಾನಸ ।
ಕೆಳವಿಸಿಲಂ ನೋಡೆ ನಾಡೆ ಕಣ್ಕೋರಯಿಕುಂ ॥

(ಯೋಚಿಸಿ ಆಶ್ಚರ್ಯದಿಂದ) ನನಗೆ ಜಾಗರವನ್ನು ಆಜ್ಞಾಪಿಸಿದ ಪೂಜ್ಯರಾದ ಕುಲಪತಿಗಳಿಗೆ ಈಗ ಏನು ಅಭಿಪ್ರಾಯವೊ? ಹ್ಯಾಗಾದರೂ ಆಗಲಿ ಗುರುಗಳ ಆಜ್ಞೆಯು ವಿಚಾರಕ್ಕೆ ತಕ್ಕದ್ದಲ್ಲ.

ವಿದೂಷಕ—ಮಿತ್ರನೆ! ಯೋಚಿಸಿದರೆ ನನಗೊಂದು ತೋರುವುದು. ನಿನ್ನಾಗಮನಕ್ಕಾಗಿ ಸಡಗರಿಸುತ್ತಿದ್ದ ದೇವಿಯ ಮನೋಭಂಗವೊಂದಲ್ಲದೆ ಇದರಿಂದ ಮತ್ತೇನೂ ಕಾಣುವುದಿಲ್ಲ.

ರಾಜ—ಸಾಕು! ನಿನ್ನ ಪರಿಹಾಸವು ಹಾಗಿರಲಿ.

ವಿದೂ—ನಿನಗಾದರೆ ಇದು ಪರಿಹಾಸ; ಅನಾಥವಟುವಾದ ನನಗೆ ಅನರ್ಥವೆ.

ರಾಜ—(ವ್ಯಸನದಿಂದ ಶೋಕಾಭಿನಯವನ್ನು ಮಾಡಿ) ಮಿತ್ರನೆ! ದೇವಿಯೇನೆಣಿಸುವಳೆಂದು ನೀನಾಲೋಚಿಸುವೆ?

ವಿದೂ—ಇನ್ನೇನು? ಕುಪಿತಳಾಗಿರುವಳೆಂದು ಊಹಿಸುವೆನು.

ರಾಜ—ಮಿತ್ರನೆ! ಅದಕ್ಕೆ ಸಂದೇಹವೇನು? ದೇವಿಯ ಕೋಪಕ್ಕಿದು ಅಲ್ಪಕಾರಣವಲ್ಲ. ಹಾಗೆಯೇ ಸರಿ.

ವೃ॥ ತಡೆದರೊ ಮಂತ್ರಿಗಳ್ ಸೆಳೆದರೋ ಕೆಳೆಯರ್ ಪ್ರಿಯಗೋ
ಪ್ಠಿಯತ್ತ ಮೇಣ್ | ನಡೆದನೊ ಕೂರ್ತದೊರ್ವಳೆಡೆಗೀ ಶಠ
ನೇತಕೆ ಬಾರನೆಂದು ಕ ॥ ಣ್ಗಡೆ ಕಡುಗೆಂಪನಾನೆ ಮುಳಿಸಿಂ
ಮೊಗದೊಳ್ ಗಳದಶ್ರುವಾರಿ ಧೀಂ | ಕಿಡೆ ನಿಡುಸುಯ್ದು
ಧೂರ್ತನೆನಿಪೆಂನೊಳದಾವುದನಾಕೆ ಭಾವಿಸಳ್ ॥

ಮತ್ತಂ॥

ವೃ॥ ಕಳೆದಳ್ ಭೂಷಾವಿಶೇಷೋದ್ವಹನಪರತೆಯಿಂ ಸಂಜೆಯಂ
ರಾಗದಿಂ ಮೇಣ್| ಕಳೆದಳ್ ಮನ್ಮಾರ್ಗದತ್ತೇಕ್ಷಣೆ ಯೆರಡನೆ

ಯಾಯಾಮಮಂ ಬಾರದಾದಂ|| ಬಳಿಗಿನ್ನುಂ ಧೂರ್ತನೆಂದಶ್ರು
ಗಳುಗೆ ತೆಗೆದೀಡಾಡಿ ತೊಟ್ಟಿದ್ದು ರ್ಗವಂ ತಾಂ | ಕಳೆದಳ್ ಮೋ
ಣೆಂತೊಪಾಸೊಳ್ ಪೊರಳುತೆ ರಜನೀಶೇಷವಂ ಬೇಸರಿಂದಂ ||

(ಚಿಂತೆಯನ್ನಭಿನಯಿಸಿ)

ವೃ|| ಜನವಾರಾದೊಡವೈದಲಾನೆ ನಡೆತಂದಂ ನನ್ನಿಯೆಂದಾಕ್ಷಣಂ|
ಮನದೊಳ್ ಸಂಭ್ರಮಮುಣ್ಮೆ ತಾನಿದಿರೆವಂದಾನಲ್ಲದಿರ್ದಂ
ದು ಬಿ | ನ್ನನೆ ನಿಂದಂಗವ ನೋಡಿ ತತ್ಸಖಿಯರೋರೊರ್ವರ್
ನಿಗೂಢಸ್ಮಿತಾ | ನನಪಾಥೋಜಿಯರಾಗೆ ಬಾಗಿಸಿದಳಕ್ಕುಂ
ಕಾಂತೆ ವಕ್ತ್ರಾಬ್ಜವಂ ||

ವಿದೂಷಕ-(ನಕ್ಕು) ಮಿತ್ರನೆ ಕಳೆದುಹೋದುದನ್ನು ಕುರಿತು ಹಲು
ಬುತ್ತ ಆತ್ಮವನ್ನೇಕೆ ಆಯಾಸಪಡಿಸುವೆ? ಅಲ್ಲಿಗೆಯೇ ಹೋಗಿ
ದೇವಿಯ ಮುಳಿಸನ್ನು ತಿಳಿಸೋಣ ನಡೆ.

ರಾಜ–ಭಾಪು ಮಿತ್ರನೆ! ಚೆನ್ನಾಗಿ ಹೇಳಿದೆ ನಡೆ ಅಲ್ಲಿಗೆ ಹೋ
ಗೋಣ. (ಸ್ವಲ್ಪ ನಡೆದು ವ್ಯಸನದಿಂದ ನಿಟ್ಟುಸುರನ್ನು ಬಿಟ್ಟು) ಅಕಾಲ
ದಲ್ಲಿ ಈಗ ನಾನಲ್ಲಿ ಹೋಗುವುದು ಖೇದವನ್ನುಂಟುಮಾಡುವುದ
ಕ್ಕಲ್ಲದೆ ಮತ್ತೆ ಬೇರೆಯಲ್ಲ. ಹಾಗೆಯೇ ಸರಿ.

ವೃ|| ನುಡಿವೆಡೆ ನಿಂದ ಮತ್ಕಥೆಯ ಗಂಟಿಡುವಳ್ ಮಗುಳ್ದೆನ್ನ
ಮಾರ್ಗಮಂ | ಬಿಡದೆ ವಿಲೋಕಿಪಳ್ ತೃಣಮುಲುಂಗಿದೊಡಂ
ನಡೆತಂದನೆಂದು ತಾ || ನೊಡನೆ ಗಣಿಪ್ಪಳಂದವಳ್ಗೆ ಕಾಣಿಸದಂ
ತಿರೆ ಪಿಂದೆ ಪೋಗಿ ಸಂ | ಗಡಿಯಿಸಿ ಕೈಗಳಿಂದವಳ ನೈದಿಲೆಗ
ಣ್ಗಳನಪ್ಪದಾದೆನಾಂ ||

ವಿದೂಷಕ—ಮಿತ್ರನೆ! ನೋಡು ! ನೋಡು ! ಆಭರಣಗಳನ್ನು ತಂದಿರುವ ಚಾರುಮತಿಯೊಡನೆ ದೇವಿಯು ಏನೋ ಮಾತಾಡುತ್ತಾ ಕುಳಿತಿರುವಳು.

ರಾಜ-(ನೋಡಿ ಸಂತೋಷದಿಂದ) ಆಹ ! ಇದೇನು ?

ವೃ॥ ಅಸಿಯುಳನಾಂತುದಿಲ್ಲ ಶರಗೌರಕಪೋಲದೆ ಪತ್ರಪಾಳಿ ರಂ।
ಜಿಸೆ ನಿಡುಗಣ್ಗೆ ಕಾಡಿಗೆಯು ಮೆಚ್ಚಿದುದಿಲ್ಲ ಮೃಗಾಕ್ಷಿಯಿಂದೆ
ಬಂ ॥ ಧಿಸಿದುದುಮಿಲ್ಲ ಕೊಂಕುಗುರುಳಾಂತುದು ಚೆಂದುಟಿ
ಬೆಳ್ಪನಾದೊಡಂ । ಪೊಸತಿದು ಸಿಂಗರಕ್ಕೆ ಪುರುಡಿಪ್ಪ ತನು
ಪ್ರಭೆಯಾದವೊಪ್ಪುಗುಂ ॥

(ಅನಂತರ ಚಿಂತೆಯನ್ನು ಅಭಿನಯಿಸುತ್ತಾ ದೇವಿಯೂ ಚಾರುಮತಿಯೂ ಬರುವರು).

ಚಾರುಮತಿ—ಎಲೌ ರಾಣಿಯೆ ! ಇದೊ ಆಭರಣಗಳು.

ದೇವಿ—ಎಲೆ ಚಾರುಮತಿ ! ಅಲಂಕಾರಸಾಮಗ್ರಿಯಲ್ಲಿ ವ್ಯರ್ಥವಾಗಿ ಆಶೆಪಟ್ಟ ನನ್ನನ್ನು ಎಷ್ಟೆಂದು ತಾನೇ ನಿಂದಿಸಿಕೊಳ್ಳಲಿ.

ವಿದೂಷಕ—ಆಹ! ಈಕೆಯ ಮುನಿಸು ಅಧಿಕವಾಗಿರುವುದು.

ರಾಜ—ಭಾಪು ದೇವಿ ಭಾಪು! ಸ್ವಭಾವಸುಂದರಗಳಾದ ನಿನ್ನ ಅಂಗಗಳಿಗೆ ಅಲಂಕಾರಾಸಕ್ತಿಯು ತಿರಸ್ಕಾರಾಸ್ಪದವಲ್ಲವೆ? ಹಾಗೆಯೇ ಸರಿ.

ಕಂ॥ ತಾಂಬೂಲಮಧರಕುತುಕಂ।
ಕಂಬುಗಳಾಲಿಂಗನೋತ್ಸುಕಂ ಹಾರಂ ದೃ ॥
ಕ್ಚುಂಬನಲಾಲಸಮಂಜನ।
ಮೆಂಬುದವಕ್ಕಿಷ್ಟಸಿದ್ಧಿ ನಿನಗವು ತೊಡವೇ ॥

ವಿದೂಷಕ—ಮಿತ್ರನೆ! ನಡೆ ಸಮೀಪಕ್ಕೆ ಹೋಗೋಣ.

ರಾಜ—ತಾಳು ! ಇಲ್ಲಿಯೆ ನಾವು ಮರೆಯಾಗಿದ್ದು ದೇವಿಯು ವಿಸ್ರಂಭದಿಂದಾಡುವ ಮಾತುಗಳನ್ನು ಸ್ವಲ್ಪ ಕೇಳೋಣ.

(ಮರೆಯಾಗಿರುವರು).

ಶೈಬ್ಯೆ—ಎಲೆ ಚಾರುಮತೀ! ಆರ್ಯಪುತ್ರನು ನನ್ನನ್ನು ಹಾಗೆ ನಂಬಿಸಿ ವಿಪ್ರಲಂಭಕ್ಕೆ ಗುರಿಮಾಡಿದ ಬಳಿಕ ಅವಿಶ್ವಸನೀಯಳಾದ ನನ್ನ ಅದೃಷ್ಟಕ್ಕೆ ನಮಸ್ಕಾರ ನಮಸ್ಕಾರ.

ರಾಜ—ಕಂ॥ ಜಲಧರಸಂಕುಲದೊಳ್ ಮರೆ।
ಗೊಳೆ ಪಂಕರುಹಾಪ್ತನಂತರಿಂದಬ್ಜಿನಿಯು॥
ವ್ಮಳವಾಂಪಳಾಕೆಗದು ವಿ।
ಪ್ರಲಂಭಮಲ್ಲಲ್ತುರವಿಗುಪಾಲಂಭನಮುಂ॥

ಚಾರು—ಎಲೆ ಒಡತಿ! ಸಾಕು ಏಕೆ ದುಃಖಿಸುವೆ ?—ಬಹುವಲ್ಲಭರಲ್ಲವೆ ರಾಜರು ?

ವಿದೂಷಕ.-(ಸಮೀಪಕ್ಕೆ ಬಂದು) ಎಲೆ ತೊತ್ತಿನಮಗಳೆ ಬಹುಕಾರ್ಯವುಳ್ಳವರೆಂದು ಹೇಳು. ಏತಕ್ಕೆ ಪ್ರಿಯಮಿತ್ರನನ್ನು ಮಿಥ್ಯಾಪವಾದಕ್ಕೆ ಗುರಿಮಾಡುವೆ ?

ರಾಜ—ಮಿತ್ರನೆ ಸಾಕು ! ಕೋಪಿಸಬೇಡ.

ಕಂ॥ ಮುಳಿಸು ಕರಂ ಜಾಣ್ಪೆರಸಿದ।
ಕೆಳದಿಯರಿಂದೇಳ್ಗೆವಡೆಯೆ ನಳಿನೇಕ್ಷಣೆಯು॥
ರ್ಕಳ ಮಿಥ್ಯೋಪಾಲಂಭ।
ಕ್ಕೊಳಗಪ್ಪಿನಿಯರ್ಕಳಲ್ತೆ ಧನ್ಯರ್ ಜಗದೊಳ್॥

ಶೈಬ್ಯೆ-(ರೋದನಮಾಡುವಳು)

ಚಾರು—ಒಡತಿಯೆ ! ಸಂತೈಸಿಕೊ ! ಸಂತೈಸಿಕೊ ! ಘನವಾದ ನಿನ್ನ ಸ್ವಭಾವದಿಂದಲೇ ಅಲ್ಲವೆ ಮಹಾರಾಜನು ಇಷ್ಟುಮಟ್ಟಿಗೆ ಹದ್ದುಮೀರಿದ್ದು ? ನನ್ನನ್ನು ನೀನು ಕೇಳಿದರೆ ಮಹಾರಾಜನು ನಿನ್ನನ್ನು

ನೋಡಿದರೂ ನೀನು ಅವನನ್ನು ನೋಡಬೇಡ. ಆತನು ಎಷ್ಟು ಪ್ರಿಯೋಕ್ತಿಗಳನ್ನಾಡಿದರೂ ಅದಕ್ಕೆ ಬೆರೆಯದೆ ಬಿರುನುಡಿಗಳಿಂದ ಆತನನ್ನು ಮರುಗಿಸು.

ಶೈಬ್ಯೆ—ಎಲೆ ಚೇಟಿ! ನಿನ್ನ ಯಾವಮಾತನ್ನು ತಾನೆ ನಾನು ನಡೆಯಿಸುವದಿಲ್ಲ? ಆದರೆ ಆರ್ಯಪುತ್ರನನ್ನು ಕಂಡಾಗ ಈ ನನ್ನ ದುಷ್ಟ ಹೃದಯವು ಮಾತ್ರ ನನಗೆ ಅಧೀನವಾಗಿರಬೇಕು.

ರಾಜ—(ಬೇಗನೆ ಸಮೀಪಕ್ಕೆ ಬಂದು) ಪ್ರಿಯೆ!

ಕಂ॥ ನಡೆಗುಂ ನಿಜಪ್ರಭಾವಂ।
ಗಡಮೆನ್ನೊಳಮಿಂತು ಮತ್ಪರಾಯಣಭಾವಂ॥
ಬಡೆದಿರ್ಪ್ಪ ನಿನ್ನ ಹೃದಯದೆ।
ನಡೆಯದದೆಂತಿರ್ಕ್ಕುಮುಸಿರ ನಳಿನದಳಾಕ್ಷೀ॥

ವಿದೂ—ಪೂಜ್ಯಳೆ! ನಿನಗೆ ಮಂಗಳವಾಗಲಿ.

(ಶೈಬ್ಯೆಯೂ ಚಾರುಮತಿಯೂ ಸಂಭ್ರಮದಿಂದ ಎದ್ದು ನಿಂತುಕೊಳ್ಳುವರು)

ಶೈಬ್ಯೆ—(ಸ್ವ) ಓಹೊ! ಆರ್ಯಪುತ್ರನು! ಒಳ್ಳೇದು; ಆಗಲಿ. (ಪ್ರ) ಆರ್ಯಪುತ್ರನಿಗೆ ವಿಜಯವಾಗಲಿ.

ಚಾರು—(ಭಯಪಟ್ಟು ತನ್ನಲ್ಲಿತಾನು) ಓಹೊ! ಮಹಾರಾಜನು! ತೆಗೆ ತೆಗೆ! ನಾನು ಆಡಿದ್ದನ್ನು ಕೇಳಿದನೋ ಏನೊ, ಹ್ಯಾಗಾದರೂ ಆಗಲಿ, ಹೀಗೆ ಹೇಳುವೆನು—(ಪ್ರ)ಮಹಾರಾಜನಿಗೆ ವಿಜಯವಾಗಲಿ. ಇದೊ ಪೀಠವು. ಮಹಾರಾಜನು ಇದನ್ನು ಅಲಂಕರಿಸಬೇಕು.

(ಎಲ್ಲರೂ ಕುಳಿತುಕೊಳ್ಳುವರು).

ರಾಜ—(ಚೆನ್ನಾಗಿ ನೋಡಿ)

ಕಂ॥ ಬೆಳಗಿನ ಸರಸೀರುಹದೊಳ।
ಗಳಿ ಬಾಯರೆತೆರಗಿ ತಾಂ ಮರಲಂತೇಕೆ॥
ನ್ನೊಳಗೀ ಯಪಾಂಗವಲಿತೋ।
ಜ್ವಳತಾರಂ ನಿನ್ನ ದೃಷ್ಟಿಯೆರಗಿ ಮರಲ್ಗುಂ॥

ಮತ್ತಂ

ಕಂ॥ ತೊಡವುಗಳೊಳಾದನಾದರ।
ಮುಡುಪತಿಮುಖಿ ನಿನಗದೊಂದು ಸಿರಿಯಿತ್ತಪುದಾ॥
ದೊಡವಿಾ ನಿನ್ನಯ ಹೃದಯದೊ।
ಳಿಡೆಗೊಂಡಳಿಮುಳಿಸನೆನಗೆ ನುಡಿವವೊಲಿಕ್ಕುಂ॥

ಶೈಬ್ಯೆ—(ಅಸೂಯೆಯಿಂದ ಕೂಡಿ) ಆಹ! ಆರ್ಯಪುತ್ರನು ಅಧಿಕವಾದ ಜಾಗರಣದಿಂದ ಜಡಗಳಾಗಿಯೂ ನಿದ್ರಾಲಸಗಳಾಗಿಯೂ ಇರುವ ಕೆಂಪಾದ ಕಣ್ಣುಗಳಿಂದ ಚೆನ್ನಾಗಿ ಶೋಭಿಸುವನು.

(ಕೋಪವನ್ನು ಅಭಿನಯಿಸುವಳು)

ರಾಜ—(ಚೆನ್ನಾಗಿನೋಡಿ ವಿನಯದಿಂದ) ಪ್ರಿಯಳೆ! ಪ್ರಸನ್ನಳಾಗು ಪ್ರಸನ್ನಳಾಗು.

ವೃ॥ ಚಂಡಿಯಕಾಂಡದೊಳ್ ಪೊರಳ್ದುಮೇಕೆ ಲಲಾಟದೊಳಿಕ್ಕು
ಕಾಂಡಕೋ | ದಂಡ ಜಯಧ್ವಜಾಂಶುಕವಿಲಾಸಮನೊಂದಿದ
ಕೊಂಕುವುರ್ವು ತಾಂ || ತೊಂಡೆಯ ಪಣ್ಣ ಚೆಲ್ವುವಡೆದಿಂ
ದುಟಿ ಮಂದಸವಿಾರಚಾಲಿತಾ | ಖಂಡಜಪಾಸುಮಕ್ಕೆ ಪಡಿ
ಯಪ್ಪುದದೇತಕೆ ತಳ್ತ ಕಂಪದಿಂ ||

ಮತ್ತಂ

ವೃ॥ ಮುನಿವೆಯದೇಕೆ ನೀಂ ಬರಿದೆ ಮಾನಿನಿ ಬಲ್ಲಲಮೆನ್ನೊಳಾ
ವುದಂ | ಮನದೆ ವಿಶಂಕಿಪಾ ನಿಜದಿನಾನದನಾಗಿಸಿದಾತನಲ್ತು
ಮೇಣ್ || ಇನಿಯಳೆ ದಂಡಿಪಾಸೆಯಿರೆ ದಂಡಿಸು ನೀನೆಳಪಂದ
ದಿಂದಮೆ | ನ್ನ ನಿಜಕ್ಕೆ ಕೇಳ್ ಪ್ರಮಾಣಮೆನಿಪರ್ ಕುಲದಾ
ಣ್ಮರೆನಿಪ್ಪ ದೇಶಿಕರ್ ||

ಪ್ರತೀಹಾರಿ—(ಬಂದು) ಮಹಾರಾಜನಿಗೆ ಜಯವಾಗಲಿ. ಇದೊ ! ಕುಲಪತಿಗಳ ಸನ್ನಿಧಿಯಿಂದ ತಾಪಸನು ಬಂದಿರುವನು.

ರಾಜ–ಎಲೆ ಹೇಮಪ್ರಭೆ! ಆದರದಿಂದ ಬೇಗನೆ ಕರೆದುಕೊಂಡುಬಾ.

ಪ್ರತೀಹಾರಿ—ಅಪ್ಪಣೆ. (ಎಂದು ಕರೆತರುವಳು)

(ಅನಂತರ ಶಾಂತ್ಯುದಕಹಸ್ತನಾಗಿ ತಾಪಸನು ಬರುವನು)

ತಾಪಸ—ಓಹೊ ! ಇದೇನಾಶ್ಚರ್ಯ ?

ವೃ॥ ಏತಕಪರ್ವದೊಳ್ ಗ್ರಹಣಮಿಂದುಗೆ ಸಂಗಡಿಕುಂ ಬಳಕ್ಕ ಮಿಂ । ತೇತಕೆ ದಿಕ್ಪ್ರದಾಹಮಿದದೇತಕೆ ಕಂಪಿಕುಮುರ್ವಿ ಯುಲ್ಕೆ ತಾ ॥ ನೇತಕೆ ಭೇದಿಕುಂ ತರಣಿಮಂಡಲಮಂ ಬಗೆ ಯಲ್ ವಿಚಿತ್ರಮು । ತ್ಪಾತಮಿದಕ್ಕೆ ಮುಂದೆ ಪರಿಣಾಮಮ ದೆನ್ನದೊ ದೈವಯೋಗದಿಂ ॥

ಅಥವಾ ಇದು ಕುಶಲಪರಿಣಾಮವಾಗುವುದೆಂದು ಗುರುಗಳಿಂದ ಚಿಂತಿಸಲ್ಪಟ್ಟೇ ಇರುವುದು. ಅಥವಾ ಗುರುಗಳಿಂದ ಚಿಂತಿಸಲ್ಪಡುವ ಈಯುತ್ಪಾತವು ಕುಶಲಪರಿಣಾಮವುಳ್ಳದ್ದಾಗಬಹುದು.

ಕಂ॥ ಶಾಂತಿಸ್ವಸ್ತ್ಯಯನದ್ವಿಜ ।
ಸಂತಾನಸ್ವಸ್ತಿವಾಚನದೆ ದಾನದೊಳಂ ॥
ಸಂತರ ಸಂಕೀರ್ತನೆಯೊಳ ।
ಮಾಂತುತ್ಪಾತಂಗಳೆಲ್ಲಮಳಿವಂ ಪಡೆಗುಂ ॥

ಆದುದರಿಂದಲೆ ಪೂಜ್ಯರಾದ ಕುಲಪತಿಗಳು ಸ್ವಸ್ತ್ಯಯನ ಕರ್ಮದ ಲ್ಲಿ ಅವಶಿಷ್ಟವಾಗಿಯೂ ಸರ್ವೋತ್ಪಾತಶಮನವಾಗಿಯೂ ಇರುವ ಶಾಂತ್ಯುದಕವನ್ನು ತೆಗೆದುಕೊಂಡು ಮಹಾರಾಜನಾದ ಹರಿಶ್ಚಂದ್ರನ ಬಳಿಗೂ ಶೈಬ್ಯೆಯ ಬಳಿಗೂ ನನ್ನನ್ನು ಕಳುಹಿಸಿದರು.

ಪ್ರತೀಹಾರಿ—(ಪ್ರವೇಶಿಸಿ) ಇತ್ತ ಬಿಜಮಾಡಬೇಕು.

ಋಷಿ—(ಸಮೀಪಕ್ಕೆ ಬಂದು) ಮಹಾರಾಜನೆ! ನಿನಗೆ ಸ್ವಸ್ತಿಯಾಗಲಿ.
ರಾಜ—(ಬೇಗನೆ ಎದ್ದು) ಪೂಜ್ಯರೆ! ನಮಸ್ಕರಿಸುವೆನು.
ಶೈಬ್ಯೆ—ಪೂಜ್ಯರೆ! ವಂದಿಸುವೆನು.
ತಾಪಸ—ಎಲೈ ರಾಜನೆ! ಜಯಶೀಲನಾಗು—ಎಲೌ ಪೂಜ್ಯಳೆ! ವೀರ ಮಾತೆಯಾಗು.
ರಾಜ—(ತ್ವರೆಯಿಂದ) ಎಲ್ಲಿ ಪೀಠವೆಲ್ಲಿ ?
ಪ್ರತೀಹಾರಿ—(ಪೀಠವನ್ನು ತರುವಳು)
ರಾಜ—ಪೂಜ್ಯರೆ! ಇದೊ ಪೀಠವು; ಇಲ್ಲಿ ಕುಳಿತುಕೊಳ್ಳಬೇಕು.
(ಎಲ್ಲರು ಕುಳಿತುಕೊಳ್ಳುವರು)
ರಾಜ—ಎಲೆ ಹೇಮಪ್ರಭೆ! ಬಾಗಿಲಲ್ಲಿ ಕಾದಿರು ಹೋಗು.
ಪ್ರತೀಹಾರಿ—ಅಪ್ಪಣೆ (ಎಂದು ಹೋಗುವಳು)
ತಾಪಸ—ಎಲೈ ರಾಜನೆ! ರಾತ್ರಿ ಜಾಗರಣಾನಂತರದಲ್ಲಿ ಸಪತ್ನೀಕನಾದ ನಿನ್ನ ಅಭಿಷೇಚನಕ್ಕಾಗಿ ಪೂಜ್ಯರಾದ ಕುಲಪತಿಗಳು ಆಶೀರ್ವಚನಗಳಿಂದತಿಶಯಪ್ರಭಾವವನ್ನು ಪಡೆದ ಸ್ವಸ್ತ್ಯಯನ ಕ್ರಿಯಾಶೇಷವಾದ ಈ ಶಾಂತ್ಯುದಕವನ್ನು ಕಳುಹಿಸಿರುವರು.
ರಾಜ—(ಸಂತೋಷದಿಂದ ಬದ್ಧಾಂಜಲಿಯಾಗಿ) ಮಹಾಪ್ರಸಾದ.
ತಾಪಸ—ವೃ॥ ಕಲುಷಪ್ರಧ್ವಂಸಿ ಮಂತ್ರಪ್ರಪಠನಪರಿಪೂತಂ ಪರಂ
ಕ್ಷತ್ರತೇಜೋ । ಬಲದಂ ಮೇಣುದ್ಯದಾಪತ್ಕುಲಶಮನವಿ
ಧಾನಕ್ರಿಯಾಶೇಷಮಿಾ ಮಂ ॥ ಗಳತೋಯಂ ಭೂರಿಭೂತಿಪ್ರ
ದಮೆನಿಸಿವಿಪದ್ವ್ರಾತಮಂ ಘಾತಿಸುತ್ತ । ಗ್ಗಳಮಪ್ಪಾನಂ
ದಮಂ ನೀಡುಗೆ ನಿನಗೆ ಸಹಸ್ರಾಂಶುವಂಶಾಬ್ಧಿಚಂದ್ರಾ ॥
(ಎಂದು ಅಭಿಷೇಕಿಸುವನು)
ರಾಜ—(ಸ್ಪರ್ಶಸುಖವನ್ನು ಅಭಿನಯಿಸಿ)

ಕಂ॥ ವಸುಮತ್ಕುಲದ ನೃಪರ್ ಯು ।
ತ್ಪ್ರಸಾದಸಾಮರ್ಥ್ಯದಿಂದೆ ತಲೆಯೆತ್ತಿದರೀ ॥
ವಸುಧೆಯೊಳಾ ನೃಪಬೀಜ ।
ಪ್ರಸವಾಂಕುರ ಕಾರಣೈಕತೀರ್ಥಮಿದಲ್ತೆ ॥

ತಾಪಸ-ಪೂಜ್ಯಳೆ! ನೀನೂ ಕುಲಪತಿಗಳ ಅಜ್ಞಾನುಸಾರವಾಗಿ ಗೃಹದೇವತೆಗಳಿಗೂ ಬ್ರಾಹ್ಮಣರಿಗೂ ಪೂಜಾಸಂಭಾರಗಳನ್ನು ಸಿದ್ಧಪಡಿಸು.

ಶೈಬ್ಯೆ-(ಕೈಗಳನ್ನು ಮುಗಿದು) ಪೂಜ್ಯರು ಅಪ್ಪಣೆ ಕೊಡಿಸಿದಂತೆ.

ತಾಪಸ-ಎಲೈ ಮಹಾರಾಜನೆ! ನಿನಗೆ ಮಂಗಳವಾಗಲಿ. ಇನ್ನು ನಾನು ವಿವಿಧವಿಧಾನಗಳನ್ನು ಆರಂಭಿಸಿರುವ ಕುಲಪತಿಗಳನ್ನು ಸಂಭಾವಿಸಲು ಹೋಗಿಬರುವೆನು. (ಎಂದು ಹೋಗುವನು)

ಶೈಬ್ಯೆ-(ತಲೆವಾಗಿ, ರಾಜನಿಗೆ ಮರೆಯಾಗಿ) ಎಲೆ ಚಾರುಮತಿ! ಆರ್ಯಪುತ್ರನ ರಾತ್ರಿಜಾಗರಣವು ಪೂಜ್ಯರಾದ ಕುಲಪತಿಗಳ ಆಜ್ಞೆಯಿಂದಾದದ್ದು. ಅದನ್ನು ತಿಳಿಯದೆ ದುರಾಲೋಚನೆಯನ್ನು ಮಾಡಿದ ಈ ದುಷ್ಟಹೃದಯದಿಂದ ದುರ್ಜನೆಯಾದೆನಲ್ಲ! ಏನು ಮಾಡಲಿ? ಒಳ್ಳೇದು! ಹೀಗೆ ಮಾಡುವೆನು. (ಪ್ರಕಾಶ; ಕೈಮುಗಿದು) ಆರ್ಯಪುತ್ರನೆ! ಪ್ರಸನ್ನನಾಗು.

ರಾಜ-(ಅನುರಾಗದಿಂದ ಕೂಡಿ)

ವೃ॥ ಇನಿಯಳೆ ಎನ್ನೊಳಿಲ್ಲದಪರಾಧವನಂತಿರೆ ಕಲ್ಪಿಸುತ್ತೆ ದು। ಮ್ಮ
ನವೆರಸಿದ್ದರ್ಮಿಾ ಪರಿಯೊಳೆನ್ನನೆ ಸಂತವಿಸುತ್ತ ಮಿರ್ಪ್ಪನಿ॥
ನ್ನನುನಯಮಿಂತಿದಂ ಪತಿಕರಿಪ್ಪೊಡೆ ಕಂಠದೆ ಹಾರಮಂ ಕ
ದಂ । ಪಿನೊಳೆ ವಿಚಿತ್ರಪತ್ರಚಯಮಂ ನಿನಗಾಂ ವಿರಚಿಪ್ಪೆ
ನೊಲ್ಮೆಯಿಂ ॥

ಶೈಬ್ಯೆ—(ಲಜ್ಜೆಯನ್ನಭಿನಯಿಸುವಳು)
ರಾಜ--(ಹಾಗೆ ಸಿಂಗರಿಸುತ್ತಾ)

ವೃ॥ ಬೆಮರುಂ ರೋಮಾಂಚಮುಂ ನಿನ್ನಯ ಕದಪಿನೊಳುಣ್ಮಿತ್ತು
ಮೇಣೆನ್ನ ಕೈ ಕಂ। ಪಮನಾಂತತ್ತಂತರಿಂದೀ ಯುಭಯವಿಧಿ
ವೃಥಾರಂಭಮಾಯಾಸಮಾತ್ರಂ॥ ರಮಣೀಕಂಠಾರ್ಪಿತಂ ಹಾ
ರಮಿದು ಮುರಸಿಜಾತಾಗ್ರಕಲ್ಲೋಲಿತಂ ತಾ। ನಮರ್ದಿಕ್ಕ್ಯಾಂ
ಮತ್ಕರಾಸಂಗದೊಳಗೊದವಿದಾಕಂಪಮಂ ಮಾಣದಿನ್ನುಂ ॥

ಶೈಬ್ಯೆ—ಆರ್ಯಪುತ್ರನೆ! ಪೂಜ್ಯರಾದ ಕುಲಪತಿಗಳು ಅಪ್ಪಣೆ ಕೊಡಿಸಿದುದನ್ನು ನೆರವೇರಿಸುವುದಕ್ಕೆ ಹೋಗುವೆನು.

ರಾಜ—ದೇವಿ! ಹಾಗೆಯೆ ಮಾಡು.

(ದೇವಿಯೂ ಚಾರುಮತಿಯೂ ಹೊರಟುಹೋಗುವರು)

ರಾಜ—ಎಲೈ ಮಿತ್ರನೆ! ಕಳವಳಿಸುವ ಈ ಮನಸ್ಸನ್ನು ಈಗ ಹ್ಯಾಗೆತಾನೆ ವಿನೋದಪಡಿಸಲಿ?

ವಿದೂ—ನೀನು ದೇವಿಯ ಸಂಬಂಧಿಯಾದ ಕಥೆಯಿಂದ ಮನಸ್ಸನ್ನು ಯಾಕೆ ವಿನೋದಪಡಿಸಬಾರದು? ನಾನಾದರೊ ಭೋಜನ ಕಥೆಯಿಂದ ನನ್ನ ಮನಸ್ಸನ್ನು ವಿನೋದಪಡಿಸುವೆನು.

(ವನೇಚರನು ಪ್ರವೇಶಿಸುವನು)

ವನೇಚರ—ಬಡೆಯನಿಗೆ ಗೆಲವಾಗಲಿ ಗೆಲವಾಗಲಿ.

ರಗಳೆ॥ ಇದೊ ನೀಳ್ದ ಮುಸುಡಿನಿಂ ಪೋಳ್ದ ಕೊನ್ನಾರೆಯೊಳ್ ।
ಪುದಿದ ಸೌಸವಮ ಸೂಸುವ ಸುಯ್ಲ ಗಾಳಿಯೊಳ್ ॥
ಪರೆದರೆಗಡಿದ ಸಿತಕಶೇರುಕವ್ಯಾಜದೊಳ್ ।
ಪರವಿಜಯಯಶವನೆರಚುತ್ತ ದಶದಿಶೆಗಳೊಳ್ ॥
ಕಲ್ಮಳೆಯ ಕರೆವ ಪೊಸಮುಗಿಲವೊಲ್ ತೋರುತಂ ।

ಗುಲ್ಮದ್ರುಮಾಳಿಯಂ ಸೋಂಕಿಸಿಂ ಕೆಡಪುತಂ ‖
ಪಿರಿದೆನಿಸಿ ಪೊರಮಡುವ ಘುರುಘುರಾಶಬ್ದದಿಂ ।
ಪರಿವ ಸಿಂಗಗಳ ತೀವಿದ ಘನಾರಾವದಿಂ ‖
ದೊಗೆದ ಬಲ್ಮಳಿಸಿನಿಂ ನೆಗಪುತೆ ಕೊಡಂಕೆಯಂ ।
ನೆಗಳುತೆ ಸಟಾಕಲಾಪದೆ ತಟಿಚ್ಛಂಕೆಯಂ ‖
ಮುಳಿಸು ಬೆಂಕಿಯು ಜಾಲೆಯುದೆಸಿಪ್ಪ ಸಂದೆಗಂ ।
ಗೊಳಿಪ ಜಿಹ್ವೆಯ ಚಾಲಿಪುದರಿಂದ ಮಾವಗಂ ‖
ಮೊಗದಲ್ಲಿ ತಗುಳ್ದ ಕಾಳ್ಕಿಚ್ಚನುಗ್ಗಳಿಪವೊಲ್ ।
ಬಿಗುರ್ವಡಿಸಿ ನೋಳ್ಪಗ್ಗ ಹರಿನೀಲಮಣಿಯವೊಲ್ ‖
ಮತ್ತಮಂಜನತಮಾಲಾಸಿವಲ್ಲರಿಯವೊಲ್ ।
ಪೆತ್ತಿರ್ಪ ಮೆಯ್ಯಬ್ಣದಿಂದೆ ಸಂಗಡಿಸಿ ಬಲ್ ‖
ಮಿರುಪ ಕೆಂಗಣ್ಣಿಕ್ಕುತಂ ಮಷೀಮಾಂಸಲಂ ।
ಮೆರೆಗುಂ ಸ್ಫುಲಿಂಗಶೇಷದವಾಗ್ನಿವೊಲ್ ವಲಂ ।
ಅಗಿತಕಗಿದುಡುಗಿದ ಮೃಣಾಳದಂಡದ ತೆರದೆ ।
ಜಗಜಗಿಪ ದಾಡೆಯಾಂತತಿಕರಾಳಾನನದೆ ‖
ಚಿರಕಾಲದಿಂದೆ ಸಂಗಡಿಸಿದ್ದ ವೈರದಿಂ ।
ಕೆರಳ್ದಣಲೊಳಡಸಿ ಕುಕ್ಕಿರ್ದ ಚಂದ್ರಬಿಂಬದಿಂ ‖
ಪೊರಮಟ್ಟ ತತ್ಕಲಾಯುಗ್ಮವೆಂಬಂದದಿಂ ।
ದರರೆ ಕಣ್ಗೊಳಿಸುತ್ತೆ ಲಯತಿಮಿರದಂದದಿಂ ‖
ಮತ್ತಮಿಳೆಯಿಳುಪಿ ನೆಗೆದಾದಿಕಿಟಿವೊಲ್ ವಲಂ ।
ಪೆತ್ತಿತು ಮೃಗವ್ಯಭೂಮಿಯ ಸೊಕ್ಕಿದೆಕ್ಕಲಂ ‖

ಅದರಿಂದ ಇನ್ನು ದೇವನ ಚಿತ್ತವಿದ್ದಂತೆ ನಡೆಯಿಸತಕ್ಕದ್ದು. ನಾನೂ ಅಲ್ಲಿಗೆ ಹೋಗುವೆನು. (ಎಂದು ಹೋಗುವನು)

ರಾಜ-(ಸಂತಸದಿಂದ) ತಕ್ಕ ವಿನೋದಸ್ಥಾನವು ಈಗಲೀಗ ದೊರೆಯಿತು.

ವಿದೂ-(ಕೋಪದಿಂದ) ಎಲೈ ಮಿತ್ರನೆ! ಹಳ್ಳ ತಿಟ್ಟು ಮುಳ್ಳು ಕಲ್ಲು ಮೊದಲಾದವುಗಳಿಂದ ದುರ್ಗಮವಾದ ಕಾಡುಗಳನ್ನು ಹತ್ತಿಯಿಳಿದು ಹಸಿವು ತೃಷೆಗಳಿಂದೆ ಕಂಗೆಟ್ಟು ಸಂಕಟಪಡುವ ಮೃಗಬೇಟೆಯು ಕೂಡ ನಿನಗೆ ವಿನೋದಸ್ಥಾನವಾದಮೇಲೆ ನಿನಗೆ ಇನ್ನು ಯಾವದುತಾನೆ ಆಯಾಸಕರವಾದ ಸ್ಥಾನವಾಗುವುದು ?

ರಾಜ—ಮಿತ್ರನೆ! ರಾಜರಿಗೆ ಮಿಗಬೇಟೆಯೆಂಬುದು ಕೇವಲ ಉಪಕಾರಿಯಾದದ್ದು. ಹಾಗೆಯೆ ಸರಿ.

ವೃ|| ಬಿನದಮನಾಗಿಕುಂ ಬೆಗಡನೊಂದಿವ ಚಿತ್ತಕೆ ಮೇಣ್ ಸ್ಥಿರ
ತ್ವಮಂ | ತೊನೆವುದರಲ್ಲಿ ಮಾಡುವುದು ದೇಹದೆ ಲಾಘವ
ಮಂ ನಿಮಿರ್ಚುಗುಂ || ಜನಿಯಿಪುದುಚ್ಚಹಕ್ಕೆ ಮತಿಯಂ
ನೃಪರ್ಗಾಹವಕರ್ಮಯೋಗ್ಯಮೆಂ | ದೆನಿಸಿದ ಬೇಂಟೆಯುಂ
ವ್ಯಸನಮೆಂದುಸಿರ್ಗುಂ ಜನಮೇನನೆಂದಪೆಂ ||

(ಎಂದು ಎಲ್ಲರು ಹೊರಟುಹೋಗುವರು)

ಪ್ರಥಮಾಂಕಂ ಸಮಾಪ್ತಂ.

ಎರಡನೆಯ ಅಂಕ.

(ತೆರೆಯುಲ್ಲಿ) ಎಲೆ ಎಲೆ ವರಾಹಾನ್ವೇಷಿಗಳೇ—

ವೃ॥ ಇದೊ ಕದಡಿತ್ತು ಕೋಳ್ಕೆಸರನಬ್ಜಿನಿಯಂ ಮುರಿದತ್ತು ಮೆ
ಲ್ದದಿಂ । ತಿದೊ ಗುರುಗುಂದ್ರಮಂ ತಗುಳ್ದಗುಳ್ತುದು
ಮುಸ್ತೆಯ ಠಾವನತ್ತ್ಯೆ ॥ ದಿದುದದೊ ಉತ್ಕಶೇರುಗೆಡೆವಂ
ದುದುವಂದುದು ಪೋಯ್ತು ಪೋಯ್ತದೆಂ । ದೊದರ್ದು ಕಿರಾ
ತರಾರಯೆ ವನಾಂತಮ ಪೊಕ್ಕುದು ಸೊಕ್ಕಿದೆಕ್ಕಲಂ ॥

ಆದುದರಿಂದ ವನದ ಸುತ್ತಲೂ ಮುತ್ತಿಗೆ ಹಾಕಿಹಾಕಿ.

ವೃ॥ ಬಲೆಯೊರ್ಗಂ ಜಾಲಿಕರ್ ಬೀಸುಗೆ ಪೊದರ್ಗಳೊಳಾ ಶೌನಿಕರ್
ನಾಯ್ಗಳಂ ಶೃಂ । ಖಲೆಯುಂ ಗೋಣತ್ತಣಿಂದಂ ಕಳಚೆ ಬಿಡುಗೆ
ನೀಡುಂ ಪೊವಳ್ದತ್ತಲುಂ ನೇ ॥ ಣ್ದಳೆದಿರ್ದು ಸಾದಿಗಳ್ ತೀ
ವ್ರಗೆ ಬನದೆಡೆಯುಂ ಶ್ರಾಂತವಾಹಕ್ಕೆಳೆತ್ತಂ । ಬಲುಹಿಂದಾರ
ಯ್ಗೆ ಕಾಲಪ್ರಭುಮುಹಿಪಚರರ್ ದಂಡಿಗಳ್ ಕಾಡನೆಲ್ಲಂ ॥

(ಆನಂತರಂ ಭೀಕರವೇಷನಾದ ವಿಘ್ನಪತಿಯು ಸಂಭ್ರಾಂತನಾಗಿ ಪ್ರವೇ
ಶಿಸುವನು)

ವಿಘ್ನ—(ಶಂಕೆಗೂಡಿ)

ವೃ॥ ಹರನ ಸಮಾಧಿಗಂ ಬಳಿಕೆ ದಕ್ಷನ ಯಾಗಕಮದ್ರಿಕನ್ಯಕಾ ।
ಗಿರಿಶರ ಕೇಳಿಗಂ ಬಗೆಯೆ ವಿಘ್ನಮನಾಗಿಸಿ ಕೋರಿದಾ ಸುರಾ॥
ಸುರನರಲೋಕ ಸಂಭೃತ ಹಿತವ್ಯವಸಾಯ ವಿಶೇಷಸಿದ್ಧಿಸಂ ।
ಹರಣವಿಲಾಸ ಕೌತುಕಪರಂ ಪರಮಂ ಬಲಶಾಲಿವಿಘ್ನಮಾಂ ॥

ಕಂ॥ ಹರಿಹರ ವಿಧಿಗಳ್ಗರಿದ।
ಪ್ಪುರುವಿದ್ಯಾತ್ರಯಮನುಗ್ರತಪದಿಂ ಗಳಿಪೀ॥
ಪರಮತಪಸ್ವಿಯಿನಿಂದು।
ದ್ಧರಿಪೆಂ ಧರೆಯಂ ವರಾಹರೂಪಿನ ಹರಿವೊಲ್॥

(ಹಿಂದೆನೋಡಿ ಭಯದಿಂದಕೂಡಿ)

ಆಹ! ಲೋಕದ ಕಾರ್ಯಕ್ಕೆ ಹಗೆಯೆನಿಸಿ ಪರರ ಪೌರುಷಕ್ಕೆ ವಿಘ್ನವನೆಸಗುವಲ್ಲಿ ಬಹು ವಿಚಕ್ಷಣನೆನಿಸಿದ ನನ್ನ ಸಾಹಸಂಗಳು ಶರೀರಾಪೇಕ್ಷೆಯನ್ನು ಬಿಟ್ಟಿರುವುವು. ಹ್ಯಾಗೆಂದರೆ ಕಾಲನ ದಂಷ್ಟ್ರಾಂತರಾಳದಲ್ಲಿ ಸಿಕ್ಕದಂತಿದ್ದ ನಾನು ಬಾಣದ ಗುರಿಯನ್ನು ಅತಿಪ್ರಯಾಸದಿಂದ ತಪ್ಪಿಸಿಕೊಂಡು ಮಹಾರಾಜನಾದ ಹರಿಶ್ಚಂದ್ರನನ್ನು ಈ ಅರಣ್ಯಪ್ರದೇಶಕ್ಕೆ ಸೆಳೆತಂದೆನು. ಮುಂದೆ ಈತನನ್ನು ವಿಶ್ವಾಮಿತ್ರನ ಆಶ್ರಮವನ್ನು ಸೇರಿಸುವೆನು. ಏತಕ್ಕೆಂದರೆ ಉಗ್ರತಪೋಬಲದಿಂದ ಕ್ಷತ್ರಿಯನಾಗಿದ್ದು ವೊನ್ನೆತಾನೆ ಬ್ರಾಹ್ಮಣನೆನಿಸಿಕೊಂಡು ಚಂಡಾಲನಿಂದ ಯಜ್ಞವನ್ನು ಮಾಡಿಸಿ ಮತ್ತು ಪ್ರತಿಸೃಷ್ಟಿಯನ್ನು ಮಾಡುವ ವಿಷಯದಲ್ಲಿ ಪ್ರಥಮಪರಮೇಷ್ಠಿಯಾಗಿ ಮೆರೆವ ವಿಶ್ವಾಮಿತ್ರನು ಗುಣತ್ರಯಾತ್ಮಕವಾದ ಸೃಷ್ಟಿಸ್ಥಿತಿಸಂಹಾರಕಾರಿಗಳಾದ ವಿದ್ಯೆಗಳ ಸಿದ್ಧಿಗಾಗಿ ಅಸಾಧ್ಯಕರ್ಮವನ್ನು ಆರಂಭಿಸಿರುವನು.

ವೃ॥ ಧರೆಯುಂ ಸೃಷ್ಟಿಪನಬ್ಜಜಂ ಸೃಜಿಯಿಸಂ ಕಂಜಾಕ್ಷನುಂ
ತ್ರ್ಯಕ್ಷನುಂ। ಪೊರವಂ ಲೋಕಮನೆಲ್ಲ ಶೌರಿ ಪೊರೆಯಂ
ವಾಗೀಶನುಂ ಭರ್ಗನುಂ॥ ಹರನೊರ್ವಂ ತವಿಪಂ ಜಗತ್ರಯಮ
ನಾರಯ್ಯಲ್ಕೆ ತಾಸಿಂತು ಮೂ। ವರ ಕೃತ್ಯಂಗಳದೆಂತು
ಟೊರ್ವನೊಳೆ ತಾಳ್ಗುಂ ಸಿದ್ಧಿಯಂ ನೋಳ್ಪೆನಾಂ॥

(ಚಿಂತಿಸಿ) ಬಂದುಪಕ್ಷಕ್ಕೆ ಪರಮನೈಷ್ಠಿಕನಾದ ಈ ಮುನಿಯಲ್ಲಿ ಏನುತಾನೆ ಎಣಿಸಲಾಗದು. ಆದರೆ ಸ್ವಭಾವವಾಗಿ ಮುನಿಗಳಿಗೆ ಮುನಿಸು ಸುಲಭತರವಾದುದರಿಂದ ಶ್ರೇಯಸ್ಸಿಗೆ ಹಗೆಯಾದ ಕಾಮ ಕ್ರೋಧಗಳ ವೃತ್ತಿಯನ್ನು ಆಶ್ರಯಿಸಿ ಇದನ್ನು ಉಪಕ್ರಮಿಸಿ ದೆನು. ಈ ವಿಷಯದಲ್ಲಿ ಫಲಿಸುವದೇನೊ ನಾನು ಕಾಣೆ.

(ತೆರೆಯಲ್ಲಿ)

ಕಂ॥ ಪುಗಲರಿದಾದಡವಿಯನಾಂ।
ಪುಗುತಂ ಮರೆಯಾದೆ ನೆಂವನೇಗೈದಪನೀ॥
ಜಗತೀಪತಿಯೆಂದೆನುತಂ।
ಮಿಗೆ ಬಗೆಯೊಳ್ ಸೊಕ್ಕಿದೆಕ್ಕಲನೆ ನಿಲ್ಲೀಗಳ್ ॥

ವೃ॥ ತಳೆದುದದರಂತೆವೊಲ್ ಕ್ಷಣವೆ ಕಾಣಿಸಿ ಕಾಣಿಸದಿರ್ಪ ಮಾ
ಯೆಯುಂ। ಸೆಳೆದೆ ಕುತೂಹಲಂಗೊಳಿಸಿ ನಿರ್ನೆರವೆನ್ನನಿನಿತ್ತು
ದೂರವಿಾ ॥ ಗಳುಮೆಲೆ ದುಷ್ಟಮನ್ನಯನವಾರ್ಗವನೈದಿದೆ
ಯಾದೊಡಿನ್ನು ಕೋ। ಮಳತರವಾದುವಂ ಮಗುಳೆ ಮ
ರ್ದಿಸೆ ನೀಂ ನಳಿನೀವನಂಗಳಂ ॥

ವಿಷ್ಣು—(ಕೇಳಿ ಸಂತೋಷದಿಂದ) ಆಹ! ಇದೊ ರಾಯನು ಸವಿಾಪದಲ್ಲಿಯೇ ಇರುವನು. ಆದುದರಿಂದ ಇಲ್ಲಿಂದ ಪೊರಮಟ್ಟು ಆ ಮಾಯೆಯನ್ನೇ ತಳೆದು ನನ್ನ ರೂಪನ್ನು ತೋರ್ಪಡಿಸುವೆನು.

(ಬೇಗನೆ ಓಡಿಹೋಗುವನು)

ಇದು ಶುದ್ಧ ವಿಷ್ಕಂಭವು.

(ಅನಂತರ ಹಂದಿಯು ಬೆನ್ನಟುವದನ್ನು ಅಭಿನಯಿಸುತ್ತ ಧನುರ್ಧಾರಿಯಾದ ರಾಜನೂ ಸೂತನೂ ಬರುವರು.)

ರಾಜ-"ತಳೆದುದರಂತೆವೊಲ್" (ಎಂಬ ಪದ್ಯವನ್ನು ಪುನಃ ಹೇಳುವನು)
ಸಾರಥಿ—(ಮುಂದೆನೋಡಿ ಸಂತೋಷದಿಂದ) ಆರ್ಯನೆ! ಆರ್ಯನೆ! ಆ ಹಂದಿಯು ಸಮೀಪದಲ್ಲಿಯೇ ಇರುವಹಾಗಿದೆ ನೋಡು.

ವೃ॥ ಇದೊ ಸಮೀಪಾಗಳೊಕ್ಕ ಬಿಸದಿಂ ಪುದಿದಿರ್ಪ್ಪ ವನೋರ್ವಿ ಕಾ
ಣ್ಬುದಿಂ । ತಿದೊ ಕದಡಿರ್ದ್ದ ನೀರೊರೆತೆಗಳ್ ಸರಸೀತಟದ
ಲ್ಲಿ ತೋರ್ಕ್ಕುಮಿಂ ॥ ತಿದೊ ಪಿರಿದುಂ ಶ್ರಮೋದ್ಗಳಿತಫೇನದೆ
ನಾಂದ ಗರುಂಕೆದಾಣಮಿಂ। ತಿದುದರ ಸುಯ್ಗಳಿಂ ಬಲಿದ ಮು
ಸ್ತೆಯು ಕಂಪ್ರೊಳಕೊಂಡ ಮಾರುತಂ ॥

(ಚನ್ನಾಗಿನೋಡಿ) ಆರ್ಯನೆ! ಆರ್ಯನೆ! ಇದೊ ನೋಡು.

ವೃ॥ ಭರದಿಂ ಕಿಳ್ತಂತ ಕಂದಾಂಕುರದ ತರಳನಾಳಾಬ್ಜ ಮೊಂದಾ
ಸ್ಯದೊಳ್ ತ । ಳ್ತಿರೆ ಗೂಢಂ ನಾಭಿಪದ್ಮಂ ಬೆಳೆದು ವದನಮಂ
ಪೊರ್ದಿದಂತಿರ್ಪ್ಪ ಲೀಲಾ ॥ ಕಿರಿವೊಲ್ ದಂಷ್ಟ್ರಾಗ್ರಲಗ್ನೋ
ರ್ವಿಯ ಮುಗುಳೆ ಕರುತ್ತೆತ್ತಲಾಕಾಂಕ್ಷಿಕುಂ ನಿರ್ನಿರಮಿಾ ಲೀ
ಲಾಮುಹುರ್ವಲ್ಗಿತಪೃಥುಲತರಗ್ರೀವದೇಹಂ ವರಾಹಂ ॥

ರಾಜ-(ಸಂತೋಷದಿಂದ ನೋಡಿ) ಆಹ! ಇದೊ ನನಗೆ ಇದಿರಾದುದು (ಎಂದು ಶರಸಂಧಾನವನ್ನು ಅಭಿನಯಿಸುವನು.)
ಸೂತ—(ಕೌತುಕದಿಂದ ನೋಡಿ) ಎಲೈ! ಆಯುಷ್ಮಂತನೆ ಇದೊ ನೋಡು.

ವೃ॥ ಬಿಂಕದೊಳೈದಿ ಮೇಣ್ತಿರುಗಿ ಭೋಂಕನೆ ಕಣ್ಗೆಡೆಯಾಗಿ ಭೀ
ತಿಯಿಂ । ಸಂಕುಚಿತಾತ್ಮಪೃಷ್ಠಮನಿರುಂಕಿಸಿ ನೀಳ್ದರೆ ಮುಂ
ತಣಂಘ್ರಿ ಸುಗ್ಲಿಯಿಂ ಕವಲಾದ ಬಾಯ ಕಡೆಯಿಂದುದಿರುತ್ತಿ
ರೆನುರ್ಗ್ಗದಬ್ಜಸೂ । ತ್ರಾಂಕುರಮೊಪ್ಪಿಕುಂ ನಿನಗೆ ದಾಡೆಯ
ನಾಣ್ಕಿಡೆ ನಮ್ರತಾನನಂ ॥

ರಾಜ—(ಬಾಣವನ್ನು ಬಿಟ್ಟಂತೆ ಅಭಿನಯಿಸಿ ಸಮೀಪಕ್ಕೆ ಹೋಗಿ ಎಲ್ಲಾ ಕಡೆಯನ್ನು ನೋಡಿ) ಅಯ್ಯೋ! ಮಾಯವಾದ ಈ ಮೃಗದಲ್ಲಿ ಸಮಯವರಿಯದೆ ಬಾಣವನ್ನು ಬಿಟ್ಟೆನಲ್ಲ. ಮಾಡತಕ್ಕದ್ದೇನು?

ವೃ॥ ಕ್ಷಣದೊಳಡಂಗುಗುಂ ಬಳಿಕೆ ಪೊದ್ದುಗು ವೀಕ್ಷಣಗೋ
ಚರತ್ವಮಂ | ಕ್ಷಣದೊಳೆ ದೂರಮಪ್ಪುದೆಡೆಯೊಳ್ ಸುಳಿಗುಂ
ಪಲವುಂಬರಂ ಸಮಂ ॥ ತೆಣಿಸಿದೊಡತ್ತಮಿತ್ತ ಕೆಲದೊಳ್
ಬಲದೊಳ್ ಸಲೆಸುತ್ತಮಾಟಿಕುಂ | ಕ್ಷಣರುಚಿಯಂತೆ ಚಂ
ಚಲಮೆನಿಪ್ಪುದನಾಂ ಗುರಿಗೈವೆನೆಂತಿದಂ ॥

(ಚೆನ್ನಾಗಿ ನೋಡಿ; ದೂರದಲ್ಲಿ ಕಂಡು ಸಂತೋಷದಿಂದ) ಇದೊ ಈ

ಕಗ್ಗಾಡನ್ನು ಬಿಟ್ಟು ನಿರ್ಮಲವಾದ ಭೂಮಿಯನ್ನು ಹತ್ತಿತು. ಸೂತನೆ! ಸೂತನೆ! ಕುದುರೆಗಳನ್ನು ಬೇಗನೆ ಪ್ರೇರಿಸು. ಈಗಿನ್ನೆಲ್ಲಿಹೋದೀತು ನೋಡುವೆನು.

ಸೂತ—(ಹಾಗೆಯೆ ಮಾಡಿ ರಥವೇಗವನ್ನು ಅಭಿನಯಿಸಿ) ಆಯುಷ್ಮಂತನೆ! ನೋಡು ನೋಡು.

ವೃ॥ ಜವದಿಂದಂ ಗೆಲ್ದು ಧೂಳಿಂದೊಡವೆರಸಿದ ಬೆಂಗಾಳಿಯಂ ಲ
ಕ್ಷ್ಯದತ್ತಂ ● ಗವಿಪೆನ್ನೀ ಚಿತ್ತಮಂ ತಳೊತ್ತಡನೆ ಪರಿವ ನಿ
ಷ್ಕಂಪಕೇತುಚ್ಚದಾಗ್ರ ॥ ಪ್ರವಿಮುಷ್ಟಾಂಭೋದಮೀ ನಿನ್ನ
ಯ ಕನಕವರಥಂ ಸಮಂತೀಗಳಾಯಾ | ಪವಣಂಬೆತ್ತಿ
ರ್ಪ ದೇಶಂಗಳೊಳರಸ ಭವದ್ಬಾಣದಂತೋವೊ ಬೀಳ್ಗುಂ॥

ರಾಜ—(ಆಶ್ಚರ್ಯದಿಂದ ನೋಡಿ) ಹಾಗೆಯೆಸರಿ!

ವೃ॥ ಪವನಂ ನಿರ್ಜಿತನಾಗೆ ವೇಗದೆ ಖುರಾಗ್ರಂ ಮುಟ್ಟೆ ಬಾನಂ
ಮಹಾ | ರ್ಣವಮಂ ದಾಂಟುವವೊಲ್ ಸಮಂತು ಪರಿವುತ್ತಿ
ರ್ಪೀರಥಾಶ್ವಂಗಳಿಂ ॥ ಜವದಿಂ ಪಾಯ್ವನಗಿಂತಿದಚ್ಚರಿ ದಿನಾಧೀ
ಶಂಗೆ ಬೆಂಗೊಟ್ಟಮ | ರ್ಬುವೊಲೈದುತ್ತಿದೆ ದೂರಮಂ ಕಿಟ
ವಿನಿರ್ಭಿನ್ನಾಂಜನಶ್ಯಾಮಲಂ ॥

(ತೆರೆಯಲ್ಲಿ) ಆರ್ಯರೆ! ರಕ್ಷಿಸಿ. ರಕ್ಷಿಸಿ. ರಕ್ಷಕರಿಲ್ಲದೆ ಅನಾಥೆಯರಾದ ಈ ಮಂದಭಾಗ್ಯೆಯರನ್ನು ತಪ್ಪಿಲ್ಲದೆ ಅಗ್ನಿಯಲ್ಲಿ ಕೆಡಹುವನು. ಆದುದರಿಂದ ಆರ್ಯರೆ! ರಕ್ಷಿಸಿ. ರಕ್ಷಿಸಿ.

ರಾಜ—(ಕಿವಿಗೊಟ್ಟು) ಓಹೊ! ಇದೇನು? ಸ್ವಲ್ಪದೂರದಲ್ಲಿ ಭಯಪೀಡಿತೆಯರಾದ ಸ್ತ್ರೀಯರು ಗೋಳಿಡುವಂತೆ ಕೇಳಿಬರುವುದು. (ಆಶ್ಚರ್ಯದಿಂದ) ಹೋಹೊ! ಇದು ತಪೋವನವು. ಇಲ್ಲಿ ಇಂತಹ ದುರುಳರು ಇರುವುದೆಂದರೇನು? ಆಗಲಿ ಸಮೀಪಕ್ಕೆ ಹೋಗುವೆನು. (ಸಮೀಪಕ್ಕೆ ಹೋಗುವನು. ತೆರೆಯಲ್ಲಿ ಮೊದಲಂತೆ ಹೇಳುವರು)

ರಾಜ—(ಕೇಳಿ ಕೋಪಗೊಂಡು) ಎಲೌ ಭಯಾರ್ತೆಯರೆ! ಹೆದರಬೇಡಿ; ಹೆದರಬೇಡಿ. (ಕೋಪದಿಂದ) ಆಃ!

ವೃ ‖ ಆವನಿವಂ ಕಠೋರನತಿನಿರ್ದಯಮಾನಸನಾಚರಿಪ್ಪನೋ |
ಮೋಮೊತಪೋವನಕ್ಕುಚಿತಮಲ್ಲದಘೋರನೃಶಂಸಕರ್ಮಮಂ
ಈ ವಿಶಿಖಾಗ್ರದಿಂದವನ ಕಂಧರಮಂ ಪರಿದೆಲ್ಲಮಂಗಮಂ |
ಪಾವಕನೊಳ್ ಜ್ವಲಜ್ಝಷನೊಳಾನಿರದಾಗಿಪೆನಿಂದು ಹೋಮಮಂ ‖

(ಎಂದು ಮುಂದೆ ಹೋಗಿ ತೆರೆಯಕಡೆ ನೋಡಿ ಆಶ್ಚರ್ಯದಿಂದ) ಆಹ! ಇವನು ಯಾರು? ಅಗ್ನಿಮಧ್ಯದಲ್ಲಿ ಭಯಾರ್ತೆಯರಾಗಿ ಹಂಬಲಿಸುತ್ತ ಕುಳಿತಿರುವ ದಿವ್ಯರೂಪಿಣಿಯರಾದ ಮೂವರು ಸ್ತ್ರೀಯರಿಂದ ಕೂಡಿ ಹೋಮಸಾಧನಗಳೊಡನೆ ಅಗ್ನಿಶಾಲೆಯಲ್ಲಿ ಇರುವನು. ನಿಜವಾಗಿ ಇವನು ತಾಪಸವೇಷವನ್ನು ಧರಿಸಿದ ಪಾಷಂಡನಾಗಿರಬಹುದು.

(ಅನಂತರ ಹೋಮಮಾಡುವುದನ್ನು ಅಭಿನಯಿಸುತ ವಿಶ್ವಾಮಿತ್ರನೂ ಸ್ತ್ರೀರೂಪಿನ ಮೂರು ವಿದ್ಯೆಗಳೂ ಪ್ರವೇಶಿಸುವರು.)

(ವಿದ್ಯೆಗಳು ಸಂಭ್ರಾಂತೆಯರಂತೆ ಅಭಿನಯಿಸುತ್ತ ಮೊದಲಂತೆ ಕೂಗಿಡುವರು)

ವಿಶ್ವಾಮಿತ್ರ—(ಆಶ್ಚರ್ಯದಿಂದ) ಓಹೊ! ಇದೇನು? ಆಶ್ಚರ್ಯವಾಗಿದೆ!

ಪೃಥ್ವಿ—ವೃ ॥ ಉಪಾಂಶು ಮನುಪೂತಮಂ ಹವಿಯನಾಂತುಮಾದಂ
ತನೂ ¦ ನಪಾತಮಿದು ದಕ್ಷಿಣಾರ್ಚಿಯನೊಡರ್ಚದಿರ್ಕ್ಕುಗಂ
ಮಹಾ॥ತಪಸ್ಫುರಿತ ಸತ್ಕ್ರಿಯಾ ಬಲದಿ ನೈದಿಯುಂ ಸಾ
ರ್ಕೈಗೆಂ!ನ ಪಾಣಿವಶಮಾಗದಿದ್ದಪುದಿದೇಕೆ ವಿದ್ಯಾತ್ರಯಂ|

(ಎಂದು ಧ್ಯಾನಿಸುವಂತಭಿನಯಿಸುವನು.)

(ವಿದ್ಯೆಗಳು ಮೊದಲಂತೆ ಮೊರೆಯಿಡುವರು.)

ರಾಜ—(ಬೇಗನೆಬಂದು) ಭಯಾರ್ತೆಯರೆ! ಹೆದರಬೇಡಿ, ಹೆದರಬೇಡಿ. ಎಲವೋ ದುರಾತ್ಮನಾದ ಪಾಷಂಡಾಧಮನೆ! ನಿಲ್ಲುನಿಲ್ಲು. ಇದೇನು? ಪ್ರಚ್ಛನ್ನರಾಕ್ಷಸನಾದ ನಿನ್ನ ಮಾಯಾಪ್ರಪಂಚ? ಹಾಗೆಯೆ ಸರಿ.

ವೃ॥ ಉಡೆಯೊಳ್ ವಲ್ಕಲಮಕ್ಷಸೂತ್ರವಲಯಂ ಹಸ್ತಾಗ್ರದೊಳ್
ನೆತ್ತಿಯೊ[illegible] | ಜಡೆಗಳ್ ನೋಳ್ಪಡೆ ಶಾಂತಿದಾಂತಿವಡೆದಿರ್ಪ್ಪೀ
ವೇಷಮೇಂ ನಿಕ್ಕುವಂ ¦ ನುಡಿ ದುರ್ಮೇಧಸಧೂರ್ತ ಪೆಣ್ಗೊ
ಲೆಗೆ ನೀಂ ಡುಂ ಪೇಸದೀ ನಿನ್ನ ಕೀಳ್ | ನಡೆಯೇಂ ತಾವಕಕ
ರ್ಮಕಿಂದು ಫಲಮಂ ಸಾರ್ದಪ್ಪೆ ತಾಳ್ ತಕ್ಕುದಂ ॥

ವಿಶ್ವಾಮಿತ್ರ—(ಸಂವರಣವನ್ನು ಅಭಿನಯಿಸಿ ಕೋಪದಿಂದ)

ವೃ॥ ಶ್ರವಣಕಟೂಕ್ತಿ ಘಟ್ಟನದೆ ಪುಟ್ಟಿದ ಮಾಮಕ ರೋಷವನ್ಹಿ
ಯಂ | ಗವಿಸಿದ ಕಾಷ್ಠದಿಂದುರದೆ ಪೊತ್ತಿ ಸಮಾಧಿವಿಭೇದ
ವಾಯುವಿಂ॥ ದೆ ವಿಲಯವಾತಧೂತವಿಲಯಾಗ್ನಿಯ ಲೀಲೆಯ

ನಾಂತು ಮೂರುಮಂ । ಭುವನಮುನೊರ್ವ್ಮ ತುತ್ತುಗೊಳು
ವಾಸೆಯು ಪೂರಿಪುದಕ್ಕೆ ನಿಕ್ಕುವಂ ‖

ವಿದ್ಯೆಗಳು —(ಸಂತೋಷದಿಂದ) ನಮಗಿದು ಪ್ರಿಯವು. ನಮಗಿದು ಪ್ರಿಯವು. ಎಲೈ ಮಹಾರಾಜ ಹರಿಶ್ಚಂದ್ರನೆ! ವಿಜಯಿಸು. ವಿಜಯಿಸು.

(ಎಂದು ಹೋಗುವರು.)

ವಿಶ್ವಾಮಿತ್ರ—(ಕೋಪದಿಂದ) ಎಲಾ ದುರಾತ್ಮನಾದ ಹರಿಶ್ಚಂದ್ರನೆ! ನೀನು ನಮ್ಮ ಶ್ರೇಯಸ್ಸಿಗೆ ವಿಘ್ನಕಾರಿಯಾದೆಯಾ ? ಒಳ್ಳೇದು ! ನಿಲ್ಲೆಲಾ ಕ್ಷತ್ರಿಯಾಧಮನೆ! ನಿಲ್ಲು.

ಕಂ॥ ಹರಿಯಾಗು ಚಂದ್ರನಾಗೆಲೆ ।
ದುರುಳನೆ ಮೇಣ್ ಹರನೆ ಆಗು ವಿದ್ಯಾಕ್ಷತಿಯಿಂ ॥
ಮುರಿವೆನ್ನಯ ಕೋಪಾನಲ ।
ನುರುಬೆಗೆ ನೀನಿಂದು ಕಾಷ್ಠವೆಂದೆನಿಸೆಯ ಪೇಳ್ ॥

ಮತ್ತು ಎಲಾ ಮೂಢನೆ!

ವೃ॥ ಸ್ತ್ರೀಲೋಲಂ ಪಿರಿಮಂ ಕೃಪಾಢ್ಯನತಿಶಾಂತಂ ದಾಂತನಾಗಿ
ರ್ದೋರ್ದಡಂ!ಲೀಲಾರೂಢಸಮಾಧಿ ಭಂಗದೆ ಕರಂ ಭೀಷ್ಮಾನನಂ
ಶೂಲಿ ಪೂ॥ ಗೋಲಿಂದೆಚ್ಚಲರಂಬನಂ ಮುಳಿದದೇಗೆಯ್ದಂ ನಿ
ಟಾಲಾಕ್ಷಿಯಿಂ । ದೀ ಲೋಕೋದ್ಧತಕೌಶಿಕಂ ನಿನಗದಂ ತಾಂ
ಮಾಡದೇಂ ಮಾಣ್ಬನೇ ‖

ರಾಜ—(ಸಂಭ್ರಾಂತನಾಗಿ ಆತ್ಮಗತಂ) ಅಯ್ಯೋ! ಇವರು ಪೂಜ್ಯರಾದ ವಿಶ್ವಾಮಿತ್ರರೆ! ಆ ಸ್ತ್ರೀಯರು ಪೂಜ್ಯಗಳಾದ ವಿದ್ಯೆಗಳೆ! ಅವರ ಸಿದ್ಧಿಗಾಗಿ ಉಜ್ಜುಗಿಸಿದ ಇವರಿಗೆ ಪಾಪಿಯಾದ ನಾನು ವಿಘ್ನಕಾರಿ

ಯಾದೆನೆ! ಹೋ! ತೆಗೆ ತೆಗೆ! ಕುರುಡನಂತೆ ವಿಚಾರವಿಲ್ಲದೆ ನಾನು ಉರಿವ ಕಿಚ್ಚನ್ನು ಕಾಲ್ಗಳಿಂದ ಮೆಟ್ಟಿದವನಂತಾದೆನು.

ವಿಶ್ವಾಮಿತ್ರ—(ಕೋಪದಿಂದ)

ಕಂ॥ ಕರವಿದು ಶಾಪಂಗುಡಲಾ ।
ತುರಿಪುದು ಸಾಧನವಿನಾಶಭವಕೋಪದೆ ಮುಂ ॥
ಚಿರಕಾಲಮುಳಿದ ಕುಲಮಂ ।
ಸ್ಮರಿಸಿ ತುಡುಂಕುವುದು ಬಿಲ್ಲನೀ ಯೆಡದಕರಂ ॥

(ಎಂದು ಏಳುವನು.)

ರಾಜ—(ಭಯದಿಂದ) ಪೂಜ್ಯರೆ! ಅಭಿವಂದಿಸುವೆನು.

(ವಿಶ್ವಾಮಿತ್ರನು ಕೋಪವನ್ನು ಅಭಿನಯಿಸುವನು.)

ರಾಜ--(ಪುನಶ್ಚ ಅಡಿಗೆರಗಿ) ಪೂಜ್ಯರೆ! ಸೈರಿಸಿ. ಸೈರಿಸಿ. ಸ್ತ್ರೀಜನರ ಆರ್ತಪ್ರಲಾಪವೆಂದು ಮೋಸಹೋದ ನನ್ನ ಅಜ್ಞಾನಕೃತವನ್ನು ಕ್ಷಮಿಸಬೇಕು.

ವಿಶ್ವಾಮಿತ್ರ—ಎಲವೋ! ದುರಾತ್ಮನೆ! ಏನು ಹೇಳಿದೆ? "ಅಜ್ಞಾನ ಕೃತವನ್ನು ಕ್ಷಮಿಸಬೇಕು." ಎಲಾ ಕ್ಷುದ್ರಕ್ಷತ್ರಿಯನೆ! ನಮ್ಮನ್ನು ನೀನು ತಿಳಿದಿಲ್ಲವಲ್ಲವೆ? ಕೇಳು.

ವೃ॥ ಜಾತಿಯೆ ಬಂದು ತಾಂ ವರಿಸಿದುದ್ಧತವಿಪ್ರನನಂತು ದುರ್ಮದೋ । ಪೇತವಸಿಷ್ಠಸೂನುವನಪಾವಕನಂ ಪ್ರತಿಸರ್ಗಕಲ್ಪನಾ ॥ ಭೀತಜಗತ್ಕೃತಾಂತನುಮನಂತ್ಯಜನಿಂದಮೆ ಸಪ್ತತಂತುವಂ। ಭೂತಲದಲ್ಲಿ ಮಾಡಿಸಿದ ಕೌಶಿಕನೆಂದರಿಯೈ ಗಡೆನ್ನನೀಂ॥

ರಾಜ—ಪೂಜ್ಯರೆ! ಪ್ರಸನ್ನರಾಗಬೇಕು. ಪ್ರಸನ್ನರಾಗಬೇಕು. ತಾವು ಹೀಗೆ ತಿಳಿಯತಕ್ಕದ್ದಲ್ಲ.

ಕಂ॥ ಅರಸರ ದಾನವು ನೊಲ್ಲದೆ ।
ಬರದೊಳವಾತೆರದೆ ಬಾಳ್ದುವಾಡೀಬಕಸಂ ॥
ಗರದೆ ನೆಲನದಿರಿಸಿದ ನಿ ।
ಮ್ಮುರುತಪವುಮನಧಿಕತೇಜವುಮನಾರರಿಯರ್ ॥

ಆದರೆ ಸ್ತ್ರೀಜನದ ಆರ್ತಪ್ರಲಾಪವನ್ನು ಆಲಿಸಿ ಆರ್ತರನ್ನು ಪೊರೆಯುತಕ್ಕದ್ದು ಸ್ವಧರ್ಮವೆಂದೆಣಿಸಿ ಇಂತು ನಡೆದ ನನ್ನ ಅಜ್ಞತೆಯನ್ನು ಕ್ಷಮಿಸಬೇಕೆಂದು ಬಿನ್ನವಿಸಿದೆನು.

ವಿಶ್ವಾ—ಎಲಾ ದುರಾತ್ಮನೆ! ಹೇಳು ಹೇಳು! ಏನೇನು ನಿನ್ನ ಧರ್ಮವು.

ರಾಜ—ಪೂಜ್ಯರೆ! ಕೇಳಬೇಕು.

ಕಂ॥ ಈವುದು ಯುದ್ಧಂ ಗೆಯ್ವುದು ।
ಕಾವುದು ಮೂರುಮಿವು ರಾಜಧರ್ಮಮೆನುತ್ತಂ॥
ತಾವುಸಿರ್ವರ್ ಸಕಲಾಗಮ ।
ಕೋವಿದರೆಂದೆನಿಸಿ ನೆಗಳ್ದ ಮುನ್ನಿನ ಮುನಿಗಳ್ ॥

ವಿಶ್ವಾ—ಏನು ? "ಈವುದು ಯುದ್ಧಂ ಗೆಯ್ವುದು ಕಾವುದು."

ರಾಜ—ಹೌದು.

ವಿಶ್ವಾ—ಹಾಗಾದರೆ ಹೇಳು. ಯಾವನಿಗೆ ಈವುದು ? ಯಾವನೊಡನೆ ಯದ್ಧಂಗೆಯ್ವುದು ? ಯಾವನನ್ನು ಕಾವುದು ?

ರಾಜ—ಪೂಜ್ಯರೆ! ಕೇಳಬೇಕು.

ವಿಶ್ವಾ—ಹೇಳು.

ರಾಜ-ಕಂ॥ ಗುಣವಂತರೆನಿಸಿದಾ ಬ್ರಾ ।
ಹ್ಮಣರ್ಗೀವುದು ಕಾವುದತಿಭಯಾರ್ತರನೊಲವಿಂ ॥
ರಣಮುಂ ಗೆಯ್ವುದು ಶಾತ್ರವ ।
ಗಣದೊಡನೆಂದೆನ್ನ ಮನದೆ ನಿಶ್ಚಯಿಸಿಪ್ಪೆಂ ॥

ವಿಶ್ವಾ—ದುರಾತ್ಮನೆ! ಹೀಗೆ ನೀನು ತಿಳಿದಿರುವುದಾದರೆ ಎಲ್ಲಿ ನಮ್ಮ ವಿದ್ಯಾ ತಪಸ್ಸುಗಳಿಗೆ ಸರಿಯಾಗಿ ಏನನ್ನು ಕೊಡುವೆ ಕೊಡು.

ರಾಜ—(ಸಂತೋಷದಿಂದ) ಪೂಜ್ಯರೆ! ಹಾಗಾದರೆ ಸೂರ್ಯವಂಶವು ತಮ್ಮಿಂದ ಅನುಗ್ರಹಿಸಲ್ಪಟ್ಟಿತು. ಆದುದರಿಂದ ಪೂಜ್ಯರೆ! ಪ್ರಸನ್ನರಾಗಬೇಕು.

ವೃ॥ ಭುವನವಿದೆಲ್ಲಮುಂ ತಗದು ನಿಮ್ಮಯ ದಕ್ಷಿಣೆಗೆಂದೊಡೀ
ವೆನೇ | ನವನಿಯೊಳಾನಶಕ್ತನೆನಗಿರ್ದ್ದಪುದಂ ಕುಡಲಾರ್ಪ್ಪೆ
ನಂತರಿಂ ॥ ದ್ರವಿಣದೆ ತುಂಬಿದೀ ಸಕಲಭೂತಲಮಂ ಕುಶಿ
ಕಾಂಕಗೋತ್ರಸಂ | ಭವ ಭವದಂಘ್ರಿಪದ್ಮಯುಗಳಕ್ಕೊಲಿ
ದೊಪ್ಪಿಪೆನೊಪ್ಪಿಕೊಳ್ವುದೈ ॥

ವಿಶ್ವಾ—(ಆಶ್ಚರ್ಯದಿಂದ) (ಆತ್ಮ) ಆಗಲಿ ಹೀಗೆ ಹೇಳೋಣ. (ಪ್ರ) ಎಲೈ ರಾಜೇಂದ್ರನೆ! ನಿನಗೆ ಸ್ವಸ್ತಿಯಾಗಲಿ. ಆದರೆ ದಕ್ಷಿಣಾಹೀನವಾದ ದಾನವನ್ನು ಮುನಿಗಳು ಅಭಿಮತಿಸಿಲ್ಲ. ಆದುದರಿಂದ ಇದಕ್ಕೆ ತಕ್ಕ ದಕ್ಷಿಣೆಯನ್ನು ನಮಗೆ ಈಗ ಕೊಡಬೇಕು.

ರಾಜ—(ನಾಚಿಕೆಯಿಂದ ಆತ್ಮ) ಇದಕ್ಕೇನು ಪ್ರತಿಯಾಗಿ ಹೇಳಲಿ. (ಬಹಳವಾಗಿ ಚಿಂತಿಸಿ ಸಂತೋಷದಿಂದ) ಆಗಲಿ ಹೀಗೆ ಹೇಳುವೆನು. (ಪ್ರಕಾಶಂ) ಪೂಜ್ಯರೆ!

ಕಂ॥ ಗಳಿಸುತ್ತ ಮಾವೆನಾಂ ಪೊಂ।
ಗಳಲಕ್ಷಮ ದಕ್ಷಿಣಾರ್ಥಮಿಂದು ಮೊದಲ್ ತಿಂ॥
ಗಳವರೆಗಂ ಗಡಬಂ ಮುನಿ।
ತಿಳಕನೆ ನೀ ಮದನೊರಲ್ದು ಸೈರಿಸವೇಳ್ಕುಂ॥

ವಿಶ್ವಾ—ಗಡಬನ್ನು ಒಪ್ಪಿಕೊಂಡೆವು. ಆದರೆ ನೀನು ಈ ಭೂಮಿಯನುಳಿದು ಅನ್ಯತ್ರ ತೆಗೆದುಕೊಂಡು ಬಂದು ಕೊಡಬೇಕು.

ರಾಜ—(ಶಂಕೆವೆರಸಿ) (ಆತ್ಮ) ಈ ವಿಷಯದಲ್ಲಿ ಏನುಮಾಡತಕ್ಕದ್ದು (ಯೋಚಿಸಿ ಸಂತೋಷದಿಂದ) ಆಹ! ಪ್ರತೀಕಾರವನ್ನು ಪಡೆದೆನು. ಏತರಿಂದೆಂದರೆ ? ಭಗವಂತನಾದ ಪರಮೇಶ್ವರನಿಂದ ಪರಿಗ್ರಹಿಸಿದ ಕಾಶೀಕ್ಷೇತ್ರವಿದೆಯಷ್ಟೆ ?

ಕಂ॥ ನೆಲನಂಟದ ಬಾನೂರೆಂ।
ದುಲಿವರಿದಂ ಮುನಿಗಳವನಿಯೊಳ್ ತೆರಪಂ ಕೂ॥
ದಲ ಮೊನೆಗಂ ಸಾಸಿರ್ಮ್ಮಡಿ।
ಸಲೆ ಸಣ್ಣಿತನಾಗಮಜ್ಞರರಿದಪರಲ್ತೆ॥

ಆದುದರಿಂದ ಅಲ್ಲಿಂದ ತೆಗೆದುಕೊಂಡು ಬಂದು ಕೊಡುವೆನು. (ಪ್ರಕಾಶ) ಪೂಜ್ಯರೆ! ಏನಾಜ್ಞಾಪಿಸುವಿರಿ? (ಆಭರಣಗಳನ್ನು ತೆಗೆದು) ಪೂಜ್ಯರೆ!

ಕಂ॥ ಇದು ನೆಲನೈಸಿರಿಯಿದು ಮೇ।
ಣಿದಸ್ತ್ರಮಿದು ರಾಜಲಾಂಛನಂ ಮಕುಟಂ ನೋ॥
ೞ್ಪದನಿಂದು ನೀಮನುಗ್ರಹಿ।
ಪುದು ನಿಮ್ಮಡಿಗರ್ಪಿಸಿರ್ದ್ದಪುದನೆಲೆ ಮುನಿವರ್ಯಾ॥

(ಎಂದು ಎರಗಿ ಮೇಲಕ್ಕೆ ಎದ್ದು ಸಂತೋಷದಿಂದ ತನ್ನಲ್ಲಿತಾನೆ) ಆಹ! ದೈವಯೋಗದಿಂದ ಆಯಾಸಭೂಯಿಷ್ಠವಾದ ರಾಜ್ಯಭಾರವು ಈಗ ಫಲಿಸಿದ ಹಾಗಾಯಿತು. (ಆನಂದದಿಂದ)

ಕಂ॥ ಮನದೊಳದಾವುದನಾಂ ಬಿ।
ರ್ರನೆ ಬೀಳ್ವ ಸಿಡಿಲ್ಗೆ ಸಾಟಿಯೆಂದೆಣಿಸಿದೆನಾ।
ಮುನಿಯ ಮುನಿಸೆನ್ನ ಮುಡಿಯೊಳ್।
ವನೆಮಲ್ಲಿಗೆಮಾಲೆಯೆನಿಸಿ ಬೀಳ್ದುದು ಸೈಪಿಂ॥

ಎಲೌ! ಮಾನ್ಯಳಾದ ಭೂದೇವತೆಯೆ! ನಿನ್ನನ್ನು ಇದೊಂದನ್ನು ಕೇಳಿಕೊಳ್ಳುವೆನು.

ವೃ॥ ಎಲೆ ವಿಶ್ವಂಭರೆ ಲೋಕಧಾತ್ರಿ ರವಿವಂಶೋದ್ಭೂತಭೂಪಾ
ಲರಿಂ । ಸಲಹಲ್ಪಟ್ಟೆ ಗಡಾ ತ್ರಿಲೋಕವಿದಿತಶ್ರೀವಿಕ್ರಮ
ಖ್ಯಾತರಿಂ ‖ ನೆಲದೊಳ್ ದುರ್ಲಭಪಾತ್ರವೊಂದು ದೊರೆದ
ತ್ತೆಂಬಾಸೆಯಿಂ ನಿನ್ನನಾ । ನುಳಿದೀ ದುರ್ನಯವೊಂದನಂಬ
ಕೃಪೆಯಿಂ ಸರ್ವಂಸಹೇ ಸೈರಿಸೌ ‖

ಇನ್ನು ಅಯೋಧ್ಯೆಯನ್ನು ಕುರಿತು ಹೋಗಿ ಪೂಜ್ಯರಿಗೆ ಒಪ್ಪುಗೊಟ್ಟದ್ದನ್ನು ಒಪ್ಪಿಸಿಬಿಟ್ಟು ದಕ್ಷಿಣೆಯನ್ನು ಸಂಪಾದಿಸುವುದಕ್ಕೆ ವಾರಾಣಸಿಗೆ ಹೋಗುವೆನು (ಪ್ರಕಾಶವಾಗಿ) ಪೂಜ್ಯರೆ! ಇನ್ನು ಅಯೋಧ್ಯೆಗೆ ದಯಮಾಡಿ ತಮ್ಮ ಕಾರ್ಯವನ್ನು ನೆರವೇರಿಸಿಕೊಂಡು ದಕ್ಷಿಣೆಯನ್ನು ಸಂಪಾದಿಸುವುದಕ್ಕಾಗಿ ನನಗೆ ಆಜ್ಞೆಯನ್ನು ಕೊಡಬೇಕು.

ವಿಶ್ವಾ—(ಆಶ್ಚರ್ಯದಿಂದ ಆತ್ಮ) ಆಹ! ದುರಾತ್ಮನ ಸ್ಥೈರ್ಯವನ್ನು ಇವನ ಮಹಾನುಭಾವತೆಯನ್ನು ಎಷ್ಟೆಂದು ಹೇಳಲಿ. ಅತ್ಯಾಶ್ಚರ್ಯಕರವಾದದ್ದು. (ಪ್ರ) ಎಲಾ ದುರಾತ್ಮನೆ! ನಿನ್ನ ದಿಟ್ಟತನವನ್ನು ಸ್ವಲ್ಪಕಾಲದಲ್ಲಿ ನೋಡುವೆನು. ಹಾಗೆಯೇ ಸರಿ.

ಕಂ॥ ಎಂತಾದೆ ರಾಜ್ಯವಿಚ್ಯುತ ;
ನಂತಿರೆ ನೀಂ ಸತ್ಯವಿಚ್ಯುತನೆನಿಪ್ಪನ್ನಂ ‖
ಶಾಂತಿಯನೈದದು ಮತ್ಕೋ ।
ಪಂ ತಾವಕದುರ್ನಯಪ್ರದೀಪಿತತೇಜಂ ‖

(ಪ್ರಕಾಶ) ಎಲೈ ರಾಜನೆ! ಹಾಗೆಯೆ ಆಗಲಿ. ದೋಷವೇನು ?

(ಎಂದು ಹೋಗುವರು)

ದ್ವಿತೀಯಾಂಕಂ ಸಮಾಪ್ತಂ.

ಮೂರನೆಯ ಅಂಕಂ.

ಅನಂತರ ಭೀಭತ್ಸಕರವಾದ ವೇಷವುಳ್ಳಪಾಪಪುರುಷನು ಪ್ರವೇಶಿಸುವನು
(ಡೊಂಕುಡೊಂಕಾಗಿ ನಡೆದು ಗಟ್ಟಿಯಾಗಿ ನಕ್ಕು)

ಕಂ॥ ಕಡುಸೀಯೆನಿಪೆಂ ಮೊದಲೊಳ್ ॥
ನಡುವೆ ವಿಯೋಗಾದಿದುಃಖದಿಂ ಕೈಯ್ಯೆನಿಪೆಂ ॥
ಕಡೆಯಲ್ಲಿ ನರಕದುಃಖವ ।
ನೊಡರ್ಚುವುದರಿನಧಿಕದಾರುಣಂ ನಾನಲ್ತೆ ॥

(ಮುಂದೆ ನೋಡಿ ಭಯದಿಂದ ಕೂಡಿ) ಅಯ್ಯೋ ! ಅಮ್ಮ ! ಹೆಸರೆತ್ತು ವದಕ್ಕೂ ಅಶಕ್ಯವಾದ ಈ ದುಷ್ಟ ನಗರಿಯು ನನ್ನನ್ನು ಹೊರ ಡಿಸಿಬಿಟ್ಟಿತು. ಕೊಂದುಬಿಟ್ಟಿತು. ಹೋಗುವುದು ಹಾಗಿರಲಿ. ಈ ನಗರಿಯನ್ನು ನೋಡಲೂ ಆರೆನು. ನಾನೇನು ಮಾಡಲಿ? ಆಗಲಿ ಮರೆಯಾಗಿರುವೆನು. ಇಲ್ಲಿಗೆ ಬಂದು ತಮ್ಮ ಜನ್ಮಾಂತರ ಸಂಚಿ ತಪಾಪಗಳನ್ನು ಕಳೆದುಕೊಂಡು ಪುನಶ್ಚ ಹಿಂತಿರುಗಿಹೋಗುವ ಜನರನ್ನು ಬೆನ್ನಟುವೆನು.

(ತೆರೆಯಲ್ಲಿ.)

ವೃ॥ ಶಿರದೊಳ್ ಶಂಭುಪದಾಬ್ಜಮುದ್ರೆ ಪಿರಿದೀಶಾನುಗ್ರಹಂ ತನ್ನೊ
ಳೀ । ಶ್ವರಿಯೆನ್ನಂ ಮಗನೆಂಬಳೆಂಸರಿವುಮಂತಿಕ್ಕುರ್ಗಂ ತಪ್ಪೋ
ಸಿಷ್ಟ್ರಯುಂ ॥ ತಿರೆಯುಂ ತನ್ನೊಡಲಸ್ಥಿಶೇಷಶಿಥಿಲತ್ವಗ ದಬಾಧ ಮಾ
ಗಿಪ್ಪುದೇ । ನೊರೆವೆಂ ನೋಳ್ಪೊಡೆ ಪೂರ್ವಕರ್ಮಪರಿಪಾಕಂ
ದುರ್ವಿಲಂಘ್ಯಂ ನಿಜಂ ॥

ಪಾಪಪುರುಷ— ಆಃ ! ಇದೇನೊ ಇದ್ದೀಇದೆ. ಆದರೆ ಈ ದುಷ್ಟ ನಗರಿಯಲ್ಲಿ ಆ ಹರಿಶ್ಚಂದ್ರರಾಜನು ದುರಾಚಾರನಾಗದೆ ಇದ್ದರೆ—

ಇವನು ಯಾರು ಮಾತಾಡುವವನು ? ಓಹೊ ! ಇವನು ಭಗವಂತನಾದ ಫಾಲಲೋಚನನ ಸವಿಾಪದ ಸೇವಕನಾದ ಭೃಂಗಿರಿಟಿಯು. ಈ ಕಡೆಯೇ ಬರುತ್ತಿರುವನು. ಆದುದರಿಂದ ಬೇಗ ಪಲಾಯನ ಮಾಡುವೆನು.

(ಪಾಪಪುರುಷನು ಹೋಗುವನು ಅನಂತರ ಭೃಂಗಿರಿಟಿಯು ಪ್ರವೇಶಿಸುವನು.)

ಭೃಂಗಿ—"ಶಿರದೊಳ್ ಶಂಭುಪದಾಬ್ಜಮುದ್ರೆ" (ಎಂಬ ಪದ್ಯವನ್ನು ಪ್ರಸಷ್ಟ ಪಠಿಸುವನು. ಯೋಚಿಸಿ) ಹಾಗಲ್ಲದ ಪಕ್ಷಕ್ಕೆ ರಾಜಋಷಿಯಾದ ಹರಿಶ್ಚಂದ್ರನ ದುರ್ದಶೆಯನ್ನು ಈಗತಾನೆ ಪರಮೇಶ್ವರನು ದೇವಿಗೆ ಏತಕ್ಕೆ ತಿಳಿಸಿದನು ?

ವೃ|| ತತಪುಳಕಪ್ರಭಿನ್ನಕಣವಾಗೆ ವಿಲೇಪಿಸಿದಂಗಭೂತಿಯು| ದ್ಭು
ತ ರಸಮುಣ್ಮೆಯಾವನ ಚರಿತ್ರೆಯ ಸೊಲ್ಲಿಸುತಿರ್ಪ ಶೈಲಜಾ||
ಪತಿಯ ವಿಲೋಚನತ್ರಯಮುಮಶ್ರುಗಳಿಂ ತುಳುಕಿತ್ತು ಮೇಂ
ಣ್ ಪ್ರಕಂ| ಪಿತವಿಲಸತ್ಸುಧಾಂಶುಶಕಲಂ ತೊನೆದತ್ತು ಜಟಾ
ಲಮಸ್ತಕಂ ||

ಆ ಮಹಾತ್ಮನು ಈಗ ಇಲ್ಲಿಗೆ ಪ್ರವೇಶಿಸುವನೆಂದು ದೇವಿಯೊಡನೆ ದೇವನಾದ ಚಂದ್ರಮೌಳಿಯೂಕೂಡ ಉತ್ಸಾಹಪಡುತ್ತಿರುವನು. ಆದುದರಿಂದ ನಾನೂಕೂಡ ಭಗವಂತನಾದ ಪರಮೇಶ್ವರನ ಪೂಜೆಯನ್ನು ನೆರವೇರಿಸಿಕೊಂಡು ಸಿದ್ಧನಾಗುವೆನು.

(ಅನಂತರ ಚಿಂತೆಯಿಂದ ಹರಿಶ್ಚಂದ್ರನು ಪ್ರವೇಶಿಸುವನು)

ರಾಜ—ವೃ|| ನಲವಾಂತುಂ ದ್ವಿಜಸತ್ತಮಂಗಿಳೆಯನಿತ್ತೆನ್ನೀಮನಂ
ಚಿಂತಿಸು| ತ್ತಲೆಯುತ್ತಿರ್ದ್ದಪುದೀಯದಿರ್ಪ ಪಿರಿದಾದಾ ದಕ್ಷಿ

ಣಾವದ್ರವ್ಯಮಂ ‖ ಗಳಿಸಲ್ಕಾಗದು ಪೊನ್ನನಾತನಿಳೆಯೊಳ್ ಶಾ
ರ್ವಂಪದಂಕಾಶಿ ತಾ । ನಿಳೆಯುಲ್ಲೆಂದುಸಿರ್ವರ್ ಮುನೀಂದ್ರರ
ದರಿಂದಾ ಕಾಶಿಗಾಂ ಪೋದಪೆಂ ‖

ಮತ್ತಂ

ವೃ‖ ವನಿತೆಯಿವಳ್ ತನೂಜನಿವನಂಗವಿದಿಂತಿವೆ ಕೊಟ್ಟು ವಿಕ್ಕ
ವಿ । ನ್ನನುಗತವಾದುದಾಂತ ಗಡಬಂ ಬಿಡಕಕ್ಕುದುಮುಲ್ಲು
ಸತ್ಯವಾ । ಮುನಿ ಮುನಿಸುಳ್ಳನೀ ದ್ವಿಜಧನೋಪಹತಾಂಗ
ಮುಮಂ ವಿಸರ್ಜಿಸ । ಲ್ಕನುಮತಿಸೆಂ ವಿಚಾರಜಡನಾದೆನಗೀ
ಕ್ಷಿಸೆ ತೋರದಾವುದಂ ‖

(ಮುಂದೆ ನೋಡಿ ಸಂತೋಷದಿಂದ ಕೂಡಿ)

ಆಹ! ಇದೊ ವಾರಾಣಸಿಯು—ಎಲೆ ಪೂಜ್ಯಳಾದ ವಾರಾಣಸಿಯೆ! ನಿನಗೆ ವಂದಿಸುವೆನು— (ಚಿಂತಿಸಿ ಆಶ್ಚರ್ಯದಿಂದ ಕೂಡಿ)

ವೃ‖ ತಪದಿಂ ಮೇಣ್ ಬ್ರಹ್ಮಚರ್ಯವ್ರತದಿನಖಿಲಸನ್ಯಾಸದಿಂದಾ
ವುದಂ ಕಾಂ । ಕ್ಷಿಪರಾದಂ ಬ್ರಹ್ಮವಿಪ್ರರ್ ಕ್ಷಪಿತತನುಸರಾ
ತಾರಕಜ್ಞಾನಮಂ ಸಾ ‖ ರ್ದ್ದುಪದೇಶಿಪ್ಪಂ ಶರೀರಾಂತದೊಳ
ಗಿರಿಶನೊಲ್ದಂತರಿಂದಿಲ್ಲಿ ಮರ್ತ್ಯಂ । ವಪುವಂ ತಾಂ ತ್ಯಾಗ
ಮಂ ಗೆಯ್ದೊಡೆ ಮಗುಳೆ ಭವಂ ಬಾರದಾತಂಗೆ ಸತ್ಯಂ ‖

ಮತ್ತಂ

ವೃ‖ ಕಳೆಗುಂ ತಾನಿಲ್ಲಿ ಜೀವಿವ್ರಜಕೆ ನಿಬಿಡಸಂಸಾರರೂಪಂ ಮ
ಹಾಶ್ಯಂ । ಖಲೆ ಬೀಳ್ದತ್ತಿಲ್ಲಿ ಕೈಯತ್ತಣಿಸಭವನ ವೈರಂಚ
ಶೀರ್ಷಂ ಸಮಂತಾ ‖ ಗಳೆ ತತ್ಪಾಪಪ್ರಮುಕ್ತಂ ತಳೆಯುತಮ

ವಿಮುಕ್ತಿಸ್ಥೈಯಂ ಶರ್ವನೆಲ್ಲಾ | ಗಳುವಿಗಾ ಸುಕ್ಷೇತ್ರದೊ
ಳ್ ವಾಸಿಸಿದಪನದರಿಂ ಶೈಲಜಾತಾಸಮೇತಂ ||

ಆದುದರಿಂದ ಯಾವ ಉಪಾಯದಿಂದೀ ಮುನಿವರನ ಋಣವನ್ನು ಕಳೆದುಕೊಳ್ಳಲಿ? (ಚಿಂತಿಸಿ)

ವೃ|| ಸಲೆಗೆಲ್ದರ್ಥಪನಂ ಧನಂಬಡೆವೆನೇಂ ಶ್ರೀತ್ಯಾಗಿಗೇಂ ಗೆಲ್ಲದಿಂ|
ಸುಲಭಂ ಬೇಡುವುದಾ ದ್ವಿಜನ್ಮಕುಲಕೆಂದುಂ ಯಾಚಿಸರ್ ಕ್ಷ
ತ್ರಿಯರ್ || ನೆಲದೊಳ್ ಬೇಹರಮರ್ಥಮೂಲ ಮಧನಂ ನಾ
ನೆಲ್ಲಮುಂ ಕಾಲದಿಂ | ದಲೆ ಸಾಧ್ಯಂ ಗಡ ಕಾಲಮಾದೊಡೆನ
ಗಿಲ್ಲಂ ನೋಡೆ ದೈವೇಚ್ಛೆಯಿಂ ||

ಆದುದರಿಂದ ಮಂದಭಾಗ್ಯನಾದ ನಾನೇನುಮಾಡಲಿ? (ಚೆನ್ನಾಗಿ ನಿರ್ಧರಿಸಿ ಸಂತೋಷದಿಂದ) ಲೇಸು! ಲೇಸು! ಈಗ ನಾನು—

ಕಂ|| ಪೊರೆವೆಂ ಸತ್ಯಮನೆನ್ನಯ |
ಶರೀರಮಂ ಮಾರಿ ಮುನಿಯದಕ್ಷಿಣೆಗೀಗಳ್ ||
ಧರೆಯೊಳ್ ಸತ್ಯಂಪೊರೆಯದ |
ನರನಿಂದಂ ಪೊರೆದುದಲ್ಲಮಿಹಮುಂ ಪರಮುಂ ||

(ಧೈರ್ಯದಿಂದ ನೋಡಿ) ಆದುದರಿಂದ ಬಹುದೂರ ನಡೆದು ಬಳಲುತ್ತ ಕಂದನಾದ ರೋಹಿತಾಶ್ವನ ಬರವಂ ಕಾದುಕೊಂಡು ನಿಂದ ದೇವಿಯು ಬರುವದರೊಳಗಾಗಿ ಹೋಗಿ ಬೇಗನೆ ನನ್ನ ಇಷ್ಟವನ್ನು ನೆರವೇರಿಸಿಕೊಳ್ಳುವೆನು. (ಮೇಲೆ ನೋಡಿ) ಓಹೋ! ಸೂರ್ಯನು ನಡುವಗಲನ್ನು ಹತ್ತಿದನು—ಹಾಗೆಯೆ ಸರಿ—

ವೃ|| ಉರಿವನತಿಪ್ರಚಂಡತಪನಂ ಮುಳಿಸಿಂ ದುರಿನಂತೆ ಕೌಶಿಕಂ ||
ಧರೆ ಪರಿತಾಪನಂ ವಹಿಸುಗುಂ ವಹಿಪಂತವೊಲೆನ್ನ ಮಾನ

ಸಂ || ನೆರಳಿದು ತಾಳ್ದು ದೀನದಶೆಯುಂ ಬಳಿಸಾರ್ದಪುದಿಂದು ದೇವಿಯುಂ | ತಿರೆ ಧರಣೀರುಪಂಗಳಡಿಯುಂ ಹತಸಿಪ್ಪುಣದ್ವೈ ವಯೋಗದಿಂ ||

ಇದೊ! ಗಡಬಕ್ಕೆ ಕೊನೆಯಾದದು ಅಥವಾ ಹರಿಶ್ಚಂದ್ರನಿಗೆ—ಮಂದ ಭಾಗ್ಯನಾದ ನಾನು, ಹಾ! ಕೆಟ್ಟೆನು. (ಎಂದು ಬಿದ್ದು ಬೇಗನೆ ಪುನಃ ಎದ್ದು ದುಃಖದಿಂದ ಕೂಡಿ) ಎಲಾ! ದುರಾತ್ಮನಾದ ಹರಿಶ್ಚಂದ್ರ ಹತಕನೆ!

ಕಂ|| ಅಂದೊಪ್ಪಿದ ದಕ್ಷಿಣೆಯಂ।
ತಂದೀಯದೆ ತದ್ವಿಜೋತ್ತಮಂಗೀಗಳ್ ನೀಂ ||
ಬೆಂದುಂ ಬ್ರಹ್ಮಸ್ವದೆ ಸಲೆ।
ಸಂದುಮಸತ್ಯಕ್ಕದೆತ್ತ ಪೋದಪೆ ಧೂರ್ತಾ ||

ಆದುದರಿಂದ ಅಂಗಡಿಬೀದಿಗೆ ಹೋಗಿ ಪ್ರಕೃತಕಾರ್ಯವನ್ನು ಸಾಧಿಸುವೆನು. ಆ ವಿಶ್ವಾಮಿತ್ರರು ಬಂದಹಾಗೆ ತೋರುವುದು.

(ಎಂದು ಬೇಗನೆ ಹೋಗಿ ಏಕಾಂತದಲ್ಲಿ ನಿಂತಿರುವನು)

(ಕೋಪವನ್ನು ಅಭಿನಯಿಸುತ್ತ ಕೌಶಿಕನು ಪ್ರವೇಶಿಸುವನು)

ವಿಶ್ವಾಮಿತ್ರ—ವೃ|| ಬಲುಹಿಂ ಕೈಸಾರ್ದ ವಿದ್ಯಾತ್ರಯದ ವಿಲಯದಿಂ ವೃದ್ಧಿಯಂ ಪೊರ್ದಿದ್ದಮೇಗ್ದು | ಲ್ಗಲಿತತ್ವಂಬೆತ್ತ ದುರ್ಬುದ್ಧಿಯ ವಿನಯ ಚರಿತ್ರಂಗಳಿಂ ರುದ್ಧವಾದು || ಜ್ವಲಕೋಪಂ ಸೀಡುಮಂತರ್ಜ್ವಲಿತ ನಿಬಿಡಶುಷ್ಕೇಂಧನೋದ್ಬುದ್ಧದಾವಾ | ನಲನಾಸಾರಾಂಬುಸಿಕ್ತಾಟವಿಯ ಸುಡುವವೊಲ್ ಚುಚ್ಚುಗುಂ ಕೆನ್ನವೆನ್ನಂ ||

(ಹರ್ಷದಿಂದ ಕೂಡಿ) ಎಲಾ ದುರಾತ್ಮನಾದ ಹರಿಶ್ಚಂದ್ರಹತಕನೆ!

ಕಂ॥ ಎಂತಾದೆ ರಾಜ್ಯವಿಚ್ಯುತ।
ನಂತಿರೆ ನೀಂ ಸತ್ಯವಿಚ್ಯುತನೆನಿಪನ್ನಂ॥
ಶಾಂತಿಯನ್ನೈದುದು ಮತ್ಕೋ।
ಪಂ ತಾವಕ ದುರ್ನಯ ಪ್ರದೀಪಿತತೇಜಂ॥

(ನೋಡಿ ಆಶ್ಚರ್ಯದಿಂದ) ಭಾಪು! ದುರಾತ್ಮನಾದ ಹರಿಶ್ಚಂದ್ರನು ಬಂದೇ ಬಂದನು. ಅಥವಾ ಮಹಾತ್ಮನೇ ಸರಿ. ಒಳ್ಳೇದು! ಆಗಲಿ. ಸಮೀಪಕ್ಕೆ ಹೋಗುವೆನು. (ಸಮೀಪಕ್ಕೆ ಬಂದು ಕೋಪದಿಂದ) ಏನು? ನಮ್ಮ ದಕ್ಷಿಣಾದ್ರವ್ಯವನ್ನು ಇನ್ನೂ ತರಲಿಲ್ಲವೆ?

ರಾಜ-(ತ್ವರೆಯಿಂದ) ಓಹೊ! ಪೂಜ್ಯರಾದ ವಿಶ್ವಾಮಿತ್ರರು! ಪೂಜ್ಯರೆ! ನಿಮಿಗೆ ವಂದಿಸುವೆನು.

ವಿಶ್ವಾಮಿತ್ರ—ತೆಗೆ! ನೀಚನೆ ತೆಗೆ! ಇನ್ನೂ ನಿನ್ನ ಮಿಥ್ಯಾವಚನಪೂರ್ವ ಪೂರ್ವದಿಂದ ನನ್ನನ್ನು ವಂಚಿಸಲಿಚ್ಛೈಸುವೆಯ?

ರಾಜ-(ಕಿವಿ ಮುಚ್ಚಿ) ಪೂಜ್ಯರೆ! ಸೈರಿಸಿ, ಸೈರಿಸಿ.

ವಿಶ್ವಾಮಿತ್ರ-(ಕೋಪವನ್ನು ಅಭಿನಯಿಸಿ) ಛಡ ದುರಾತ್ಮನೆ! ಮಿಥ್ಯಾದಾಸ ಸಂಭಾವನೆಯಿಂದ ವೃಥಾ ಪೌರುಷ ಪ್ರಸಂಚನನ್ನು ಮರೆಯಿಸುವೆ. ನಿಲ್ಲು, ನಿಲ್ಲು.

ವೃ॥ ತುಂಬಿಯು ವಿಾವ ನಿನ್ನಗಡಬಂ ನಮಗೀಯದೆ ದಕ್ಷಿಣಾರ್ಥ
ಮಂ। ನಂಬಿಸುತಿರ್ಪ್ಪೆ ಶುಷ್ಕಮಧುರಂಗಳೆನಿಪ್ಪ ವೃಥಾವ
ಚಂಗಳಿಂ॥ ಕುಂಬಿಡುತಿತ್ತುದಂ ಕುಡದ ಕಾರಣದಿಂದೊಗೆತಂದ
ಕೋಪದಿಂ। ದಾಂ ಬಿಡದಿಂದು ನಿನ್ನನಿದೊ ಶಾಪಹುತಾಶನ
ನಿಂದೆ ಚುಚ್ಚುರ್ವೆಂ॥

(ಎಂದು ಶಾಪಜಲವನ್ನು ಕೈಯಲ್ಲಿ ತೆಗೆದುಕೊಳ್ಳುವನು)

ರಾಜ-(ಬೇಗನೆ ವಂದಿಸಿ) ಪೂಜ್ಯರೆ! ಪ್ರಸನ್ನರಾಗಿ ಸ್ವಲ್ಪ ಸೈರಿಸಬೇಕು, ಸೈರಿಸಬೇಕು.

ಕಂ॥ ರವಿಮುಳುಗದ ಮುನ್ನಮೆ ನೀ।
ಡುವೆನಾದಕ್ಷಿಣೆಯನದಕೆ ತಪ್ಪಿದೊಡಾಂ ನೀ॥
ವವಿತಥಮೆನ್ನಂ ಶಪಿಸಿಂ।
ತವಿಸಿಂಮೇಣ್ ನಿವಗಧೀನವಿೂಜನಮಿತ್ತೀ॥

ಅದುವರೆಗೆ ಪ್ರಸನ್ನರಾಗಬೇಕು. ಅಂಗಡಿಯ ಬೀದಿಗೆ ಹೋಗೋಣ ಬನ್ನಿ.

ವಿಶ್ವಾಮಿತ್ರ-(ಶಾಪಜಲವನ್ನು ಉಪಸಂಹರಿಸಿ) ಒಳ್ಳೇದು! ಆಗಲಿ ಅಲ್ಲಿಗೆ ಹೋಗಿ ಕೊಡು. ಅಷ್ಟರಲ್ಲಿ ನಾವು ದ್ವಿತೀಯಸವನವನ್ನು ನೆರವೇರಿಸಿಕೊಂಡು ಬರುವೆವು. (ಎಂದು ಹೋಗುವನು)

ರಾಜ-(ಚಿಂತೆಗೂಡಿ, ಸ್ವಗತಂ)

ಕಂ॥ ಋಣಮೆ ಮನುಜರ್ಗೆ ಭಯಕಾ।
ರಣಮಿಹಪರಗಳೊಳಮುಕಟಪರಿಣತಿಘೋರಂ॥
ಪಣಮುಳ್ಳನ ಕೆರಳ್ದಾಸ್ಯಮು।
ನಣಮಾಲೋಕಿಸದ ನರನೆ ಧನ್ಯಂ ಜಗದೊಳ್॥

(ಸ್ವಲ್ಪ ನಡೆದು ನೋಡಿ ಹರ್ಷದಿಂದ ಕೂಡಿ) ಇದೆತಾನೆ ಅಂಗಡಿಯ ಬೀದಿ!

(ಶಿರದಲ್ಲಿ ತೃಣವನ್ನು ಧರಿಸಿ, ದೃಢವಾಗಿ) ಎಲೈ ಸಾಧುಗಳಿರಾ!

ಕಂ॥ ಪಿರಿದುಂ ಕಾಣದೆ ಗತ್ಯಂ।
ತರಮನದೇನಾನುಮೊಂದು ಕಾರ್ಯಕೆ ನೂರ್ಭಾರ್॥
ಸಿರಪೊನ್ನಗ್ಗಳ್ದಾನೆನ್ನಯ।
ಶರೀರವಿದನೀಗಳಿರದೆ ವಿಕ್ರಯಿಸಿದಪೆಂ॥

ಆದರಿಂದಾರ್ಯರೆ ಕೊಂಡುಕೊಳ್ಳಿ. (ಆಕಾಶದಲ್ಲಿ) ಏನು ಹೇಳು ವಿರಿ? "ಏತಕ್ಕಿಂತಹ ಕ್ರೂರಕರ್ಮಕ್ಕುಪಕ್ರಮಿಸಿದೆ" ಎಂದು? ಏತಕೆನ್ನನ್ನು ನಿರ್ಬಂಧಪಡಿಸುವಿರಿ? ವಿಚಿತ್ರವಾದುದಲ್ಲವೆ ಈ ಪ್ರಪಂಚವು? (ಬೇರೊಂದೆಡೆಗೆ ಹೋಗಿ "ಪಿರಿದುಂಕಾಣದೆ" ಎಂಬ ಕಂದಪದ್ಯವನ್ನು ಹೇಳುವನು. ಆಕಾಶದಕಡೆಗೆ ನೋಡಿ) ಏನು ಹೇಳುವಿರಿ? "ಏನು ನಿನ್ನ ಸಾಮರ್ಥ್ಯವು? ನೀನು ಮಾಡತಕ್ಕದ್ದೇನು? ನಿನ್ನ ಜಾಣ್ಮೆಯೇನು?" ಏನ್ನುವಿರೊ? (ನಕ್ಕು)

ಕಂ॥ ಆಳಿದನಾಣತಿಯಿತ್ತುದ।
ನಾಲೋಚಿಸದೆಸಪೆನಾವುದುಮನಾದೊಡಮಾಂ॥
ಆಳಿದನಾಣತಿಗೆರಡಂ।
ಪೇಳದುದಾಳಾದವಂಗೆ ವರಗುಣವಲ್ತೆ॥

(ಆಕಾಶದಲ್ಲಿ) ಏನು ಹೇಳುವಿರಿ? ಹೆಚ್ಚು ಬೆಲೆಯನ್ನು ಹೇಳುವೆ! ಆದರಿಂದ ಇನ್ನೊಂದು ಸಾರಿ ಹೇಳೆಂದು ಹೇಳುವಿರೊ? (ಚಿಂತೆಗೂಡಿ) ಎಲೈ ಸಾಧುಗಳಿರಾ! ನಾವು ಕ್ಷತ್ರಿಯರು ಎರಡುಮಾತು ಹೇಳುವದನ್ನು ಅರಿತವರಲ್ಲ. (ಮತ್ತೊಂದು ಕಡೆಗೆ ಹೋಗಿ, "ಪಿರಿದುಂ ಕಾಣದೆ" ಎಂಬ ಕಂದಪದ್ಯವನ್ನು ಹೇಳುವನು)

(ತೆರೆಯಲ್ಲಿ) ಆರ್ಯಪುತ್ರನೆ! ಆತ್ಮರಕ್ಷಣೈಕಪರನಾಗಬೇಡಾಗ ಬೇಡ. ಇದುವರೆಗೂ ಮುಂದಭಾಗಿನಿಯಾದ ನನ್ನನ್ನು ಹಾಗೆ ಕೂಡಿದ್ದು ಈಗ ತೊರೆದುಹೋಗುವದು ನಿನಗೆ ತಕ್ಕದ್ದಲ್ಲ. ನನ್ನಲ್ಲಿ ಪ್ರಸನ್ನನಾಗು. ಈ ಕಾರ್ಯದಲ್ಲಿ ನನ್ನನ್ನೆ ನಿಯಮಿಸು. ಮೊದಲಿದ್ದ ಅನುರಾಗವು ಈಗ ನನ್ನಲ್ಲಿಲ್ಲವೊ?

ರಾಜ-(ಆಶ್ಚರ್ಯದಿಂದಕೂಡಿ) ಇನ್ನೇನು ಗತಿ? ದೇವಿ ಬಂದೇಬಂದಳು. ಆದುದರಿಂದ ನನ್ನ ಅಭಿಲಾಷೆಯು ನೆರವೇರದು.

(ಅನಂತರ ಬಾಲಕನೊಡಗೂಡಿ ಶೈಬ್ಯೆಯು ವ್ಯಾಕುಲಪಡುತ್ತ ಬರುವಳು)

ಶೈಬ್ಯೆ—(ದೈನ್ಯದಿಂದ ಆ ಪದ್ಯವನ್ನು ಹೇಳಿ ಮೆಲ್ಲನೆ ನಡೆದು) ಆರ್ಯರೆ! ಕೊಂಡುಕೊಳ್ಳಿ. ಅರ್ಧಲಕ್ಷ ದ್ರವ್ಯಕ್ಕಾಗಿ ಸಮಯದಾಸಿಯಾದ ನನ್ನನ್ನು ಕೊಂಡುಕೊಳ್ಳಿ.

ಬಾಲ—ಆರ್ಯರೆ! ನನ್ನನ್ನುಕೂಡ

ರಾಜ—(ನಿಟ್ಟುಸುರಿನಿಂದ ತನ್ನಲ್ಲಿ ತಾನು) ಕಷ್ಟ ಕಷ್ಟ!

ವೃ॥ ಬಿಸುಟೆಂ ಕಲ್ಯತೃಣಾಗ್ರಬಿಂದುಚಲೆಯುಂ ಶ್ರೀಯುಂ ಕರಂನೋ
ಡಿ ನಂ | ಬಿಸವಾಮೆಂ ಪ್ರಜೆಯುಂ ಸುಹೃಜ್ಜನರುಮಂ ಬಿಟ್ಟೆಂ
ಸಬಾಷ್ಪಾಸ್ಯರಂ ‖ ಸ್ವಸತೀಪುತ್ರರವಾರೊಳಂ ಬಿರಿದುದಿಲ್ಲಂ
ಕ್ರೂರನಾದೆನ್ನ ವಾ | ನಸವೇಸೆಂದಪೆನಂತರಿಂದೆರ್ದೆಯಿದಾ
ದತ್ತಲ್ತೆ ದಲ್ ವಜ್ರದಿಂ ‖

ಶೈಬ್ಯೆ—(ಆಕಾಶದಲ್ಲಿ ಕಿವಿಗೊಟ್ಟು) ಆರ್ಯರೆ! ಏನು ಹೇಳುವಿರಿ? "ಸಮಯವೆಂದು ಹೇಳಿದೆಯಲ್ಲ ಅದೇನು ಸಮಯವೆಂದು" ಕೇಳುವಿರೊ? ಹಾಗಾದರೆ ಕೇಳಿ. ಪರಪುರುಷಸಂಭಾಷಣವೊಂದು, ಪರೋಚ್ಛಿಷ್ಟ ಭೋಜನವೊಂದು, ಇವೆರಡನ್ನು ಬಿಟ್ಟು ಸಕಲಕಾರ್ಯವನ್ನು ಮಾಡುವೆನು. ಇದೇ ನನ್ನ ಸಮಯವು. (ಪುನಃ ಕಿವಿಗೊಟ್ಟು) ಏನು ಹೇಳುವಿರಿ? "ಇಂತಹ ಸಮಯವುಳ್ಳ ನಿನ್ನನ್ನು ಕೊಂಡುಕೊಳ್ಳುವರು ಯಾರು" ಎನ್ನುವಿರೊ? ಹಾಗಾದರೆ ಪ್ರಸನ್ನರಾಗಿ ಹೋಗಿಬನ್ನಿ. ಇದರಿಂದ ನಿಮಗೇನು ಪ್ರಯೋಜನವು? ದೀನದಯಾಳುವಾದ ಯಾವನಾದರು ಒಬ್ಬ ದ್ವಿಜೋತ್ತಮನು ನನ್ನನ್ನು ಕೊಂಡುಕೊಳ್ಳುವನು.

(ಅನಂತರ ಉಪಾಧ್ಯಾಯನು ಪ್ರವೇಶಿಸುವನು)

(ಒಬ್ಬ ವಟುವು ಪ್ರವೇಶಿಸುವನು)

ಉಪಾ—ಎಲೈ ವತ್ಸನೆ! ಅಂಗಡಿಬೀದಿಯಲ್ಲಿ ನಿಜವಾಗಿ ದಾಸಿವಿಕ್ರಯವಾಗುವುದೊ ಏನು?

ವಟು—ಗುರುಗಳಿಗೆ ಯಾವನಾದರು ಸುಳ್ಳನ್ನುಬಿನ್ನವಿಸುವುದುಂಟೆ?

ಉಪಾ—ಹಾಗಾದರೆ ಅಲ್ಲಿಗೆ ಹೋಗೋಣ ಬಾ.

ವಟು—ಅಪ್ಪಣೆ! ದಯಮಾಡಬೇಕು. ದಯಮಾಡಬೇಕು.

ಉಪಾ—(ನಡೆತಂದು ಆಶ್ಚರ್ಯದಿಂದ ಕೂಡಿ) ಆಹ! ವರ್ತಕವೀಧಿಯ ರಾಮಣೀಯಕವನ್ನು ಏನು ಹೇಳಲಿ? ಆಶ್ಚರ್ಯಕರವಾಗಿದೆ. ಹಾಗೆಯೆ ಸರಿ.

ವೃ॥ ಸುರಗಿರಿಸಾನುವೋಲ್ ಕನಕದಿಂ ರತುನಂಗಳಿನಬ್ಧಿವೇಲೆವೋಲ್ । ಕಿರುಮುಗಿಲಂದಮಂ ತಳೆದ ದಂತಿವಿತಾನದೆ ವಿಂಧ್ಯಭೂಮಿವೊಲ್ ॥ ಎರೆದರಭೀಷ್ಟವಿತ್ತು ಸುರವಲ್ಲರಿಯಂತೆ ದುಕೂಲಪಲ್ಲವೋ । ತ್ಕರಗಳಿನೊಪ್ಪುವೀ ವಿಪಣಿ ಮಾಡದದಾರಮನಕ್ಕೆ ರಾಗಮಂ ॥

ವಟು—ಉಪಾಧ್ಯಾಯರೆ! ಎಲ್ಲಿ ವಿಶೇಷವಾಗಿ ಜನದ ಗುಂಪು ಕಾಣುವುದೊ ಅಲ್ಲಿ ದಾಸೀವಿಕ್ರಯವಾಗಬಹುದೆಂದು ನನಗೆ ತೋರುವುದು. (ಸಮೀಪಕ್ಕೆ ಹೋಗಿ) ಆರ್ಯರೆ! ಸ್ವಲ್ಪ ಅವಕಾಶವನ್ನು ಕೊಡಿ. ಅವಕಾಶವನ್ನು ಕೊಡಿ.

ಉಪಾ—ಓಹೊ! ಜನಸಂಮರ್ದ ಬಹುಬಲವಾಗಿದೆ.

ಶೈಬ್ಯೆ—(ಚಿಂತಿಸೆರಸಿ) ಆರ್ಯರೆ! ನನ್ನನ್ನು ಕೊಂಡುಕೊಳ್ಳಿರಿ. ಆರ್ಯರೆ! ನನ್ನನ್ನು ಕೊಂಡುಕೊಳ್ಳಿರಿ.

ಬಾಲ—ನನ್ನನ್ನು ಕೊಂಡುಕೊಳ್ಳಿರಿ.

ಉಪಾ-(ನೋಡಿ ಆಶ್ಚರ್ಯದಿಂದ) ಏನು? ಈಕೆಯೊ ಆ ಪೂಜ್ಯಳು? (ಸಮೀಪಕ್ಕೆ ಬಂದು) ಏನು ನಿನ್ನಸಮಯ?

ಶೈಬ್ಯೆ-(ಪರಪುರುಷ ಪರ್ಯುಪಾಸನ ಮೊದಲಾದುದು ಹೊರತಾಗೆಂದು ಹೇಳುವಳು.)

ಉಪಾ-(ಸಂತೋಷದಿಂದ) ನಿನ್ನ ಸಮಯಮಿದು ಯೋಗ್ಯವಾದುದಲ್ಲವೆ? ಹೌದು. ಹಾಗೆಯೆ ನಮ್ಮ ಗೃಹದಲ್ಲಿ ನೆಮ್ಮದಿಯಾಗಿರು. ನನ್ನ ಪತ್ನಿಯಾದರೊ ಅಗ್ನಿಪೂಜಾಧೀನತೆಯಿಂದ ಗೃಹಕೃತ್ಯವನ್ನು ಚೆನ್ನಾಗಿ ನೋಡಿಕೊಳ್ಳಲಾರಳು. ಅದನ್ನು ನೀನು ನೋಡಿಕೊ ಇದೊ! ತೆಗೆದುಕೊ ಸುವರ್ಣವನ್ನು.

ಶೈಬ್ಯೆ-(ಸಂತೋಷದಿಂದ) ಅನುಗ್ರಹಿಸಲ್ಪಟ್ಟೆನು. ಅಪ್ಪಣೆಯಾದಂತೆ.

ಉಪಾ (ಬಹಳ ಹೊತ್ತು ನೋಡಿ) (ಸ್ವಗತಂ)

ವೃ|| ಮುಸುಕಂ ತಾಳ್ದ ಸಿರಂ ಸಲಜ್ಜವದನಂ ಪಾದಾಗ್ರಮಂ ನಾಡೆ
ಲ | ಕ್ಷಿಸುವಕ್ಷಿದ್ವಿತಯಂ ನಿಕಾಮಮೃದುಯಾನಂ ಮಂದ
ಮಂದಾಕ್ಷರ || ಪ್ರಸರಪ್ರಾಂಚಿತಮುಂ ಮಿತಂ ಮಧುರಮುಂ
ತಾನಾದ ನಲ್ವಾತುಮೀ | ಯುಸಿಯುಳ್ ನಪ್ಪಿ ಮಹಾಕುಲಪ್ರ
ಸವೆಯೆಂಬೊಂದಂಗಮಂ ಸೂಚಿಕುಂ ||

(ಚಿಂತೆಯಿಂದ) ಈಕೆಯು ಆಕೃತಿವಿಶೇಷಕ್ಕೆ ಈ ದುರವಸ್ಥೆಯು ಯುಕ್ತವಲ್ಲ. ಇಂತಹ ಅವಸ್ಥೆಯನ್ನು ಹ್ಯಾಗೆ ಹೊಂದಿದಳು! ಬಳ್ಳೇದು ಕೇಳಿ ನೋಡೋಣ? (ಪ್ರಕಾಶ) ಎಲೌ! ನಿನ್ನ ಪತಿಯು ಬದುಕಿರುವನೆ?

ಶೈಬ್ಯೆ-(ಶಿರಸ್ಸಿನಿಂದ ಸಂಜ್ಞೆ ಮಾಡುವಳು)

ರಾಜ--(ನಿಟ್ಟುಸುರು ಬಿಟ್ಟು, ಆತ್ಮಗತಂ) ಎಲ್ಲಿ ಬದುಕಿದಾನೆ? ಬದುಕಿದ್ದವನ ಪತ್ನಿಗೆ ಈ ಅವಸ್ಥೆಯೆ?

ಉಪಾ—ಸಮೀಪದಲ್ಲಿರುವನೆ ?
ಶೈಬ್ಯೆ-(ಕಂಬನಿಯಿಂದ ಕೂಡಿ ರಾಜನನ್ನು ನೋಡುವಳು.)
ಉಪಾ--(ನೋಡಿ ಆಶ್ಚರ್ಯದಿಂದ ಕೂಡಿ) ಆಹ! ಏನಿದು ? ಈತನು ಈ ಕೆಯ ಪತಿಯೆ ? (ಚೆನ್ನಾಗಿ ನೋಡಿ ಚಿಂತೆಯಿಂದ ಕೂಡಿ)

ವೃ॥ ಕರಿಕರ ದೀರ್ಘಪೀವರಭುಜಂ ವಿಪುಲೋರಸಮುನ್ನತಾಂಸ
ಮಾ । ಪುರುಷನ ದೇಹಮೇ ಕಥಿಯಿಕುಂ ಕ್ಷಿತಿರಕ್ಷಣದಕ್ಷ
ನೀತನೆಂ ॥ ಚಿರವನಿದೇಂ ಶಿಖಾಮಣಿಯನಾಂಪ ಸಿರಂ ತೃಣ
ಮಾಂತುದಾದಮ । ಚ್ಚರಿಯೆನೆ ದುರ್ವಿಧಂ ವಿಧಿಯುದಾವನ
ಮಂ ಸಲೆಪೊಯ್ಯದಿರ್ದಪಂ॥

(ಸಮೀಪಕ್ಕೆ ಬಂದು ಕಂಬನಿಗೂಡಿ) ಎಲೈ ಮಹಾತ್ಮನೆ! ನಿನ್ನ ದುಃಖ ವನ್ನು ನನಗೂ ಸ್ವಲ್ಪ ಹಂಚಿಕೊಡು. ಏತಕ್ಕಾಗಿ ಇಂತಹ ಕಾರ್ಯ ವನ್ನು ಆರಂಭಿಸಿದೆ ?
ರಾಜ-(ಯೋಚಿಸಿ ಚಿಂತೆಯಿಂದಕೂಡಿ) (ಸ್ವಗತಂ) ಈ ಸತ್ಪುರುಷನ ಮಾತನ್ನು ಮೀರುವುದು ಯುಕ್ತವಲ್ಲ. ಹೇಳುವೆನು. (ಪ್ರಕಾಶಂ) ಎಲೈ ಸಾಧುವೆ! ವಿಸ್ತರಿಸುವದಕ್ಕೆ ಕಾಲವಿಲ್ಲ. ಸಂಕ್ಷೇಪವಾಗಿ ಹೇಳುವೆನು. ಕೇಳಬೇಕು. ಬ್ರಹ್ಮಸ್ವದ ಸಾಧನೆಗಾಗಿ ಈ ಕಾರ್ಯ ವನ್ನು ಆರಂಭಿಸಿದೆನು. ಇನ್ನು ನನ್ನನ್ನು ನಿರ್ಬಂಧಪಡಿಸಬೇಡಿ.
ಉಪಾ—ಹಾಗಾದರೆ ತೆಗದುಕೊ ಹಣವನ್ನು ಕೊಡುವೆನು.
ರಾಜ-(ಕಿವಿ ಮುಚ್ಚಿಕೊಂಡು) ಎಲೈ ಸಾಧುವೆ ! ಹಾಗೆ ತೆಗದುಕೊ ಳ್ಳುವುದು ಬ್ರಾಹ್ಮಣರ ವೃತ್ತಿ. ನಮ್ಮಗಳಿಗೆ ಯೋಗ್ಯವಲ್ಲ. ನನ್ನಲ್ಲಿ ಕರುಣಿಸುವಪಕ್ಷಕ್ಕೆ ಬೆಲೆಯಾಗಿ ಕೊಡಿ.
ಶೈಬ್ಯೆ-(ಬೇಗನೆ ಬಳಿಗೆ ಬಂದು ಕೈಮುಗಿದುಕೊಂಡು) ಆರ್ಯನೆ!

ಮೊದಲು ಸೇರಿದ ನನ್ನನ್ನು ತಾವು ಬಿಡಕೂಡದು. ಆದುದರಿಂದ ಶರಣಾಗತಳಾದ ನನ್ನನ್ನು ಅನುಗ್ರಹಿಸಬೇಕು.

ಉಪಾ--(ಕಂಬನಿಗೂಡಿ) ಎಲೌ ಪೂಜ್ಯಳೆ!

ಕಂ॥ ಐವತ್ತುಸಾಸಿರಂ ಪೊ।
ನ್ನೀವೆನಿದಂ ನಿಮ್ಮಾಳ್ಗರ್ವಮಾದೊಡಮದರಿಂ॥
ದಾವುದು ಯುಕ್ತಮೆನಿಕ್ಕುಂ।
ಗೈವುದದಂ ನಿಮ್ಮೊಡಂಬಡಿಕೆಯಿಂದೀಗಳ್॥

(ಎಂದು ಹಣವನ್ನು ಕೊಡುವನು.)

ಶೈಬ್ಯೆ--(ಗ್ರಹಿಸಿ ಹರ್ಷದಿಂದ) ಆಹ! ದೈವಯೋಗದಿಂದ ನನ್ನ ಪತಿಯ ಪ್ರತಿಜ್ಞಾಭಾರವು ಅರ್ಧ ಕಳೆದದ್ದಾಯಿತು. ಆದುದರಿಂದ ಕೃತಾರ್ಥಳಾದೆನು.

ಉಪಾ—(ಸ್ವಗತಂ) ಇವರಿಬ್ಬರ ದುಃಖವನ್ನು ನೋಡುವುದಕ್ಕಾಗುವದಿಲ್ಲ. (ಎಂದು ಹೊರಡುವುದಕ್ಕೆ ಯತ್ನಿಸುವನು.)

ಶೈಬ್ಯೆ—ಆರ್ಯನೆ! ಸ್ವಲ್ಪಕಾಲ ನಿಲ್ಲಬೇಕು. ಆರ್ಯಪುತ್ರನನ್ನು ಚೆನ್ನಾಗಿ ನೋಡಿ ಬರುವೆನು.

ಉಪಾ—ಪೂಜ್ಯಳೆ! ಹಾಗೆಯೆ ಆಗಲಿ. ನಮ್ಮ ಶಿಷ್ಯ ಕೌಂಡಿನ್ಯನಿರುವನು. ನಾನು ಹೋಗುವೆನು. (ಎಂದು ಹೋಗುವನು.)

ಶೈಬ್ಯೆ-(ಧನವನ್ನು ಅರಸಿನ ಸೆರಗಿಗೆ ಕಟ್ಟಿ) ಆರ್ಯಪುತ್ರನೆ! ಈ ಬ್ರಾಹ್ಮಣೋತ್ತಮನ ದಾಸೀತ್ವವನ್ನು ಅನುಮತಿಸಬೇಕು.

ರಾಜ—(ಚಿಂತೆಯಿಂದ ಕೂಡಿ) ಆ ವಿಧಿಗಿದು ಅನುಮತವಾಗಿಯೇ ಇದೆ. (ತನ್ನನ್ನು ತಾನು ನಿಂದಿಸಿಕೊಂಡು ಮೇಲೆ ನೋಡಿ) ಎಲಾ ದುಷ್ಟವಿಧಿಯೆ!

ಕಂ॥ ಅರಸಿಯನಾಗಿಸಿದಿವಳಂ ।
ಪರಗೃಹಪರಿಚಾರಿಕೆಯನೊಡರ್ಚಿದನಿನಗೇ ॥
ನೊರೆವೆಂ ಬೈತಲೆಮಣಿಯುಂ ।
ಚರಣಕ್ಕಾಭರಣಮೆಸಗಿದಂತಾಯ್ತಲ್ತೇ ॥

(ದೈನ್ಯದಿಂದ) ಹಾ ! ಕಷ್ಟ ಕಷ್ಟ.

ಕಂ॥ ಬಿದಿ ಪೊಡೆಯೆ ಮಂದಮತಿಯೆನಿ ।
ಸಿದನಾಂ ಸುತದಾರವಿಕ್ರಯುಂಗೆಯ್ದುದರಿಂ ॥
ದೊದಗಿದ ಕುಲಾಪವಾದದೆ ।
ವದನಶ್ರೀ ಮಲಿನವಾದುದಲೆ ದಿನಕರನಾ ॥

(ಧೈರ್ಯದಿಂದ ಕೂಡಿ) (ಪ್ರ) ಪ್ರಿಯೆ !

ವೃ॥ ಆರಾಧಿಸೌ ದ್ವಿಜನಸಾತನ ಪತ್ನಿಯಂ ನೀ । ನೋರಂತೆ ಸೇವಿ
ಪುದು ಕಾವುದು ನಿನ್ನಬಾಳಂ। ಆರಕ್ಷಣಂಗೊಳಿಪುದರ್ಭಕನಂ
ವಿಧಾತ್ರಂ । ನಾರೀಮಣೀ ಬೆಸಪುದೆಲ್ಲಮು ಮಾಡವೇಳ್ಕುಂ ॥

ಶೈಬ್ಯೆ—ಆರ್ಯನ ಅಪ್ಪಣೆಯಾದಂತೆ ನಡೆದುಕೊಳ್ಳುವೆನು. (ಹೋಗ ಲಿಚ್ಛೈಸಿ ರಾಜನನ್ನು ನೋಡಿ ವ್ಯಾಕುಲತೆಯನ್ನು ಅಭಿನಯಿಸುವಳು)

ವಟು-(ಕೋಪದಿಂದ) ಉಪಾಧ್ಯಾಯರು ದೂರ ಹೋದರು. ನಡೆ, ಬೇಗನೆ ನಡೆ.

ಶೈಬ್ಯೆ-(ವಿನಯದಿಂದ) ಸ್ವಲ್ಪ ತಾಳಿ. ಆರ್ಯಪುತ್ರನ ಮುಖವನ್ನು ನೋಡಿ ಬರುವೆನು.

ರಾಜ-(ಚಿಂತೆಯಿಂದ) ಪ್ರಿಯೆ ! ಸೈರಿಸು ಸೈರಿಸು. ದುಃಖಿಸಬೇಡ. ಬ್ರಾಹ್ಮಣನು ನಿಂತಿರುವನು.

ಶೈಬ್ಯೆ-(ರಾಜನನ್ನು ನೋಡುತ್ತ ಮೆಲ್ಲಮೆಲ್ಲನೆ ಹೋಗುವಳು)

ಬಾಲ—ಅಯ್ಯಾ! ಅಮ್ಮ ಎಲ್ಲಿಗೆ ಹೋಗುವಳು.

ರಾಜ—ಮಗನೆ! ನಿಮ್ಮಯ್ಯನ ಕೈಯನ್ನು ಹಿಡಿದದ್ದಕ್ಕೆ ಎಲ್ಲಿಗೆ ಹೋಗಬೇಕೋ ಅಲ್ಲಿಗೆ ಹೋಗುವಳು.

ಬಾಲ—ಎಲಾ ವಟುವೆ! ನಮ್ಮ ತಾಯಿಯನ್ನು ಎಲ್ಲಿಗೆ ಕರೆದು ಕೊಂಡು ಹೋಗುವೆ?

(ಎಂದು ತಾಯಿಯ ಸೆರಗನ್ನು ಹಿಡಿಯುವನು.)

ವಟು—(ಕೋಪದಿಂದ) ತೆಗೆ! ಗರ್ಭದಾಸನೆ! ತೆಗೆ. (ಎಂದು ನೂಕಿ ಬೀಳಿಸುವನು.)

ಬಾಲ—(ತುಟಿಯನ್ನು ನಡುಗಿಸುತ್ತ ತಾಯಿತಂದೆಗಳನ್ನು ನೋಡುವನು.)
(ರಾಣಿಯು ರಾಜನು ಕಂಬನಿದುಂಬಿ ನೋಡುವರು.)

ರಾಜ—ಎಲೈ ಬ್ರಾಹ್ಮಣನೆ! ಬಾಲಕರಲ್ಲಿ ಅಪರಾಧವನ್ನು ಎಣಿಸ ಬಾರದು. ಆದಕಾರಣ ನೀವು ಹೀಗೆ ಮಾಡಕೂಡದು.

(ಬಾಲನನ್ನು ಎತ್ತಿಕೊಂಡು ಮಂಡೆಯನ್ನು ಆಘ್ರಾಣಿಸಿ ತಕ್ಕೈಸಿ ವ್ಯಸನದಿಂದ)

ವೃ॥ ಏಕೆಲೆ ಕಂದ ಕಂದಳಿತಶೋಕದೆ ಚೆಂದುಟಿಕೆತ್ತಿ ನೀಡುವಾ।
ಲೋಕಿಪೆ ನಿರ್ದಯಂ ಪರಮಪಾಪಿಯು ಮೆಂದೆನಿಪೆನ್ನ ವಕ್ತ್ರ
ಮಂ॥ ಲೋಕದೊಳಪ್ರಿಯಂಗಳೆನಿಕುಂ ಮರಿಗಳ್ ಪುಲಿಗಳ್
ವಕ್ಕಮೆಂ। ತೋ ಕಡುಕೂರ್ಮೆ ಪೆಣ್ಬುಲಿಗಳಲ್ಲವರಿಂ ಕಡೆ
ಯಾದೆನಲ್ತೆನಾಂ॥

ಆದುದರಿಂದ ಚಂಡಾಲನಾದ ನನ್ನಸಂಗಡ ಏತಕ್ಕೆ ಬರುವೆ. ನಿನ್ನ ತಾಯ ಸಂಗಡ ಪೋಗು. (ಎಂದು ವ್ಯಾಕುಲತೆಯನ್ನು ಅಭಿನಯಿಸುವನು)

ಶೈಬ್ಯೆ—ಆರ್ಯಪುತ್ರನೆ! ಮಂದಭಾಗ್ಯಳಾದ ನನ್ನೊಡನೆ ಹಲುಬುತ್ತ ಮಹರ್ಷಿಯ ಕಾರ್ಯಕ್ಕೆ ಏಕೆ ತಡಮಾಡುವೆ? (ಎಂದು ಬಾಲಕನನ್ನು ಎತ್ತಿಕೊಂಡು ಹೋಗುವಳು)

ಬಾಲ—ಆರ್ಯನೆ! ಕಾಪಾಡು. ಕಾಪಾಡು (ಎಂದು ಹೋಗುವನು)

ರಾಜ—(ಬಹಳಹೊತ್ತು ನೋಡಿ) ಹಾ! ಕೆಟ್ಟೆನು. (ಎಂದು ಬೀಳುವನು)

(ಅನಂತರ ವಿಶ್ವಾಮಿತ್ರನು ಬರುವನು)

ವಿಶ್ವಾ—ಏನು? ಇನ್ನೂ ನಮ್ಮ ದಕ್ಷಿಣಾದ್ರವ್ಯವನ್ನು ತರಲಿಲ್ಲವೆ?

ರಾಜ—(ಕೇಳಿ ಬೇಗನೆ ಎದ್ದು) ಪೂಜ್ಯರೆ! ಇದೊ ಅರ್ಧವನ್ನು ತೆಗೆದುಕೊಳ್ಳಿ.

ವಿಶ್ವಾ—ಆಃ! ಅರ್ಧ ನಮಗೇನು ಅವಶ್ಯಕವಿಲ್ಲ. ನೀನು ಪ್ರತಿಜ್ಞೆಮಾಡಿದ್ದನೆಲ್ಲಾ ಕೊಡಬೇಕೆಂದು ನಿನಗೆ ತೋರಿದರೆ ಎಲ್ಲವನ್ನು ಕೊಡು.

(ತೆರೆಯಲ್ಲಿ)

ಕಂ॥ ಸುಡು ನಿನ್ನೀವ್ರತಮಂ ಸುಡು।
ಸುಡು ನಿನ್ನೀತಪವನಂತು ನಿನ್ನಯ ತಿಳಿವಂ॥
ಸುಡು ಮುನಿಯೆ ಹರಿಶ್ಚಂದ್ರಂ।
ಗೊಡರ್ಚಿದ ನಿಮಿತ್ತದಿಂದವೀ ದುರ್ದಶೆಯಂ॥

ವಿಶ್ವಾ—(ಕೇಳಿ ಕೋಪದಿಂದ) ಆಃ! ಯಾರಿವರು? ನಿಂದಾಪೂರ್ವಕವಾಗಿ ನನ್ನನ್ನು ಅಪಮಾನಿಸುವರು. (ಮೇಲೆ ನೋಡಿ) ಎಲಾ! ಇವರು ವಿಮಾನಚಾರಿಗಳಾದ ವಿಶ್ವೇದೇವತೆಗಳು. ಒಳ್ಳೇದು. (ಕ್ರೋಧವನ್ನು ಅಭಿನಯಿಸಿ ಕಮಂಡಲುವಿನಿಂದ ಶಾಪಜಲವನ್ನು ತೆಗೆದುಕೊಂಡು) ಫಡಫಡೆಲವೊ ಕ್ಷುದ್ರಕ್ಷತ್ರಿಯಪಕ್ಷಪಾತಿಗಳಾದ ಅವಿವೇಕಿಗಳೆ!

* ಕಂ॥ ನಿವಗ್ಗೆವರ್ಗಂ ಜನ್ಮಂ।
ಸವನಿಸುಗುಂ ಕ್ಷತ್ರಜಾತಿಯೊಳಗಾಬಳಿಕಂ॥
ಕುವರರ್ಕ್ಕಳಾದ ನೀಂಗಳ।
ನವನಿಸುರಂ ದ್ರೌಣಿಯಿರದೆ ನಿಸದಂ ಕೊಲ್ಗುಂ॥

(ಪುನಶ್ಚ ಮೇಲೆ ನೋಡಿ)

ವೃ॥ ಬುವಿಗಸ್ಮದ್ದೃಷ್ಟಿಪಾತಪ್ರಭಯುಚಲಿತಘಂಟಾರಣತ್ಕಾರದಿಂ ತೀ । ವೆ ವಿಸುದ್ಭಾಗಂ ಸ್ಖಲತ್ಪುಷ್ಪಕದಿನುರುಳ್ದಪರ್ ಕಂಪವಮಾನಧ್ವಜಾಗ್ರ॥ ಪ್ರವಿಲಂಬಚ್ಛೀನವಾಸೋವಲಯಿತವುಕುಟೀಕೋಟಿಗಳ್ ಭ್ರಷ್ಟವಾಣಿ । ಕ್ಯವಿರಾಜತ್ಕುಂಡಲರ್ ಭಾಪವುರರಿವರಧೋವಕ್ತ್ರರಾಗುತ್ತವಿಾಗಳ್॥

ರಾಜ-(ಮೇಲೆ ನೋಡಿ ಭಯದಿಂದ ಕೂಡಿ) (ಸ್ವ) ತಪಃಪ್ರಭಾವವು ಆಶ್ಚರ್ಯಕರವಾದುದ್ದು. ಹರಿಶ್ಚಂದ್ರನು ಕ್ಲೇಶಪಡುವುದೆಂಬುವುದು ಯುಕ್ತವಾದುದ್ದು ತಾನೆ? (ಪ್ರಕಾಶಂ) ಪೂಜ್ಯರೆ! ಸಾಕು ಬೇರೆ ಎಣಿಸಕೂಡದು.

ಕಂ॥ ಗಳಿಸಿದುದಿದು ಪೆಂಡಿರ್ಮ।
ಕ್ಕಳ ವಿಕ್ರಯದಿಂದವಿಂದಿದಂ ಸ್ವೀಕರಿಸಿಂ॥
ಉಳಿದ ಧನಕ್ಕಾನಂತ್ಯಜ।
ನೊಳಾದೊಡಂ ಮಾಳ್ಪೆನೆನ್ನ ತನುವಿಕ್ರಯಮಂ॥

ವಿಶ್ವಾ-(ಕೋಪದಿಂದ) ಅರ್ಧದಿಂದೇನು? ಬೇಡ. ಕೊಡುವುದಾಗಿದ್ದರೆ ನಿಶ್ಶೇಷವಾಗಿ ಕೊಡು.

ರಾಜ—ಎಲ್ಲೈ ಸಾಧುಗಳಿರಾ! (ಪಿರಿದುಂ ಕಾಣದೆ ಎಂಬ ಕಂದವನ್ನು ಹೇಳುವನು. ಅನಂತರ ಚಂಡಾಲವೇಷದಿಂದ ಧರ್ಮಪುರುಷನು ಅನುಚರನೊಡಗೂಡಿ ಪ್ರವೇಶಿಸುವನು.)

ಧರ್ಮ-(ಸ್ವಗತಂ)

ಕಂ॥ ಧರಿಸಿದಪೆನಾಂ ಜಗತ್ತಂ।
ಧರಿಕುಂ ಸತ್ಯಂ ಜಗತ್ತಿನೊಡಪೆರೆದೆನ್ನಂ॥
ಕರವಿಾಯರಸನ ಸತ್ಯನ।
ಪರೀಕ್ಷಿಸಲ್ ತಳೆದೆನೀಗಳೀ ಜಾತಿಯುಮಂ॥

(ಚೆನ್ನಾಗಿ ಯೋಚಿಸಿ ಆಶ್ಚರ್ಯದಿಂದ ಕೂಡಿ) ಯೋಗ ವಿಶೇಷದಿಂದ ನಾನು ಎಲ್ಲವನ್ನು ಕಾಣಬಲ್ಲವನಾದರೂ ಈ ಮಹಾರಾಜನಿಗೆ ಸಮಾನನಾದ ಮತ್ತೊಬ್ಬನನ್ನು ಕಾಣೆನು. ಆಗಲಿ ಆತನ ಸವಿಾಪಕ್ಕೆ ಹೋಗುವೆನು. (ಬಂದು ಪ್ರಕಾಶವಾಗಿ) ಎಲೊ ಸಾರಮೇಯಕನೆ! ಹಣದ ಪೆಟ್ಟಗೆಯನ್ನು ತೆಗೆದುಕೊಂಡು ಬಂದಿರುವೆಯೊ?

ಅನುಚರ—ಮಹತ್ತರಕನೆ! ನೀನು ಚಿನ್ನದ ಮನೆಯನ್ನು ಕಟ್ಟಿಸಬೇಕಾಗಿಧೆಯೋ ಏನು?

ಮಹ—ಅವನ್ನೆಲ್ಲ ಕೇಳಿ ನಿನಗೇನು ಪ್ರಯೋಜನ? (ಎಂದು ಬರುವನು.)

ರಾಜ—("ಪಿರಿದುಂ ಕಾಣದೆ" ಎಂಬ ಪದ್ಯವನ್ನು ಹೇಳಿ, ಲಕ್ಷಾರ್ಥವೆಂದು ಎಲ್ಲಾಕಡೆಗೂ ನೋಡಿ) ಅಯ್ಯೋ! ಮಂದಭಾಗ್ಯನಾದ ನನ್ನನ್ನು ಕೇಳುವವರೆ ಇಲ್ಲವಲ್ಲ. ಏನುಮಾಡಲಿ? ಹಾ! ಕೆಟ್ಟೆನು (ಎಂದು ಮೂರ್ಛಿಸಿ ಬೀಳುವನು.)

ಧರ್ಮನು--(ಕೇಳಿ, ನೋಡಿ, ಸ್ವಗತಂ) ಮಹಾತ್ಮನಾದ ಈತನು ಮೂರ್ಛೆಹೊಂದಿರುವನಲ್ಲ! ಒಳ್ಳೇದು! ಆಗಲಿ! ಹೀಗೆಮಾಡುವೆನು. (ತ್ವರೆಯಿಂದ ಬಳಿಗೆ ಬಂದು ಪ್ರಕಾಶವಾಗಿ) ಎಲೈ ಏಳೇಳು. ನಿನ್ನನ್ನು ನಾನು ಕೊಂಡುಕೊಳ್ಳುವೆನು. ಇದೊ ತೆಗೆದುಕೊ, ನೀನು ಕೇಳಿದಷ್ಟು ಹಣವನ್ನು ಕೊಡುವೆನು.

ರಾಜ—(ಸಂತೋಷದಿಂದೆದ್ದು) ಎಲೈ ಸಾಧುವೆ! ಎಲ್ಲಿ? ತೆಗೆದು ಕೊಂಡು ಬಾ. ತೆಗೆದುಕೊಂಡು ಬಾ. (ನೋಡಿ ವಿಷಾದದಿಂದಕೂಡಿ) ಭದ್ರನೆ! ನನ್ನನ್ನು ಅಪೇಕ್ಷಿಸಿದವನು ನೀನೆಯೊ?

ಧರ್ಮ—ಹೌದು. ನಾನೆ ನಿನ್ನನ್ನು ಅಪೇಕ್ಷಿಸಿದವನು.

ರಾಜ—ಹಾಗಾದರೆ ನೀನು ಯಾರು?

ಧರ್ಮ—ನಾನು ಎಲ್ಲಾ ಶ್ಮಶಾನಗಳಿಗೂ ಮಸಣಗಳಿಗೂ ಒಡೆಯನಾದ ಚಂಡಾಲಮಹತ್ತರಕನು.

ರಾಜ—(ಭಯದಿಂದ ಹಿಂದಕ್ಕೆಹೋಗಿ ವಿಶ್ವಾಮಿತ್ರನಡಿಗಳಿಗೆರಗಿ) ಪೂಜ್ಯರೆ! ಪ್ರಸನ್ನರಾಗಿ ಪ್ರಸನ್ನರಾಗಿ.

ಕಂ ॥ ಯತಿಪತಿ ನಿಮಗಾನಾಳಾ ।
ಗುತೆ ಋಣಮಂ ಕಳೆದುಕೊಳ್ವುದುಚಿತಮಿದೆನಗ ॥
ಶ್ರುತದೃಷ್ಟಪೂರ್ವಮೆನಿಕುಂ ।
ಕ್ಷಿತಿಯೊಳ್ ಚಂಡಾಲದಾಸ್ಯಮೆನಿಪುದುನೋಡಲ್ ॥

ವಿಶ್ವಾ—ತೆಗೆ ಮೂರ್ಖನೆ ತೆಗೆ! "ಸ್ವಯಂದಾಸಾಸ್ತಪಸ್ವಿನಃ" ಎಂದು ಇರುವಾಗ ನೀನು ದಾಸನಾಗಿ ನಮಗೆ ಮಾಡತಕ್ಕದ್ದೇನು?

ರಾಜ—(ವಿನಯದಿಂದ) ಪೂಜ್ಯರೆ! ಏನು ಅಪ್ಪಣೆಯಾಗುತ್ತೊ ಅದನ್ನು ಮಾಡುವೆನು.

ವಿಶ್ವಾ—ಎಲೈ ವಿಶ್ವದೇವರ್ಕಳ್! ನೀವು ಕೇಳಿ. ನಾವು ಹೇಳಿದ್ದನ್ನು ಮಾಡುತ್ತೀಯೊ?

ರಾಜ—ನಿಜವಾಗಿ ಮಾಡುವೆನು.

ವಿಶ್ವಾ—ಹಾಗಾದರೆ ಈತನಿಗೆ ನಿನ್ನ ಆತ್ಮವನ್ನು ವಿಕ್ರಯಿಸಿ ನಮ್ಮ ದಕ್ಷಿಣಾದ್ರವ್ಯವನ್ನು ಕೊಡು.

ರಾಜ—(ಚಿಂತೆಯಿಂದ ಸ್ವಗತ) ಓಹೋ! ಇನ್ನೇನು ಗತಿ! (ಪ್ರ) ಪೂಜ್ಯರೆ! ಅಪ್ಪಣೆಯಾದಂತೆ ನಡೆದುಕೊಳ್ಳುವೆನು. (ಚಂಡಾಲನ

ಬಳಿಗೆ ಬಂದು) ಎಲೈ ಸ್ವಜಾತಿಮಹತ್ತರಕನೆ! ನಿಬಂಧನೆಯಿಂದ ನನ್ನನ್ನು ಕೊಂಡುಕೊಳ್ಳಬೇಕು.

ಚಂಡಾಲ—ಆ ನಿಬಂಧನೆ ಏನು? ಹೇಳು.

ರಾಜ—ಕೇಳಬೇಕು.

ಕಂ॥ ದೂರದೆ ನಿಲ್ವೆಂ ಭೈಕ್ಷವ।
ನಾರೊಗಿಪೆಂ ಪೊದೆವೆನೆಡೆಯಬಟ್ಟೆಯನಾಳ್ದಂ॥
ಮೀರದೆ ಬೆಸಸಿದ ಕಾರ್ಯಮ।
ನೋರಂತೆ ವಿಚಾರವಿಲ್ಲದಾನಾಗಿಸುವೆಂ॥

(ಇಬ್ಬರೂ ಸಂತೋಷಿಸಿ)

ಚಂಡಾಲ—ಎಲೈ! ನಿನ್ನ ಸಮಯವಾದರೊ ಬಹು ಯೋಗ್ಯವಾಗಿರುವುದು. ತೆಗೆದುಕೊ ಈ ದ್ರವ್ಯವನ್ನು, (ಎಂದು ದೂರದಿಂದಲೇ ಕೊಡುವನು.)

ರಾಜ—(ಗ್ರಹಿಸಿ ಸಂತೋಷದಿಂದ ವಿಶ್ವಾಮಿತ್ರನನ್ನು ಕುರಿತು) ಪೂಜ್ಯರೆ! ನಿಮ್ಮ ಈ ದ್ರವ್ಯವನ್ನೆಲ್ಲ ಸ್ವೀಕರಿಸಬೇಕು.

ವಿಶ್ವಾ—(ಲಜ್ಜೆಯಿಂದಕೂಡಿ) ಕೊಡುವೆಯೋ?

ರಾಜ—(ವಿನಯದಿಂದ) ಸ್ವೀಕರಿಸಬೇಕು.

ವಿಶ್ವಾ—(ತೆಗೆದುಕೊಂಡು, ಸ್ವಗತ) ಇನ್ನು ನಿರ್ಬಂಧದಿಂದೇನು? ಆಗಲಿ ಹೋಗುವೆನು. (ಎಂದು ನಾಚಿಕೊಂಡುಹೋಗುವನು.)

ರಾಜ—(ವಿನಯದಿಂದ ಕೈಮುಗಿದುಕೊಂಡು) ಪೂಜ್ಯರೆ! ಕಾಲವಿಳಂಬದಿಂದಾದ ನನ್ನ ಅಪರಾಧವನ್ನು ಸೈರಿಸಬೇಕು.

ವಿಶ್ವಾ—ಸೈರಿಸಿದೆವು. (ಎಂದು ಹೋಗುವನು.)

ರಾಜ—(ಸಂತೋಷದಿಂದ)

ಕಂ॥ ಅನೃಣನೆನಿಸುತ್ತೆ ಮತ್ತಾ।
ಮುನಿಶಾಪಕ್ಕೀಡೆನಿಸದೆ ಸತ್ಯಚ್ಯುತನೆಂ॥
ದೆನಿಸದ ಕತದಿಂದಮೆ ವಲ।
ಮೆನಗೀ ಚಂಡಾಲದಾಸ್ಯಮುಂ ವರಮಲ್ತೆ॥

(ಚಂಡಾಲನ ಬಳಿಗೆ ಹೋಗಿ) ಎಲೈ ಸ್ವಜಾತಿಮುಷತ್ತರಕನೆ! (ಎಂದ ಧೂರ್ಜೋಕ್ತಿಯಲ್ಲಿ ಬಾಯಿ ಮುಚ್ಚಿಕೊಂಡು) ಎಲೈ ಸ್ವಾಮಿಯೆ! ಆಜ್ಞಾಪಿಸಬೇಕು. ಭೃತ್ಯನಾದ ನಾನು ಮಾಡತಕ್ಕ ಕೆಲಸವೇನು ?

ಧರ್ಮಪುರುಷ—(ಸಂತೋಷದಿಂದ ಕೂಡಿ ಆತ್ಮಗತ) ಯಾವಾಗಲೂ ಕಂಡು ಕೇಳದ ಕೆಲಸ.

(ಪ್ರಕಾಶ) ಎಲವೊ ದಕ್ಷಿಣಶ್ಮಶಾನಕ್ಕೆ ಹೋಗಿ ಮೃತರಾದವರ ಬಟ್ಟೆಯನ್ನು ಸೆಳೆಕೊಳ್ಳುತ್ತ ಹಗಲಿರುಳು ಜಾಗರದಿಂದಿರು. ಹೋಗು, ನಾನು ಕೂಡ ಮನೆಗೆ ಹೋಗುವೆನು.

ರಾಜ—ಅಪ್ಪಣೆ ಸ್ವಾಮಿ ! (ಎಂದು ಎಲ್ಲರೂ ತೆರಳುವರು.)

ತೃತೀಯಾಂಕಂ ಸಮಾಪ್ತಂ.

ನಾಲ್ಕನೆಯ ಅಂಕ.

(ಅನಂತರ ಚಂಡಾಲರಿಂದೊಡಗೂಡಿ ಚಿಂತಾಕ್ರಾಂತನಾದ ರಾಜನು ಪ್ರವೇಶಿಸುವನು)

ಚಂಡಾಲರು—ಆರ್ಯರೆ! ದಾರಿಬಿಡಿ ದಾರಿಬಿಡಿ. ಈತನು ವಧ್ಯನಲ್ಲ. ಏತಕ್ಕಿಲ್ಲಿ ನೋಡುತ್ತೀರಿ. (ಕಿವಿಗೊಟ್ಟು) ಆರ್ಯರೆ! ಏತಕ್ಕಿವನನ್ನು ತೆಗೆದುಕೊಂಡು ಹೋಗುತ್ತೀರೆಂದು ಕೇಳುವಿರೊ? ದೀನನಾದ ಇವನು ಸ್ವಾಮಿಯಾದ ಮಹತ್ತರಕನಿಂದ ಬಹಳ ದ್ರವ್ಯವನ್ನು ತೆಗೆದುಕೊಂಡು ಭೃತ್ಯತ್ವವನ್ನೊಂದಿರುವನು. ಆದುದರಿಂದ ಕಾಪಾಡುವ ನಿಮಿತ್ತ ದಕ್ಷಿಣಶ್ಮಶಾನಕ್ಕೆ ಇವನನ್ನು ಕರೆದುಕೊಂಡು ಹೋಗುವೆವು.

ರಾಜ-(ನಿಟ್ಟುಸುರನ್ನು ಬಿಟ್ಟು ಆತ್ಮಗತ) ನನಗೆ ಅವಧಿಯಿಲ್ಲದೆ ಮೇಲೆ ಮೇಲೆ ಅತಿ ದಾರುಣವಾಗಿ ವ್ಯಸನಪರಂಪರೆಯು ಬರುತ್ತಲಿದೆ. ಹಾಗೆಯೇ ಸರಿ!

ಕಂ॥ ಪೊಲೆಯನೊಳೆನಗಾಳ್ತನಸಂ।
ನೆಲೆ ಘೋರತರಂ ಶ್ಮಶಾನವಕಟಾ ಮೃತಕಂ॥
ಬಳವಿಾಳ್ದ ಕೆಲಸಮಿಂತಾ।
ಕುಲಿತೆಯೊಳಂ ಶಾಂತಿವಡೆಯದಹಹಾ ದೈವಂ॥

(ವ್ಯಸನದಿಂದ) "ದುಃಖಂದುಃಖೈಸ್ತಿರೋಧೀಯತೇ" ಎಂದೊರೆವುದು ಸುಳ್ಳಲ್ಲ. ಏತಕ್ಕೆಂದರೆ ಋಣವಿಮುಕ್ತನಾದೆನೆಂದು ನೆಮ್ಮದಿಯಾಗಿದ್ದ ನನಗೆ ಕೂಡಲೆ ಆಳ್ತನಸದ ದುಃಖವು ಬಾಧಿಸುವುದಕ್ಕೆ ತೊಡಗಿತು. ಏನುಮಾಡಲಿ?

ವೃ॥ ಅಳಲುವೆನಾರ್ಗೆ ಸಂಟುಮಿಗಿಲೆನ್ನನೆ ಸೇರ್ದ್ದಕಟೇಗನಾಥರಾ! ಗಳಲುವ ನಾಡಿಗಗೆರ್ಗೆ ಪ್ರಿಯಬಂಧುಜನಗೆರ್ಗೆ ಶರ

ಣ್ಯರಿಲ್ಲದಾ ‖ ಕುಲಿಸುವ ಸೇವಕಗೊರ್ಗ ಬುಧಸದ್ಮದೆ ತೊಳ್ತನಿ
ಸಿರ್ಪ್ರ ದೇವಿಗೋ | ಎಳೆಗುವರಂಗೊ ಮೇಣ್ಪೊಲೆಯನಾಳೆ
ನಿಪೆನ್ನಯ ಕೀಳು ಬಾಳ್ಕೆಗೋ ‖

(ಸ್ಮರಣೆಯನ್ನಭಿನಯಿಸಿ ವ್ಯಸನದಿಂದ)

ವೃ‖ ಉಪಚರಿಸಲ್ಕೆ ಶಕ್ಯನೆ ತಪೋನಿಧಿ ಗಾಧಿತನೂಜನಾ ಮಹಾ |
ತಪನೊಳಗಾಂತೆನಾಂ ಋಣವಿಮುಕ್ತಿಯನಂತಧಿಕಪ್ರಯಾಸ
ದಿಂ ‖ ಕುಪಿತಮಹೀಸುರಂ ಕೆಡಪಲಂದಳುತಿರ್ದ್ದಳಗೂಸ
ಕಂಡಳಲ್ | ತಪಿಸುಗುಮೆನ್ನನಿಂದಕಟ ಮುಳ್ಳುಡಿದುರ್ವಿದ
ಗಾಯದಂತೆವೋಲ್ ‖

(ಚಿಂತಿಸಿ ಖೇದದಿಂದ ಕೂಡಿ ಸ್ವಗತ) ಹಾ! ಇದಲ್ಲದೆ ಅದು ಬೇರೆ
ನನ್ನನ್ನು ಬಲವಾಗಿ ಪೀಡಿಸುವುದು.

ವೃ‖ ತ್ವರೆಗೆಯ್ಯಲ್ ಗುರುಭಕ್ತಿಯಿಂದೆ ವಟು ತನ್ನೊಳ್ ನೀಡು
ಮಾಕ್ರೋಶದಿಂ | ಸೆರಗಂ ಬಂಧಿಸಿ ರೋದಿಸುತ್ತಿರೆ ಕರಂ
ಬಾಲಂ ತದಾಕ್ಷೇಪದಿಂ ‖ ಮರುಗುತ್ತಾಕೆ ನಿರುದ್ಧಬಾಷ್ಪ ಜಲ
ದಿಂದಂ ನಾಡೆ ನಾಂದಿರ್ದ್ದಕೇ | ಕರದಿಂ ಕ್ರೂರನನೆನ್ನ ನೋಡಿ
ದುದೆ ತಾಂ ಮಚ್ಚಿತ್ತಮಂ ಪೀಡಿಕುಂ ‖

(ಚಿಂತೆಯಿಂದ) ಹಾ ದೇವಿಯೆ!

ಕಂ‖ ಸಸಿಕುಲದೊಳೊಗೆದು ಮತ್ತಾ |
ಬಿಸಜಸಖಾನ್ವಯಕೆ ತಕ್ಕಸತಿಯೆನಿಸಿದ ನೀಂ ‖
ಅಸಿಯಳೆ ಕೇಳಾಜ್ಯಾಹುತಿ |
ಭಸಿತದೆ ಕೆಡೆದಂತೆ ಕೆಡೆದೆಯೆಂತಕಟನ್ನೊಳ್ ‖

ಇದಲ್ಲದೆ ಎಲೌ ರಾಜಪುತ್ರಿಯೆ!

ಕಂ॥ ಬಳಲುತ್ತಮಿರ್ದೆಯುಪವನ ।
ದಲರಂ ಸರಗೊಳಿಪೊಡಕಟ ಕೋಮಳೆ ದಾಸೀ ॥
ಕುಲಕುಚಿತಮೆನಿಪ ಕಾರ್ಯ೦ ।
ಗಳನೆಂತೆಸಗಿದಪೆಯಾವಗಂ ಮಾಡದುವಂ ॥

ಚಂ—ಎಲೈ ಬೇಗನಡೆ. ಅದೊ! ಅಲ್ಲಿ ಕಾಣುವುದೆ ದಕ್ಷಿಣಶ್ಮಶಾನವು.

ರಾಜ—(ನೋಡಿ ದಿಟ್ಟತನದಿಂದಕೂಡಿ) ಓಹೊ ! ಇದೇಯೋ ಮಹಾ ಶ್ಮಶಾನ ? ಹೌದು.

ವೃ॥ ಉಡುಪಥದೊಳ್ ವಲಂ ಬಳಕೆಗೊಂಡುರುಮಂಡಲಚಾರದಿಂ
ವಣಾ ¦ ಮಿಡುಕದೆ ಬಿತ್ತರಂಬಡೆದೆರಂಕೆಗಳಿಂ ಕಡುದೂರದ
ತ್ತಣಿಂ ‖ ಕೆಡವಪುವಾಸೆಯಿಂ ಪೆಣದಬಾಡಿಗೆ ಬಿಚ್ಚಿದ ಬಾ
ಯ್ಗಳತ್ತಣಿಂ ¦ ಬಿಡದುಗುತಿರ್ಪ್ಪ ಜೊಲ್ಲಿಡಿದ ಚಂಚುಪುಟಂಬ
ಡೆದಿರ್ದ್ದ ಪದ್ದುಗಳ್ ‖

ತೆರೆಯಲ್ಲಿ ಕಲಕಲವಾಗುವುದು.

ರಾಜ—(ಕಿವಿಗೊಟ್ಟು ನೋಡಿ) ಆಹ ! ಮಹಾಶ್ಮಶಾನವು ನೋಡು ವುದಕ್ಕೆ ಭೀಭತ್ಸವಾಗಿಯೂ ರೌದ್ರವಾಗಿಯೂ ಕಾಣುವುದು. ಹಾಗೆಯೇ ಸರಿ.

ವೃ॥ ಅಡಿಗಡಿಗೂಳ್ವ ಜಂಬುಕವಿರಾವಮುಮಂಗಳತಂಬಟಾರವಂ ।
ಕೊಡಕೆಯನಾಕುಲಿಪ್ಪುದೆಡೆಯೊಳ್ ಸಲೆ ಮಾರ್ದನಿಗೊಂಡದೆ
ತ್ತಲುಂ ‖ ಒಡೆದ ಕರೋಟಿಯಿಂದುಗುವ ಬಲ್ಮಿದುಳಿಂದವಮೆ
ನಾಂದು ಬಲ್ವಲಂ । ಕಿಡೆ ಜಟಿಲಾಗ್ರಮುಜ್ವಲಿಸುತಿರ್ದ್ದಪುವೀ
ಕ್ಷಿಪೊಡೀ ಕೃಶಾನುಗಳ್ ‖

(ಮುಂದೆ ನೋಡಿ ಶ್ಲಾಘಿಸಿ) ಆಹ ! ಭೀಭತ್ಸಕರವಾದರೂ ಸ್ಪೃಹಣೀಯವಾಗಿದೆ. ಎಲೈ ಭದ್ರಕುಣಪವೆ ! ಸರ್ವಸ್ವವನ್ನು ಗ್ರಹಿಸುವ

ಶುನಕಶ್ವಾಪದಗಳಿಂದ ಉಪಭೋಗಿಸಲ್ಪಡುವ ನೀನೇ ಧನ್ಯನು. ಹಾಗೆಯೇ ಸರಿ.

ಕಂ॥ ಕರಟಂ ಕೀಳ್ಗುಂ ಕಣ್ಗಳ।
ನರಿ ನೊಣೆಗುಂ ಸುರುಳ್ದರಸನೆಯಂ ಮೇಣ್ ಸೊಣಕಂ॥
ಪರಿಗುಂ ಗುಹ್ಯಮನಿದೆ ಬಿ।
ತ್ತರಿಕುಂ ನಿನ್ನಂತ್ಯವಿವರಮಂ ಪರ್ದ್ದರಿಂ॥

ಆಹ! ಶರೀರದ ನಿಸ್ಸಾರತೆಯನ್ನು ಏನು ಹೇಳಲಿ?

ಕಂ॥ ಆನಡುವಾಯೆರ್ದೆಯಾ ಪು।
ಬ್ಬಾನಯನಾನನಮುಮಸ್ಥಿಮಲಮಾಂಸವಸಾ॥
ದ್ಯಾನಿಚಿತಂ ಕಾಮುಕರಭಿ।
ಮಾನಿಪರಢನರಿದರಂತು ಪೇಸುವರಲ್ತೇ॥

ಚಂ—(ಮುಂದೆನೋಡಿ ಮತ್ತೊಬ್ಬನನ್ನು ಕುರಿತು) ಎಲವೋ! ಈ ದೊಡ್ಡಮರದ ತುದಿಯಲ್ಲಿರುವ ಪೂಜ್ಯಳಾದ ಚಂಡಕಾತ್ಯಾಯನಿಯನ್ನು ನಮಸ್ಕರಿಸುವ.

ಚಂ—(ಇನ್ನೊಬ್ಬನು) ಹಾಗೆ ಮಾಡುವ. (ಎಂದು ನಮಸ್ಕರಿಸಿ)

ಕಂ॥ ಅಸಿಯಿಂ ಚಂಡನ ಖಂಡಿಸಿ।
ತಿಸುಳದಿನಿರಿದೆತ್ತಿ ಮಹಿಷನಂ ತೊವಲುಡೆ ರಂ॥
ಜಿಸಿ ಸೊಗಯಿಪ ಕಾತ್ಯಾಯನಿ।
ಸಸಿದಲೆಯನ ಮಡದಿ ದೇವಿ ಕಾಪಾಡೆಮ್ಮಂ॥

ರಾಜ—(ಎಲ್ಲಾಕಡೆಗೂ ನೋಡಿ) ಆಹ! ಕಾತ್ಯಾಯನಿಗೆ ಭೀಭತ್ಸೋಪಚಾರದಲ್ಲಿ ಎಷ್ಟು ಪ್ರೀತಿ!

ವೃ॥ ಪಳೆದಂ ನಿರ್ಮಾಲ್ಯಮಂ ತಾಳ್ದಳವ ಮಹಿಷಗೋಕಂಠದಿಂ ದಂ ಪಡಲ್ವಿ। ಟ್ಟೆಳಲುತ್ತಿರ್ಕ್ಕುಂ ನಿಕಾಮಂ ಶ್ರವಣ ಕಟುರಣ ತ್ಕಾರಘಂಟಾಪ್ರತಾನಂ ॥ ಬಲಿಭುಗ್ವ್ರಾತಂ ಸಮಂಚತ್ಪ್ರ

ಕೃತಬಲಿವಿಲೋಲಂ ವಲಂ ಕೂಗೆ ತನ್ನೊಳ್। ಮಿಳಿರ್ದಿಕ್ಕ್ಕರ್ಗಂ
ಸಾಸ್ರ ಪಂಚಾಂಗುಳಿದಳಮಿದೊ ದೇವೀ ತರುಸ್ತಂಭವಾದಂ॥

(ವಂದಿಸಿ ಕೈಮುಗಿದು)

ಗೀತಿ ॥ ಪ್ರೇತೇ ಪ್ರೇತ ವಿಮಾನ ।
ಪ್ರೀತೇ ಪ್ರೇತಾಸಿ ರೌದ್ರತರರೂಪೇ ॥
ಪ್ರೇತಾತಿಲಸತ್ಪ್ರೇತೇ ।
ಮಾತರ್ಭೈರವಿ ನಮೋಽಸ್ತುತೇ ಚಂಡೀ ॥

(ತೆರೆಯಲ್ಲಿ ಕಲಕಲವಾಗುವುದು ರಾಜನು ಕೇಳಿ)

ಓಹೋ! ಇದು ಸಂಧ್ಯಾಕಾಲದಲ್ಲಿ ತಮ್ಮ ತಮ್ಮ ಗೂಡಿಗೆ ಹೋಗ ಲೆಳಸಿದ ಪಕ್ಷಿಗಳ ಕಲಕಲವು. (ಪಡುವಲಕಡೆ ನೋಡಿ) ದೈವ ಪರಿಪಾಟಿಯು ಯಾರಿಂದಲೂ ವಿಾರಲಸಾಧ್ಯವು.

ಕಂ॥ ತಾರಾಪಥದೀಪಂ ಕಾ ।
ಲೋರಗರಾಜತ್ಫಣಾಲಸನ್ಮಾಣಿಕ್ಯಂ ॥
ವಾರಿಧಿಯೊಳ್ ಕೆಡೆದಪನೀ ।
ಸೂರಂ ಜಾಡಬವಿಡಂಬಿವಪು ವಿಧುರತೆಯಿಂ ॥

(ಎಲ್ಲಾ ಕಡೆಗೂ ನೋಡಿ ಆಶ್ಚರ್ಯದಿಂದ ಕೂಡಿ)

ವೃ॥ ನವಸಂಧ್ಯಾವಧ್ಯರಕ್ತಾರುಣಮುಹಹ ಚಿತಾಂಗಾರಮಂದಾರ್ಕ ಮೃಕ್ಷ್ಮ । ಸ್ಥಿವಿಕೀರ್ಣಂ ಸಿಪ್ಪತನ್ಮಾಸವಪಿಶಪಕರಂಕೇಂದು ಸಾನಂದರಕ್ಷೋ ॥ ನಿವಹಂ ಗಾಢಾಂಧಕಾರ ಪ್ರಸ್ರವುರಸು ಮಹದ್ಧೂಮಧೂಮ್ರಾನುಕಾರಂ । ಭುವನಂ ಲೀಲಾಶ್ಮಶಾನಂ ವಲಮೆನಿಸಿದುದಾ ಕಾಲಕಾಪಾಲಿಗೀಗಳ್ ॥

ಚಂ-(ನೋಡಿ) ಇದೇನು ?

ಕಂ॥ ಕೊಲೆದಾಣವನ್ನೆದಿದವೊಲ್ ।
ಕೊಲೆಗೀಡಾಗಿರ್ಪ ಜಂತು ಭಾಸ್ಕರನಸ್ತಾ ॥
ಚಲವಂ ಪೊರ್ದಲ್ ಬಲ್ಗ ।
ತ್ತಲೆಯೆತ್ತಂ ಪೊಲೆಯರಂತೆ ಸುಳಿಯುತ್ತಿರ್ಕುಂ ॥

ರಾಜ-(ನೋಡಿ ಧೈರ್ಯದಿಂದ) ಆಹ! ಈ ಶ್ಮಶಾನವೃಕ್ಷಗಳು ಅತಿ ಭಯಂಕರವಾಗಿರುವುವು.

ವೃ॥ ನೆಗೆದಾಸ್ಕಂಧಂಬರಂ ವಿಸ್ತೃತಕುಹರಗೃಹದ್ವಾರದೊಳ್ ಕೂಗುಗುಂ ಗೂ । ಗೆಗಳಾದಂ ಪದ್ದುಗಳ್ ಪೊಯ್ದುರಕೆಯುಸುಳಿಯುತ್ತಗ್ರದೊಳ್ ಬೀಳುತಿರ್ಕುಂ ॥ ಮಿಗೆ ಶಾಖಾಲಂಬಿ ಶೀರ್ಷತ್ಕುಣಪ ಘನವಸಾಗಂಧಮಂ ವಾಸಿಸುತ್ತಂ । ಬಿಗುರಪ್ಪಂತಾಗಿಕುಂಪೇತ್ಕೃತಿಗಳನುರಿಯುಂ ಕಾರುವೀ ಘೋರವಂಗಳ್ ॥

ಒಬ್ಬಚಂ—ಎಲಾ! ದಕ್ಷಿಣಶ್ಮಶಾನವು ಅನೇಕ ಬೇತಾಳಗಳಿಂದ ಆಕ್ರಾಂತವಾಗಿರುವುದು. ಆದುದರಿಂದ ಬೇಗಬೇಗ ಹೋಗುವ.

ಮತ್ತೊಬ್ಬ—ಹಾಗೆಯೆ ಮಾಡುವ. (ರಾಜನನ್ನು ನೋಡಿ) ಎಲೈ! ಮಹತ್ತರಕನ ಆಜ್ಞೆಯಾದಂತೆ ಈ ಶ್ಮಶಾನವನ್ನು ಹಗಲಿರುಳು ಕಾದುಕೊಂಡು ಇರತಕ್ಕದ್ದು. ಎಚ್ಚರ ಎಚ್ಚರ.

ರಾಜ-(ಸಂತೋಷದಿಂದ) ಹಾಗೆಯೇ ಆಗಲಿ ಒಡೆಯನಾಜ್ಞೆಯಾದಂತೆ.

(ತೆರೆಯಲ್ಲಿ ಕಲಕಲವಾಗುವುದು)

ಚಂ-(ಭಯದಿಂದ) ಅಯ್ಯೋ! ಅಮ್ಮ! ಭೂತಗಳದ್ದುವು ಬೇಗ ಬೇಗ ಓಡಿಹೋಗುವ. (ಎಂದು ಹೋಗುವರು)

ರಾಜ-(ಧೈರ್ಯದಿಂದ ಮುಂದೆ ಹೋಗಿ ನೋಡಿ) ಆಹ! ಈ ಪಿಶಾಚಗಳನ್ನು ನೋಡುವುದು ಬಹು ಭೀಭತ್ಸಕರವಾಗಿರುವುದು.

ವೃ॥ ನಯನಂ ಪಾಳ್ಬಾವಿಯಂ ಪೋಲ್ತಿರ್ಪುದು ತನುಸಿರಾಷೀಕರಂ ಘೋರಣಮಾದಂ । ಭಯಮಂ ಮಾಳ್ಕುಂ ಮೊಗಂ ಪಲ್ ಕುಟಿಲಮುರುತರಸ್ಥಾಯುಸಂಛನ್ನಮಂಗಂ ॥ ನಿಯತಂ ಕುಕ್ಷಿಸ್ಥಲಂಭೂರುಹ ಕುಹರತಟೀಸನ್ನಿಭಮಾಗಿರ್ಕುಮಂತಾ। ರಯೆ ನಾಡೀಜಂಘಾಸಂಘಂ ಬಿಗುರ್ವಿಡಿಸವದಾಗಿರ್ೞಕ್ಷ್ಸೆಸಲ್ ತಾನಳುಂಬಂ ॥

(ಕೌತುಕದಿಂದ ನೋಡಿ)

ಆಹ! ಪಿಶಾಚಗಳಿಗೆ ಕ್ರೀಡಾಕಲಾಪದಲ್ಲಿ ಎಷ್ಟು ಕೌಶಲ!

ವೃ॥ ಸುರಿಗುಮದೊಂದರಿಂ ರುಧಿರಪೂರಿತಪಾತ್ರವನೀಳ್ದುಕೊಂಡದೊಂ । ದುರೆ ಪೆರತೊಂದುದೀರ್ಘರಸಸಂ ನೊಣೆಗುಂ ಮೊಗದಿಂದಮೊಕ್ಕುದಂ ॥ ತಿರೆಯೊಳಗೊಕ್ಕ ಶೋಣಿತಕಣಂಗಳನಾಕ್ಷಣಮಂತದೊಂದು ನೀ । ಳ್ದರೆ ರಸನಾಂಚಲಂ ಸವಿಗುಮಾಸೆವಿಗಲ್ ಪಲವುಚ್ಚಕಂಧರಂ ॥

(ಕೌತುಕದಿಂದ ನೋಡಿ ನಕ್ಕು) ಓಹೋ ! ಏನಾಶ್ಚರ್ಯ ! ಮುರ್ಗ್ಧವಗ್ಧರ ಪರಿಹಾಸದಂತೆ ಈ ರಾಕ್ಷಸರ ಕ್ರೀಡೆಯೂ ಕೂಡ ವಿಪರೀತವಾಗಿ ಪರಿಣಮಿಸುವುದು.

ವೃ॥ ಎರ್ದೆನೆಳಲೆಂಬಿಸಂ ಬಿಗಿದಮುಚ್ಚಣವ ತಳ್ಕೆಯದೆತ್ತ ದಾಡೆಗು। ಟ್ಟದ ಬಿರಿಸಿಂಗೆ ಕೇಸರಿಯ ಸೂಸುವ ಚುಂಬನದಂಗಮೊತ್ತಕ ॥ ಲ್ಲದ ತರಿಗೆಂಡದಂತಿರೆ ಪರಸ್ಪರವಿಕ್ಷಿಪ ನೋಟಮೊತ್ತಸ । ಸ್ತ್ರ ದುಮಧುರಾಂಗಸಂಗತಿಯಿನಾಟಿಪ ಕೂಟಮುದೆತ್ತಮಾರಯಲ್ ॥

(ಜಿಗುಪ್ಸೆಯೊಡನೆ ನೋಡಿ) ಶಿಗೆ. ಇದತ್ಯಂತ ಭೀಭತ್ಸಕರವಾದದ್ದು.

ಕಂ॥ ಚಿತಿಶಿಖಿಯಿನೀಳ್ದು ಮುಖಪ್ರ।
ತ್ಕೃತವಾತದೆ ವಂದೆ ಬೊಯ್ದು ನರಶಿರವಮಂ ನುಂ॥
ಗುತೆ ಸುಡೆ ಗಂಟಲ್ ತೃಷ್ಣಾ।
ನ್ವಿತವೊಡನೆ ಮುಗುಳ್ಚುಗುಂ ಪ್ರಭೀತಂ ಪ್ರೇತಂ॥

(ಸ್ಮರಣೆಯನ್ನಭಿನಯಿಸಿ) ಇವುಗಳನ್ನು ನೋಡುವ ಕುತೂಹಲವಿನ್ನು ಸಾಕು. ಒಡೆಯನ ಆಜ್ಞೆಯನ್ನು ಅನುವರ್ತಿಸಿಕೊಂಡು ಶ್ಮಶಾನದಲ್ಲಿ ಚರಿಸುತ್ತಿರುವೆನು. (ಮುಂದೆ ನಡೆದು ನೋಡಿದಂತೆ ಅಭಿನಯಿಸಿ) ಆಹ! ಈ ಇರುಳು ಕವಿದಿರುವುದನ್ನು ಏನು ಹೇಳತಕ್ಕದ್ದು?

ವೃ॥ ತಮಂ ಮುಷ್ಟಿಗ್ರಾಹ್ಯಂ ತವಿಪುದು ದಿಶಾಭಾಗದರಿವಂ । ಸ
ಮಂತಂಘ್ರಿನ್ಯಾಸಂ ಸ್ಖಲಿಪುದಫಲಂ ದೃಷ್ಟಿಪತನಂ ॥ ವಿಮೃ
ಷ್ಟಾನ್ಯದ್ವರ್ಣಂ ಝುರಪತನ ಛಿನ್ನಾಂಜನಕುಭೃ । ತ್ಸಮಂತಾ
ನ್ನೈತಂಬಡೆದು ಮೆರೆಗುಂ ಕಾಳಿಮೆ ಕರಂ॥

ಆಗಲಿ ಗಟ್ಟಿಯಾಗಿ ಕೂಗಿ ಹೇಳುವೆನು. ಯಾರಲ್ಲಿ? ಶ್ಮಶಾನಾಧಿಪತಿಯಾದ ನನ್ನ ಸ್ವಾಮಿಯ ನಿಬಂಧನೋಕ್ತಿಯನ್ನು ಕೇಳಿರಿ.

ಕಂ॥ ತಿಳಿಸದೆನಗೀವ ಮೃತಕಂ।
ಬಳಮಂ ತಾಂ ಕುಡದೆ ಜನಮುದಾರಾದೊಡಮಿಾ॥
ಇಳೆಯೊಳ್ ಶ್ಮಶಾನಯೋಗ್ಯಂ।
ಗಳೆನಿಪ ಕಜ್ಜಗಳನುಜ್ಜುಗಿಸದಿರವೇಳ್ಕುಂ॥

ಕಂ॥ ನಿರವಿಸಿದುದನಾಗಿಪುದೆ।
ಚರದಿಂ ಪತಿಯಾಜ್ಞೆಮಿಾರೆ ಸೈರಿಪನಲ್ಲಾಂ॥
ಸುರಪಾಗ್ನಿಯಮುಗ್ರೋರ್ಕರೆಯಾ।
ಗಿರೆಯುಂ ಮಿಾರ್ದಿರ್ಕಂಗಿದೆನ್ನ ತೋಳ್ ಪ್ರತಿಭಟಕುಂ॥

ಇದೇನು ! ಯಾರೂ ಮಾತಾಡುವದಿಲ್ಲ ! ಬಳ್ಳಿದು. ಇನ್ನೊಂದು ಕಡೆ ಆಡಿ ನೋಡುವೆನು. (ನಡೆದು) ಯಾರಲ್ಲಿ?

ತೆರೆಯಲ್ಲಿ—ಎಲ್ಯೆ ! ನಾನು ನಾನು.

ರಾಜ—ಏನೋ ಪ್ರತಿ ಮಾತಾಡುವಂತಿದೆ. ಆಗಲಿ. (ಆ ಶಬ್ದದ ಬಳಿ ವಿಡಿದು ಹೋಗಿ) ಅದು ಯಾರು? ಚನ್ನಾಗಿ ತಿಳಿಯುವೆನು. (ಹೋಗಿ ತೆರೆಯಕಡೆ ನೋಡಿ ಆಶ್ಚರ್ಯದಿಂದ) ಯಾರಿವನು !

ಕಂ॥ ಕಲಿತಕಪಾಲಂ ಭಸ್ಮಾ।
ನುಲೇಪಿ ಖಟ್ವಾಂಗಧಾರಿಯಸ್ಥಿವಿಭೂಷಾ ॥
ಮಳಕಾಯಂ ನೃಕರಂಕೋ।
ಜ್ಜಳಮೌಳಿ ಗಿರೀಶನಂತೆ ತೊಳಗುತ್ತಿರ್ಪಂ ॥

(ಅನಂತರ ಕಾಪಾಲಿಕ ವೇಷದಿಂದ ಧರ್ಮನು ಪ್ರವೇಶಿಸುವನು)

ಕಾಪಾ—ಎಲ್ಯೆ ! ನಾನು ನಾನು.

ಕಂ ॥ ಎರೆಯುದೆ ದೊರೆದಿಶನವನುಂ।
ಡಿರದಿಂದ್ರಿಯತತಿಯನಿಕ್ಕಿ ದಾಂಟಿಮಹಾಸಂ ॥
ಸರಣಶ್ಮಶಾನವಮಂ ಸಂ।
ಚರಿಪೆನಭೀಭತ್ಸವಿಾ ಶ್ಮಶಾನದೊಳಾದಂ ॥

(ಯೋಚಿಸಿ) ಭಗವಂತನಾದ ಆ ರುದ್ರಮೂರ್ತಿಯು ಈ ಮಹಾ ವ್ರತವನ್ನಾಚರಿಸಲಿಲ್ಲವೆ ? ಆದುದರಿಂದ ಸ್ವಚ್ಛಂದಚಾರಿಗಳಿಗೆ ಇದು ಉತ್ಕೃಷ್ಟವಾದದ್ದೇಸರಿ. ಆದರೆ

ಕಂ ॥ ಮಾತೇಂ ಬಗೆವೊಡೆ ಭೈಕ್ಷಾ।
ದ್ವೈತ ತಪೋದ್ವೈತ ಸತ್ಕ್ರಿಯಾದ್ವೈತಂಗಳ್ ॥
ಭೂತಲದೆ ಸುಲಭಮಾತ್ಮಾ।
ದ್ವೈತಂ ತಾನೊಂದೆ ಪಡೆಯಲಸದಳಮಲ್ತೇ ॥

(ಎಲ್ಲಾಕಡೆಗೂ ನೋಡಿ ಶಂಕೆಯಿಂದ ಕೂಡಿ)

ಕಂ ॥ ಧರಿಸಿದಪೆನಾಂ ಜಗತ್ತಂ ।
ಧರಿಪುದು ಸತ್ಯಂ ಜಗತ್ತಿನೊಡವೆರೆದೆನ್ನಂ ॥
ಕರವಿಾಯರಸನ ಸತ್ಯವ ।
ಪರೀಕ್ಷಿಸಲ್ ತಾಳ್ದೆನೀಗಳೀವೇಷಮನಾಂ ॥

(ಯೋಚಿಸಿ ಆಶ್ಚರ್ಯದಿಂದ ಕೂಡಿ) ಎಷ್ಟು ದುಃಖಗಳು ಬಂದರೂ ವ್ಯಸನಪಡದೆ ಇರುವ ರಾಜರ್ಷಿಯಾದ ಹರಿಶ್ಚಂದ್ರನ ಚರಿತ್ರವು ವಿಚಿತ್ರವಾದದ್ದು. ಅಥವಾ ಮಹಾನುಭಾವರ ಸ್ವಭಾವವೇ ಹೀಗೆ.

ಕಂ ॥ ಸೊಗಮೇಂ ದುಗುಡಮದೇನೀ ।
ಜಗದೊಳ್ ಸುಖದುಃಖಸಂಗಮಜ್ಞರ್ಗಕ್ಕುಂ ॥
ಬಗೆಯಲ್ಕರಿವುಳ್ಳರ್ಗೀ ।
ಸೊಗಮುಂ ಸೊಗಮಲ್ಲ ದುಗುಡನುಲ್ಲಂ ದುಗುಡಂ ॥

ಬಳ್ಳಿಂದು ಆತನ ಬಳಿಗೆ ಹೋಗುವೆನು. (ಹೋಗಿ, ನೋಡಿ, ಶ್ಲಾಘಿಸಿ) ಆಹ! ಈತನನ್ನು ನೋಡಲು ಮಹಾತ್ಮನಾಗಿ ತೋರುವನು. ಆದುದರಿಂದ ಸವಿಾಪಕ್ಕೆ ಹೋಗುವೆನು. (ಬಳಿಗೆಬಂದು) ಎಲೈ ಮಹಾರಾಜನೆ! ಸಿದ್ಧಿಗಳಿಗೆ ಭಾಜನನಾಗು.

ರಾಜ—ಮಹಾವ್ರತವನ್ನು ಆಚರಿಸುವ ನೈಷ್ಠಿಕರಾದ ತಮಗೆ ಸುಖಾಗಮನವೆ ?

ಕಾಪಾ—ಎಲೈ! ರಾಜನೆ! ನಿನ್ನನ್ನು ಕುರಿತು ನಾವು ಅರ್ಥಿಗಳಾಗಿ ಬಂದಿರುವೆವು.

ರಾಜ—(ಲಜ್ಜೆಯನ್ನು ಅಭಿನಯಿಸುವನು)

ಕಾಪಾ—ಸಾಕು! ಏತಕ್ಕೆ ಲಜ್ಜೆಪಡುವೆ? ಯೋಗದೃಷ್ಟಿಯಿಂದ ನಿನ್ನ ವೃತ್ತಾಂತವನ್ನೆಲ್ಲಾ ತಿಳಿದಿರುವೆವು. ಇಂತಹ ಅವಸ್ಥೆ

ಯನ್ನು ಹೊಂದಿರುವನಾದರೂ ನಮ್ಮ ಇಷ್ಟವನ್ನು ನೆರವೇರಿಸುವ ವಿಷಯದಲ್ಲಿ ನೀನೇನೂ ದರಿದ್ರನಲ್ಲ.

ಕಂ॥ ಪೆರರ್ಗುಪಕರಿಪೆಡೆಯೊಳ್ ಸ।
ತ್ಪುರುಷರ್ ವಲವಾರ್ತರಲ್ಲಮೆಂಬುದದಿಲ್ಲಂ ॥
ಪರಿಪೋಷಿಸದಿರ್ಪನೆ ಪೇಳ್ ।
ಪೆರೆ ಕುಹುವಂ ಪೃದ್ಧಿಯುಂ ವನಸ್ಪತಿಕುಲಮಂ ॥

ರಾಜ—ಆದುದರಿಂದ ಅವಧಾನದೊಡನೆ ಕೇಳು. ಅನಹಿತನಾಗಿರುವೆನು.

ಕಾಪಾ—ವೃ॥ ಜೇತಾಳವಜ್ರಘುಟಿಕಾಂಜನಪಲ್ಪೇಪಸ್ಯೈತ್ಯ । ಪಾತೋದರೀ ವಿಧಿರಸಾಯನ ಧಾತುವಾದಂ ॥ ಮಾತ್ರೇಂ ಕರಸ್ಥಿತಮದೆಂದೆಣಿಸೆಂದು ವಿಘ್ನ । ವ್ರಾತಂ ಪಟುಂಜೊಲವನಾವೃತಿಗೆಯ್ಯದಿರ್ಕ್ಕುಗಂ ॥

ಆದುದರಿಂದ ಕವಿಯಕೂಡದೆಂದು ವಿಘ್ನಗಳಿಗೆ ಆಜ್ಞಾಪಿಸು.

ರಾಜ—ಎಲೈ ಸಾಧಕನೆ! ನಾನು ಅಸ್ವತಂತ್ರನೆಂಬುವನ್ನು ಯೋಗಬಲದಿಂದ ತಿಳಿದೇ ಇರುವೆ. ಆದುದರಿಂದ ಸ್ವಾಮಿಪ್ರಯೋಜನಕ್ಕೆ ವಿರೋಧಬರದಂತೆ ಪ್ರಯತ್ನಿಸುವೆನು.

ಕಾಪಾ—ಎಲೈ ರಾಜನೆ! ಇದರಿಂದ ಸ್ವಾಮಿಪ್ರಯೋಜನಕ್ಕೆ ವಿರೋಧವೆಲ್ಲಿಂದುಂಟಾಗುವುದು? ನಿನ್ನ ಆಜ್ಞಾಮಾತ್ರದಿಂದ ನಮ್ಮಭೀಷ್ಟವು ನೆರವೇರತಕ್ಕದ್ದಾಗಿದೆಯಲ್ಲವೆ? ಇಲ್ಲಿಗೆ ಸ್ವಲ್ಪದೂರದಲ್ಲೇ ಸಿದ್ಧರಸವಿರುವುದು. ಅದನ್ನು ನಾವು ಸಾಧಿಸುವೆವು. ನೀನು ಇಲ್ಲಿ ಇದ್ದುಕೊಂಡು ವಿಘ್ನನಿವಾರಣವನ್ನು ಮಾಡು. (ಹೋಗುವನು)

ರಾಜ—(ದಿಟ್ಟತನದಿಂದ) ವಿಘ್ನಗಳಿರಾ! ನೀವು ಹಿಂಜರಿವುದು ಹಿಂಜರಿವುದು. ಸರ್ವಪ್ರಕಾರದಿಂದಲೂ ನಿಮ್ಮುರವಣೆ ಮುರಿಯಿತು.

(ತೆರೆಯಲ್ಲಿ) ರಾಜನೆ ! ನಿನ್ನ ಅಪ್ಪಣೆಯಾದಂತೆ.

ಕಂ ॥ ಲೇಸಿನ ಪಡಿ ತೆರೆದುದು ವಿ ।
ದ್ಯಾಸತಿಯರ್ ತಾಮೆ ವರಿಸುವರ್ ಸಿದ್ಧಿಗಳೊ ॥
ಲ್ದಾಸೆಮಿಗಲ್ಯೈದುಗುಂ ನೃಪ ।
ವಾಸವ ನಿನ್ನಾಣತಿಯುನದಾವಂ ಮೀರ್ವಂ ॥

ರಾಜ—(ಕೇಳಿ) ಭಾಪು ! ದೈವಯೋಗದಿಂದ ವಿಘ್ನಗಳು ನನ್ನ ಮಾತನ್ನು ಮೀರಲಿಲ್ಲ. ಇದು ನನಗೆ ಪ್ರಿಯವು.

(ಅನಂತರ ವಿಮಾನಚಾರಿಗಳಾದ ವಿದ್ಯೆಗಳು ಪ್ರವೇಶಿಸುವರು)

ವಿದ್ಯೆ—(ಬೇಗನೆ ಬಳಿಗೆ ಬಂದು) ಎಲೈ ರಾಜೇಂದ್ರನಾದ ಹರಿಶ್ಚಂದ್ರನೆ ! ದೈವಯೋಗದಿಂದ ವರ್ಧಿಸುವೆಯಾ ? ಕೇಳು.

ಕಂ ॥ ಜನಪತಿನಿನ್ನೊಳ್ ಮುನಿದಾ ।
ಮುನಿ ದಾರುಣನಾಗಿ ನಡೆದನಾರಿಂದಾನಿ ॥
ನ್ನಿನಿತುಮೆಡಗ್ಗೆ ನಿಮಿತ್ತಗ ।
ಳೆನಿಸಿದ ವಿದ್ಯೆಗಳೆ ನಾವು ಬಳಿಬೊದ್ದೀದೆವೈ ॥

ರಾಜ—(ನೋಡಿ ಆಶ್ಚರ್ಯದಿಂದ, ಆತ್ಮಗತ) ಏನು ? ಇವು ಪೂಜ್ಯಗಳಾದ ಆ ವಿದ್ಯೆಗಳೆ ? ಇವುಗಳಿಗೋಸ್ಕರವಾಗಿಯೋ ಪೂಜ್ಯರಾದ ವಿಶ್ವಾಮಿತ್ರರ ಅತ್ಯುಗ್ರವಾದ ತಪಸ್ಸೆಲ್ಲಾ ವ್ಯರ್ಥವಾಯಿತೇ ? (ಪ್ರಕಾಶ, ಕೈಮುಗಿದು) ತ್ರಿಲೋಕವಿಜಯಿನಿಗಳಾದ ವಿದ್ಯೆಗಳೆ ನಿಮಗೆ ವಂದಿಸುವೆನು.

ವಿದ್ಯೆ—ಎಲೈ ರಾಜನೆ ! ನಾವು ನಿನಗಧೀನರು, ಆದುದರಿಂದ ನಮಗೆ ನೀನೇನು ಆಜ್ಞಾಪಿಸುವೆಯೋ ಆಜ್ಞಾಪಿಸು.

ರಾಜ—ನನ್ನನ್ನು ಅನುಗ್ರಹಿಸುವುದು ನಿಮಗಭಿಮತವಾಗಿದ್ದರೆ ಪೂಜ್ಯರಾದ ವಿಶ್ವಾಮಿತ್ರರನ್ನು ಸೇರುವರಾಗಿ. ಅದರಿಂದ ಮುನಿಯ ವಿಷಯದಲ್ಲಿ ನಾನು ಅನಪರಾಧಿಯೆನಿಸಿಕೊಳ್ಳುವೆನು.

ವಿದ್ಯೆ—(ಆಶ್ಚರ್ಯದಿಂದ ಒಬ್ಬರನ್ನೊಬ್ಬರು ನೋಡಿ) ಎಲೈ ರಾಜನೆ! ಹಾಗೆಯೇ ಆಗಲಿ. (ಎಂದು ಹೋಗುವರು)

(ಅನಂತರ ಕಾಪಾಲಿಕನು ನಿಧಿಯನ್ನು ಹೆಗಲಿನಮೇಲೆ ಹೊತ್ತುಕೊಂಡಿರುವ ವೇತಾಳನೊಡನೆ ಪ್ರವೇಶಿಸುವನು.)

ಕಾಪಾ—(ಬಳಿಗೆ ಬಂದು) ಎಲೈ ಮಹಾರಾಜನೆ! ರಸಸಿದ್ಧಿಯಿಂದ ದೊರೆತ ಈ ನಿಧಿಯು ಲಾಭಾಭ್ಯುದಯದಿಂದ ವರ್ಧಿಸುವೆ. ಪೂಜ್ಯವಾದ ಈ ರಸವನ್ನು ಉಪಯೋಗಿಸಿಕೊ.

ಕಂ॥ ಅವುದರುಪಯೋಗದೆ ಸಿ।
ದ್ಧಾವಳಿ ಗೆಲ್ದಳಿವನೈದಿ ಸುರಲೋಕವನಾ॥
ದೇವದ್ರುಮಮಂಜರಿಯಿಂ।
ತೀವಿರ್ದ ಸುಮೇರುಶಿಖರದೊಳಃ ವಿಹರಿಸುಗುಂ॥

ರಾಜ—ಇದು ಭೃತ್ಯಭಾವಕ್ಕೆ ವಿರುದ್ಧವಲ್ಲವೆ? ಇದನ್ನು ಸ್ವೀಕರಿಸಿದಲ್ಲಿ ಒಡೆಯನನ್ನು ವಂಚಿಸಿದಂತಾಗುವುದು.

ಕಾಪಾ—(ಆಶ್ಚರ್ಯದಿಂದ ಕೂಡಿ, ಆತ್ಮಗತ) ಒಳ್ಳೇದು ಹೀಗೆ ಹೇಳುವೆನು. (ಪ್ರ) ಹಾಗಾದರೆ ಸಪತ್ನೀಕನಾದ ನಿನ್ನ ಕ್ರಯಪರಿಹಾರಾರ್ಥವಾಗಾದರು ಈ ನಿಧಿಯನ್ನು ತೆಗೆದುಕೊ.

ರಾಜ—ಅದುತಾನೆ ಹ್ಯಾಗಾಗುವುದು? ಭೃತ್ಯಭಾವವು ಧನರಹಿತವಾದುದಲ್ಲವೆ? ಆದುದರಿಂದ ಇದನ್ನು ಒಡೆಯನಿಗೆ ಸೇರಿಸಬೇಕೆಂಬ ಸಂಕಲ್ಪವು ನಿನಗೆ ಇದ್ದಲ್ಲಿ ಈ ಮಹಾನಿಧಿಯನೆಲ್ಲಾ ಒಡೆಯನಿಗೆ ನೀನೆ ಸೇರಿಸು.

ಕಾಪಾ—(ಆತ್ಮಗತ) ಅಹ! ಈ ಧೈರ್ಯವೂ, ಈ ಜ್ಞಾನವೂ, ಈ ಮಹಾನುಭಾವತೆಯೂ ಆಶ್ಚರ್ಯಕರಗಳಾಗಿರುವುವು. ಅಥವಾ

ಕಂ॥ ಚಲಿಸುಗುಮಾಕುಲಶೈಲಂ ।
ಗಳುಮೊರ್ವ ಯುಗಾಂತಸಮಯಪವನಾಹತಿಯಿಂ ॥
ಚಲಿಸದು ಗಡ ಧೀರರ ನಿ ।
ಶ್ಚಲಮೆನಿಸಿದ ಹೃದಯಮಡಸಿದಾಪತ್ತಿನೊಳಂ ॥

ಆದುದರಿಂದ ನಾನುತಾನೆ ಈತನನ್ನು ಏತಕ್ಕೆ ವಿಶೇಷ ನಿರ್ಬಂಧ ಪಡಿಸಲಿ. (ಪ್ರಕಾಶ, ವೇತಾಳನನ್ನು ಕುರಿತು) ಎಲೈ ಭದ್ರನೆ! ಈ ರಾಜನ ಅಭೀಷ್ಟವನ್ನು ನೆರವೇರಿಸು.

ವೇತಾಳ-(ವಂದಿಸಿ) ಸಾಧಕರ ಅಪ್ಪಣೆ. (ಎಂದು ಹೋಗುವನು)

ಕಾಪಾ-(ಎಲ್ಲಾ ಕಡೆಗೂ ನೋಡಿ) ಎಲೈ ರಾಜನೆ! ಬೆಳಗಾಗುವಂತೆ ತೋರುವುದು. ಇನ್ನು ನಮ್ಮ ಕಾರ್ಯವನ್ನು ಸಾಧಿಸುವೆವು.

ರಾಜ-ಎಲೈ ಸಾಧಕೋತ್ತಮನೆ! ದುಷ್ಕಥೆಗಳಲ್ಲಾದರೂ ನನ್ನನ್ನು ತಾವು ಸ್ಮರಿಸಬೇಕು.

ಕಾಪಾ—ದೇವತೆಗಳೇ ನಿನ್ನನ್ನು ಸ್ಮರಿಸುವರು.

ರಾಜ-(ಪೂರ್ವದಿಕ್ಕನ್ನು ನೋಡಿ, ಪ್ರಸನ್ನಮನಸ್ಕನಾಗಿ) ಓಹೊ!

ಕಂ॥ ಕವಿದ ತಮಸ್ಸಂಚಯಮಂ ।
ತವಿಸುತ್ತಂ ಸಕಲಜನದನುಗ್ರಹಣಾರ್ಥಂ ॥
ತವಕಂ ಮಿಗಲುದಯಿಪನೀ ।
ನವಸಂಧ್ಯಾರುಣಪುರಸ್ಸರಂ ದಿವಸಕರಂ ॥

ಆದುದರಿಂದ ನಾನು ಕೂಡ ಪೂಜ್ಯಳಾದ ಭಾಗೀರಥಿಯ ತೀರವನ್ನು ಸೇರಿ ಒಡೆಯನ ಆಜ್ಞೆಯನ್ನು ಅನುವರ್ತಿಸುವೆನು.

(ಎಂದು ಹೋಗುವನು)

ಚತುರ್ಥಾಂಕಂ ಸಮಾಪ್ತಂ.

ಐದನೆಯ ಅಂಕ.

(ಅನಂತರದಲ್ಲಿ ವಿಕಾರವಾದ ಮಲಿನವೇಷದಿಂದ ರಾಜನು ಪ್ರವೇಶಿಸುವನು)

ರಾಜ-(ದುಃಖದಿಂದ ನಿಟ್ಟುಸುರನ್ನು ಬಿಟ್ಟು) ಅಹಹ ! ಕಷ್ಟಕಷ್ಟ !

ವೃ॥ ಭುವನಸ್ತುತ್ಯನೆನಿಪ್ಪ ಸನ್ಮುನಿಪನಾವಿದ್ವೇಷಮುಂ ಮಿತ್ರ ಬಂ।
ಧುವಿಯೋಗಂ ಸುತದಾರವಿಕ್ರಯಮುಮೀ ಚಂಡಾಳದಾಸತ್ವ
ಮುಂ ॥ ಅವಿವೇಕಾಸ್ಪದನುಂ ಕಠೋರನುಮೆನಿಪ್ಪೆನ್ನಾವ
ದುಷ್ಕೃತ್ಯದಿಂ । ದವೆ ದುರ್ವಾರಫಲಂಗಳಾದುವಹಹಾ ತತ್ಕಾ
ರ್ಯಮೆಂತಿಕ್ಕರ್ವೋ ॥

(ವ್ಯಸನದಿಂದ ಕೂಡಿ) ಆಹ ! ದೈವಯೋಗವು ಬಲವತ್ತರವಾದದ್ದು.
ಹ್ಯಾಗೆಂದರೆ—

ವೃ॥ ಪಲವುಂ ಸಾಮ್ರಾಜ್ಯಸಂಪತ್ತಿಯಿನಗಲಿಸಿಯುಂ ಕ್ರೋಧ
ಸಾಂದ್ರಂ ಮುನೀಂದ್ರಂ । ತಲೆವಾಗಿರ್ದೆನ್ನೊಳಾಗಳ್ ದಯೆ
ಯಿನುಳಿಪಿದಂ ಮೂವರಾದೆಮ್ಮನೀ ಭೂ ॥ ತಲದೊಳ್ ದು
ರ್ದೈವಮಿಂತೀ ವ್ಯಸನದೊಳಮಣಂ ತೃಪ್ತಿಯಂ ಪೊರ್ದದೀ
ಗಳ್ । ಛಲದಿಂದೆಮ್ಮೆಲ್ಲರಂ ಬಾಳ್ಗೆಡಿಸಲಹಹ ನೈಷ್ಠುರ್ಯ
ಮಂ ಗೆಯ್ದುದಲ್ತೆ ॥

(ಚಿಂತೆಯನ್ನು ನಟಿಸಿ ನಿಟ್ಟುಸುರನ್ನು ಬಿಟ್ಟು, ವ್ಯಸನದೊಡನೆ)

ವೃ॥ ಶೋಕವ್ಯಾಕುಲೆಯಾಗಿ ದೈನ್ಯವಡೆವಳ್ ಮೆಯ್ಗುಂದುವಳ್
ಮತ್ತೆ ತಾ । ನೇಕಾಂತಾಶ್ರಯಳಾಗಿ ನಿಷ್ಕ್ರಿಯೆಗಳಂ ನಾಂ
ಮಾಳ್ಪುವಂ ಚಿಂತಿಸು ॥ ತ್ತಾ ಕಾಂತಾಮಣಿ ಜೀವಿಸಳ್

ಮುಗುಳ್ದ ಮಾಮುತ್ಸಂಗಮಾಕಾಂಕ್ಷೆಯಿಂ ! ಹಾ ಕಷ್ಟಂ ಗಡ
ಎನ್ನದುರ್ಗತಿಯನಾರಯ್ವಳ್ ಸರೋಜಾಸನೇ ‖

ಹಾ ವತ್ಸ ರೋಹಿತಾಶ್ವನೆ !

ವೃ ‖ ಲಲನಾಂಕಸ್ಥಲತಲ್ಪದೊಳ್ ಪವಡಿಸಲ್ ಬೇಗಿರ್ದ್ದ ನೀನಿಂತು
ಭೂ|ತಲದೊಳ್ ಬಿಳ್ದು ಪೊರಳ್ದೆಂತು ಸುಖನಿದ್ರಾಲಂಬನಂ
ಗೆಯ್ವೆ ಹಾ ‖ ತಲೆಯೊಳ್ ತಾಳ್ದದಿಳಾಧಿಪಪ್ರಕರಮಾ
ನಿನ್ನಾಜ್ಞೆಯುಂ ಮುನ್ನಮಿಂ | ದೆಳೆದುಯ್ದಾಶ್ರಮಕಾರ್ಯ
ಮಂ ಬೆಸಸುಗುಂ ವನ್ಯಂವಟುಪ್ರೋತ್ಕರಂ ‖

(ಬಹಳಹೊತ್ತು ಯೋಚಿಸಿ ಕರುಣದೊಡನೆ)

ವೃ ‖ ಅನುವಾಗಿರ್ಪ್ಪುದು ಮೌಳಿ ಬೀಳ್ಗೆ ವಿಪದಂಗಳ್ ತತ್ಸುಖಪ್ರ
ಶ್ನಮಂ | ಮನಮೊಲ್ದಾನೊರೆವೆಂ ಕೃತಾರ್ಥರೆನಿಪಗ್ಗಾಗಪತ್ನಿ
ಯೀ ಸಂಪದಂ | ಎನಗುದ್ವೇಗಮನೀವೆಯುತ್ತೆ ಸುತನೀನು
ತ್ಸಂಗಶಯ್ಯಾರ್ಹನೆಂ | ದೆನಿಸುತ್ತಿಂತಕೃತಾರ್ಥನಾಗಿ ಕಡಿವಾ
ದೈವಾಹಿಗೀಡಾಗುತಂ ‖

(ಭಯದಿಂದ ಕೂಡಿ) ಆಹ ! ಇದೇನು ನಾನು ಹೇಳಿದ್ದು ? ಶಾಂತಂ ಪಾಪಂ ! ಶಾಂತಂ ಪಾಪಂ ! ವತ್ಸನಿಗೆ ಅಮಂಗಳವಾಗದಿರಲಿ. “ಅಕೃತಾರ್ಥನಾಗಿ ವಿಧಿಯಿಂದೀಕಷ್ಟಕೀಡಾಗುತಂ”

(ಎಡಗಣ್ಣು ಹಾರುವುದನ್ನೂ ಬಲಭುಜವು ಅದಿರುವುದನ್ನೂ ಅಭಿನಯಿಸಿ ಹರ್ಷದೊಡನೆ)

ಕಂ ‖ ನಸುನಡುಗುತಿರ್ಪ್ಪುದೆಡಗ ।
ಣ್ಣಸವಸದಿಂದದಿರುತಿರ್ಪ್ಪುದೆನ್ನೀ ಬಲದೋಳ್ ‖
ಉಸಿರ್ವಂತೆವೊಲೆನಗೀಗಳ್ ।
ವ್ಯಸನಾಭ್ಯುದಯಂಗಳೆರಡುಮೊಯ್ಯುವ ತೆರನಂ ‖

(ಆಲೋಚಿಸಿ) ಅಥವಾ ಇನ್ನೂ ಆ ವ್ಯಸನೋದಯಚಿಂತೆಯಿಂ ದೇನು ? ಈ ನೀಚ ಹರಿಶ್ಚಂದ್ರನ ಕಥೆಯು ಕೊನೆಗಂಡಿತೆಂತಲೇ ತಿಳಿಯಬೇಕು. ಹಾಗೆಯೆಸರಿ—

ಕಂ ॥ ಇನ್ನೈತರ್ಪ್ಪವ್ಯಸನವು ।
ದುನ್ನತಸುಖಮುಕ್ಕುಮೆನೆಗೆ ಭಾವಿಸಿನೋಡಲ್ ॥
ಇನ್ನೇನತಿಪಾಪಿಯೆನಿ ।
ಪ್ಪೆನ್ನ ಸುಖೋನ್ನತಿಗೆ ಹೇತು ಮರಣಮೆ ಅಲ್ತೆ ॥

(ತೆರೆಯನ್ನು ಹಾರಿಸಿಕೊಂಡು ಚಂಡಾಲನು ಪ್ರವೇಶಿಸುವನು)

ಚಂಡಾಲ—ಎಲೋ ! ಈ ಹುಡುಗನ—

ರಾಜ—(ಭಯದೊಡನೆ) ಭದ್ರಕನೆ ! ಏನು ಹೇಳುವೆ ? ಈ ಹುಡುಗನ—

ಚಂಡಾಲ—ಎಲೋ ! ಕೇಳು. ಹುಡುಗನ ಸಮೀಪದಲ್ಲಿ ಕುಳಿತುಕೊಂಡು ಒಬ್ಬಳು ಹೆಂಗಸು ಬಹಳ ದುಃಖದಿಂದ ಗೋಳಾಡುತ್ತಿರುವಳು. ಬೇಗನೆ ಹೋಗಿ ಅವಳಿಂದ ಮೃತಕಂಬಳವನ್ನು ತೆಗೆದುಕೊ. ನಾನು ನಮ್ಮೊಡೆಯನ ಸಮೀಪಕ್ಕೆ ಹೋಗುವೆನು.

(ಎಂದು ಹೊರಟುಹೋಗುವನು)

ರಾಜ—(ಮುಂದಕ್ಕೆ ಬರುವನು)

ತೆರೆಯಲ್ಲಿ—ಹಾ ಮಗನೆ ! ಎಲ್ಲಿರುವೆ ? ನನಗೆ ಪ್ರತ್ಯುತ್ತರವನ್ನು ಕೊಡು.

ರಾಜ—(ಕೇಳಿ ದುಃಖದೊಡನೆ) ಅಹಹ ! ಈ ಗೋಳಾಟವು ಕರ್ಣಕಠೋರವಾಗಿರುವುದಲ್ಲ !

(ಅನಂತರದಲ್ಲಿ ಮೇಲೆಹೇಳಿದಂತೆ ದುಃಖಪಡುತ್ತಾ ಶೈಬ್ಯೆಯು ಪ್ರವೇಶಿಸುವಳು)

ಶೈಬ್ಯೆ—ಹಾ ಮಗನೆ! ಎಲ್ಲಿರುವೆ? ನನಗೆ ಪ್ರತ್ಯುತ್ತರವನ್ನು ಕೊಡು. (ಎಂದು ಮೂರ್ಛೆಹೋಗಿ ಮೆಲ್ಲನೆ ಎಚ್ಚೆತ್ತು ಕಣ್ಣೀರು ಬಿಡುತ್ತ) ಹಾ! ವತ್ಸನೆ! ನಿನ್ನ ತಂದೆಯು ಮಂದಭಾಗ್ಯಳಾದ ನನ್ನನ್ನು ತೊರೆದಹಾಗೆ ನೀನೂ ನನ್ನನ್ನು ತೊರೆವುದು ಯುಕ್ತವಲ್ಲ. (ಎಂದು ಮೂರ್ಛೆಬೀಳುವಳು)

ರಾಜ—(ಕೇಳಿ, ನೋಡಿ, ದುಃಖದೊಡನೆ) ಇವಳನ್ನೂ ಗಂಡ ತೊರೆದಿರುವನೆ? ಆಹ! ಆ ದುಷ್ಟದೈವಕ್ಕೆ ಯಾರಲ್ಲಿಯೂ ಕರುಣವಿಲ್ಲ.

ಶೈಬ್ಯೆ—(ತ್ವರೆಯಿಂದ ಮೂರ್ಛೆತಿಳಿದು ಎದ್ದು ಸುತವ್ಯಾಮೋಹದಿಂದ) ಇದೇನು? ನನ್ನ ಮೊಗು ಎಲ್ಲಿಹೋಯಿತು? (ನೋಡಿಆಲಿಂಗಿಸಿ) ವತ್ಸನೆ! ಏತಕ್ಕೆ ನನ್ನೊಡನೆ ಮಾತಾಡುವುದಿಲ್ಲ? ನಾನೊಬ್ಬಳೇ ಭಯಪಡುವೆನಲ್ಲ! ಈ ಶ್ಮಶಾನವು ನಿನ್ನ ಕಣ್ಣಿಗೆ ಘೋರವಾಗಿ ಕಾಣುವದಿಲ್ಲವೆ? ಏನು ಹೇಳುವೆ? "ಪುಷ್ಪನ್ನು ಉಪಾಧ್ಯಾಯರಿಗೋಸ್ಕರ ಕೊಯುತ್ತಿರುವ ಕಾಲದಲ್ಲಿ ಹುತ್ತದಿಂದ ಬಂದು ದೊಡ್ಡ ಕೃಷ್ಣಸರ್ಪವು ಬಂದು ನನ್ನನ್ನು ಕಚ್ಚಿತು" ಎಂದು ಹೇಳುವೆಯೋ? ಆ ಕೃಷ್ಣಸರ್ಪವೆಲ್ಲಿ? ನನ್ನನ್ನೇಕೆ ಕಚ್ಚುವದಿಲ್ಲ? (ನಾಲ್ಕುಕಡೆಗೂ ನೋಡಿ). ಸುಳ್ಳುಸುಳ್ಳು! ಕೃಷ್ಣಸರ್ಪವೆಲ್ಲಿರುವುದು? ಹಾ ವತ್ಸನೆ! ಏಳುಏಳು. ಉಪಾಧ್ಯಾಯರಿಗೋಸ್ಕರ ಬಿಲ್ವಪತ್ರೆಗಳನ್ನೂ ದರ್ಭೆಗಳನ್ನೂ ತಂದುಕೊಡು. ಅವರ ಹೋಮಕಾಲವು ಮೀರಿ ಹೋಗುವುದು. ವಟುಗಳೆಲ್ಲರೂ ಹಿಂತಿರುಗಿ ನಿನ್ನನ್ನು ಹುಡುಕಿಕೊಂಡು ಬಂದಾರು. (ಎಂದು ಎಬ್ಬಿಸುವುದಕ್ಕೆ ಯತ್ನಿಸಿ ಅತಿ ದುಃಖದಿಂದ ಕೂಡಿ) ಇದೇನು? ನಿಜವಾಗಿಯೂ ಮಂದಭಾಗ್ಯಳಾದ ನನ್ನನ್ನು ತೊರೆದುಬಿಟ್ಟೆಯಾ? ಹಾ ಕೆಟ್ಟೆನು (ಎಂದು ಮೂರ್ಛೆಬೀಳುವಳು)

ರಾಜ—(ದುಃಖದೊಡನೆ) ಹಾ! ಕಷ್ಟಕಷ್ಟ. ನಿಷ್ಕರುಣನಾದ ಆ ದುಷ್ಟದೈವಕ್ಕೂ ಈ ಪ್ರಲಾಪಗಳು ದುಃಖಕರಗಳಾಗಿರುವಂತೆಯೇ ತೋರುವುವು.

ಶೈಬ್ಯೆ—(ಮೂರ್ಛೆ ತಿಳಿದೆದ್ದು ನಿಂದೆಯೊಡನೆ) ಹಾ! ಆರ್ಯಪುತ್ರನೆ! ಇದೊ ನಿನ್ನ ಪ್ರೇಮಪುತ್ರನ ದುರವಸ್ಥೆಯನ್ನು ನೋಡು. ಅಹ! ನಿರ್ಘೃಣನೆ! ಇಂಥಾ ಕಾಲದಲ್ಲಿಯೂ ನೀನು ನಿಶ್ಚಿಂತನಾಗಿ ಎಲ್ಲಿರುವೆ? ಈ ಮೊಗುವನ್ನು ಪ್ರಯತ್ನಪೂರ್ವಕವಾಗಿ ಕಾಪಾಡಬೇಕೆಂದು ನೀನೆ ನನಗೆ ಹೇಳಲಿಲ್ಲವೆ? ಪರಮಪಾಪಿಯಾದ ನಾನು ಅದನ್ನು ನೆರವೇರಿಸಲಿಲ್ಲ.

ರಾಜ—(ಅತಿಕರುಣದೊಡನೆ) ಅಹ! ಈ ಪ್ರಲಾಪಗಳಾದರೋ ಮರ್ಮಭೇದಕಗಳಾಗಿರುವುವು.

ಶೈಬ್ಯೆ—(ಮಗನ ಅವಯವಗಳನ್ನೆಲ್ಲಾ ನೋಡಿ) ಎಲೈ ಮಗನೆ! ನಿನ್ನ ಈ ಹಣೆಯಾದರೊ ಬಾಲಚಂದ್ರನಂತೆ ಮನೋಹರವಾಗಿರುವುದು. ದಟ್ಟವಾದೆವೆಗಳಿಂದಲೂ ಕೆಂಪಾದ ಕಟಾಕ್ಷದಿಂದಲೂ ಕೂಡಿರುವ ನಿನ್ನೀ ನೇತ್ರಗಳಾದರೊ ಸ್ವಭಾವಶುಭ್ರಗಳಾಗಿರುವುವು. ಒತ್ತಾಗಿ ಸೇರಿರುವ ಅಸ್ಥಿಪಂಜರದಿಂದ ಶೋಭಿಸುವ ಈ ನಿನ್ನ ವಕ್ಷಸ್ಥಳವಾದರೋ ಕಠಿನವಾಗಿಯೂ ವಿಸ್ತಾರವಾಗಿಯೂ ಇರುವುದು. ಇಂಥಾ ಶರೀರದಲ್ಲಿ ಪಾಪಿಯಾದ ಯಮನು ಯಾವ ದುರ್ಲಕ್ಷಣಗಳನ್ನು ಕಂಡನೊ ಅಥವಾ ಸತ್ಯಸಂಧನಾದ ಆರ್ಯಪುತ್ರನ ನಡತೆಯಲ್ಲಿಯಾಗಲಿ ಮಂದಭಾಗ್ಯಳಾದ ನನ್ನ ನಡತೆಯಲ್ಲಿಯಾಗಲಿ ಆ ಯಮನು ತಪ್ಪನ್ನೇನಾದರೂ ಕಂಡನೊ? ಸರ್ವಥಾ ಧರ್ಮವು ಅಕಾರಣವು. ಶಾಸ್ತ್ರಗಳನ್ನು ನಂಬಬಾರದು. ಶಾಸ್ತ್ರಜ್ಞರೆಲ್ಲರೂ ಅನೃತ

ವಾದಿಗಳು. ಏತಕ್ಕೆಂದರೆ, ಬಹು ಸಮರ್ಥರಾಗಿರುವ ಶಾಸ್ತ್ರ ಜ್ಞರೇ ನನ್ನೊಡನೆ "ಈ ನಿನ್ನ ಮಗನು ಚಕ್ರವರ್ತಿಯಾಗುವನು" ಎಂದು ಬಹು ನಂಬಿಕೆಯಿಂದ ಹೇಳಿರಲಿಲ್ಲವೆ? ಅದೆಲ್ಲವು ಪಾಪಿ ಯಾದ ನನ್ನ ದೌರ್ಭಾಗ್ಯದಿಂದ ಸುಳ್ಳಾಯಿತಲ್ಲವೆ?

ರಾಜ—(ಊಹಿಸಿ) ಇದೇನು ಈ ಕಥೆಯು ನನ್ನ ಸಂಬಂಧವುಳ್ಳ ದ್ದಾಗಿರುವಂತೆ ತೋರುವುದು? (ಚೆನ್ನಾಗಿನೋಡಿ ಕಣ್ಣೀರುಬಿಟ್ಟು) ಆಹ! ಇದೇನು?

ವೃ॥ ಕೊಡೆವಿಡಿದಂತೆ ತೋರ್ಪ್ಪ ತಲೆ ನೀಳ್ದ ಲಲಾಟಮುಮೊಳ್ಳ
ಲರ್ದ ಕ। ಣ್ಣಡಿಯೊಳೆ ಚಕ್ರರೇಖೆ ಕರದೊಳ್ ಕಮಲಂ
ಕಡುನೀಳ್ದ ತೋಳ್ಗಳುಂ ॥ ಬಡನಡು ಪೇರುರಂ ಪೃಥುಸಿತಂ
ಬಮುಮಿಾ ನೃಪಚಿಹ್ನಮೆಲ್ಲಮುಂ। ಬಿಡದೆ ವಿಭಾವಿಸಲ್ ನೃಪ
ಕುಲಾಂಕುರಮೋ ದಿಟಮಿಾ ಕಿಶೋರಕಂ ॥

(ಸ್ಮರಣೆಯನ್ನು ಅಭಿನಯಿಸಿ ದುಃಖದೊಡನೆ)
ಹಾ ಹಾ! ಕಷ್ಟಕಷ್ಟ! ನನ್ನ ಮಗನಾದ ರೋಹಿತಾಶ್ವನು ಇದೇ ವಯಸ್ಸಿನವನು. ಇವನನ್ನು ನೋಡಿದರೆ ಅವನಂತೆಯೆ ತೋರು ವುದಲ್ಲಾ! ಅಥವಾ ವತ್ಸನಿಗೆ ಅಮಂಗಳವಾಗದಿರಲಿ.

ಶೈಬ್ಯೆ—(ಆಕಾಶವನ್ನು ನೋಡಿ ನಿಂದಾಪೂರ್ವಕವಾಗಿ) ಎಲೈ ಪೂಜ್ಯ ನಾದ ವಿಶ್ವಾಮಿತ್ರನೆ! ಈಗ ನೀನು ಕೃತಾರ್ಥನಾದೆ.

ರಾಜ—(ಅತಿದುಃಖದಿಂದ) ಇದೇನು? ಈಕೆ ಪೂಜ್ಯರಾದ ವಿಶ್ವಾ ಮಿತ್ರರನ್ನು ನಿಂದಿಸುವಳು? ಸರ್ವಥಾ ಈಕೆ ಹೇಳುವ ಮಾತಿನಲ್ಲಿ ವ್ಯತ್ಯಾಸವೇನೂ ಕಾಣಬರುವುದಿಲ್ಲ. ಆದಕಾರಣ ಇವಳಲ್ಲಿ ಪರ ಸ್ತ್ರೀಯೆಂಬ ಅನುಮಾನವೇಕೆ? ಇವಳು ಶೈಬ್ಯೆಯೇ ಸರಿ. (ದುಃಖದೊಡನೆ) ಇನ್ನೂ ಸಂದೇಹವೇ? ಏತಕ್ಕೆಂದರೆ—

ವೃ॥ ನುಡಿಬಡವಾಗಿ ತೋರಿದೊಡವೇನದೆ ಮಂದ್ರಮನೋಹರ
ಸ್ವರಂ । ಕಡುಕೆದರಿದ್ದೊಡಂ ಮುಡಿಯುಮಂತದೆ ಭೃಂಗವಿ
ನೀಲಕೋಮಲಂ ॥ ಒಡನರಿಯಲ್ಕಸಾಧ್ಯ ವೆನಿಸಿದ್ದೊಡ
ಮಂತದುವೇ ಕೃಶಾಂಗವಿಾ । ಮಡದಿಯ ಮೆಯ್ಯೊಗರ್ ಪ
ಳೆಯ ಚಿತ್ರದವೊಲ್ ಕುರುಪಿಂದೆ ಕಾಣ್ಬುಗುಂ ॥

ಹಾ ವತ್ಸ ರೋಹಿತಾಶ್ವನೆ ! ಎಲ್ಲಿರುವೆ ? ನನಗೆ ಪ್ರತ್ಯುತ್ತರ ವನ್ನು ಕೊಡು. (ಎಂದು ಮೂರ್ಛೆಬೀಳುವನು. ಮೆಲ್ಲನೆ ಎಚ್ಚತ್ತು ರೋಹಿತಾಶ್ವನ ಮುಖವನ್ನು ನೋಡಿ) ಹಾಹಾ ! ಮಂದಭಾಗ್ಯನಾದ ನನಗೆ ಹಲ್ಲು ಮೊಳೆಯದ ನಿನ್ನ ಶೈಶವವು ಸ್ಮರಣೆಗೆ ಬರುವುದು.

ಕಂ॥ ಮಂಗಳಧೂಪವನಿಕ್ಕುತೆ ।
ಸಿಂಗರಿಸಿದ ಸೂಕ್ಷ್ಮಕೇಶಸಂಹತಿಯಿಂದಂ॥
ಭೃಂಗತತಿಲುಲಿತ ಸರಸಿಜ ।
ಭಂಗಿಯನಾಂತಿರ್ದ ವದನಮೆಸೆಯದಿದೀಗಳ್ ॥

ಹಾ! ವತ್ಸ ರೋಹಿತಾಶ್ವನೆ! ಹಾ ತಪನಕುಲಬಾಲಪ್ರವಾಳನೆ!ಹಾ ! ಹರಿಶ್ಚಂದ್ರ ಹೃದಯಾನಂದಕನೆ! ಅತಿಕೋಪಿಯಾದ ವಿಶ್ವಾಮಿತ್ರನ ಋಣವನ್ನು ತೀರಿಸುವುದರಲ್ಲಿ ನೀನೇ ಮುಖ್ಯಭಾಗಿಯಲ್ಲವೆ ?

ವೃ॥ ಎರೆವಗ್ಗಿಯದೆ ರಾಜಭೋಗ್ಯವೆನಿಪಾ ಭೋಗಂಗಳಂ
ಪೊರ್ದದಾ । ವರದಿಂದಧ್ವರಮಂ ನೆಗಳ್ಚದೆ ವಲಂ ಸತ್ಕೀರ್ತಿ
ಯುಂ ಸಾರ್ಚದಾ ॥ ಪರಭೂಗರ್ಭನಿರೂಢಮಪ್ಪ ವಟಬೀ
ಜಾಂಕೂರನಂ ಪ್ರೋಲ್ಲುತ್ತ ಸ । ತ್ವರದಿಂತೀರಿಸಿಯುಳ್ತೆ ಹಾ
ಸುತನೆ ನೀಂ ತತ್ಸ್ವರ್ಗಸೋಪಾನಮಂ ॥

ಇದಲ್ಲದೆ ಎಲೈ ವತ್ಸನೆ !

ವೃ॥ ಸಿರಮಭಿಷೇಕತೀರ್ಥಜಲದಿಂ ಕರಮುಂ ನೆರೆ ದಾನಧಾರೆಯಿಂ।
ದರಿಮುಕುಟಾಗ್ರಸ್ಪರ್ಶನದಿನೀ ಚರಣಂ ಶುಚಿಯಾದುದಿಲ್ಲ ಹಾ ॥

ಸುರಭುಜವುಂ ಧನುರ್ಗುಣಕಿಣಾಂಕಿತವಾದುದುವಿಲ್ಲವಿನ್ನು ।
ವಿಾಪರಿಯೊಳೆಪುಟ್ಟಿಪಾಡಿವದಚಂದ್ರನವೊಲ್ ಸುತನೀನಡಂಗಿದೈ ॥

ಈಗ ಗೋಳಾಡುತ್ತಿರುವ ದೇವಿಗೆ ನಾನು ಹ್ಯಾಗೆತಾನೇ ಕಾಣಿಸಿಕೊಳ್ಳಲಿ? ಮೊದಲೇ ಪುತ್ರಶೋಕಪೀಡಿತಳಾಗಿರುವ ಇವಳಿಗೆ ನನ್ನ ಈ ದುರವಸ್ಥೆಯನ್ನು ತೋರ್ಪಡಿಸಿಕೊಂಡು ಇನ್ನೂ ದುಃಖವನ್ನು ಹೆಚ್ಚಿಸುವುದು ಸರಿಯಲ್ಲ. (ತನ್ನನ್ನು ನೋಡಿಕೊಂಡು) ಎಲೆ ದುರಾತ್ಮನಾದ ನೀಚಹರಿಶ್ಚಂದ್ರನೆ! ಇನ್ನೂ ಸಾಯುವದಿಲ್ಲವೆ? ಇದಕ್ಕಿಂತಲೂ ನಿನಗಿನ್ನೇನಾಗಬೇಕು? (ಎಂದು ಮೂರ್ಛೆಬಿದ್ದು, ಮೆಲ್ಲನೆ ಎಚ್ಚೆತ್ತು) ಎಲೆ ಪಾಪಿಯಾದ ಹರಿಶ್ಚಂದ್ರನೆ; ನರಕಯಾತನೆಗಳನ್ನು ತಪ್ಪಿಸಿಕೊಳ್ಳುವುದಕ್ಕಾಗಿ ಈ ನಿನ್ನ ನೀಚಪ್ರಾಣಗಳನ್ನು ಇನ್ನೂ ತೊರೆಯದೆ ಇರುವೆಯಾ? ಛೀ! ಮೂರ್ಖನೆ!

ಕಂ ॥ ಕಲುಷಾಂಧತಮದೊಳೀಗಳೆ ।
ಮುಳುಗಿರ್ಪ್ಪದೆ ನೋಡೆ ನಿನಗೆ ಪರಮಶ್ರೇಯಂ ॥
ವಿಳಸತ್ತನಯಮುಖೇಂದುವ ।
ನುಳಿದೀ ದಿಕ್ತಟವನಹಹ ನೋಳ್ಪದರಿಂದಂ ॥

ಇದಲ್ಲದೆ,

ಸ್ವಾಗತಾ ॥ ದಾರುಣಕ್ರಕಚಭೈರವ ವೀಚೀ ।
ರೌರವಾದಿನರಕಾಳಿಯೊಳೆಲ್ಲಂ ॥
ಘೋರಯಾತನೆಗಳಿರ್ದ್ದೊಡವಿಾ ದು ।
ರ್ವಾರಪುತ್ರವಿರಹಕ್ಕೆಣೆಯಲ್ಲಂ ॥

ಆದುದರಿಂದ ಇನ್ನು ತಡೆಮಾಡಬಾರದು. ಇರಲಿ, ಈ ಭಾಗೀರಥೀ ತೀರದಲ್ಲಿ ಶೋಕಾಗ್ನಿಯಿಂದ ಬೇಯುತ್ತಿರುವ ನನ್ನನ್ನು ಪ್ರಾಣಪರಿತ್ಯಾಗದಿಂದ ಸುಖಪಡಿಸುವೆನು. (ಎಂದು ಮೆಲ್ಲನೆ ಮುಂದಕ್ಕೆ ನಡೆದು, ಸ್ಮರಣೆಯನ್ನು ಅಭಿನಯಿಸಿ, ಬೆದರಿ;) ಅಹ! ಇದೇನು?

ನಾನು ಪರಾಧೀನನೆಂಬುವುದನ್ನು ಮರೆತೆನಲ್ಲಾ! (ಆಲೋಚಿಸಿ ದುಃಖದೊಡನೆ) ಹಾ ಕಷ್ಟಕಷ್ಟ!

ಕಂ॥ ಮೃತಿಯಾಂತು ತಳೆವರಲೆ ನಿ।
ರ್ವೃತಿಯಂ ಸ್ವಾಧೀನವೃತ್ತರೆನಿಸಿದ ಧನ್ಯರ್॥
ಕ್ಷಿತಿಯೊಳಗಾತ್ಮಕ್ರಯದಿಂ।
ದತಿಪಾಪಿಗಳೆನಿಸಿದರ್ಗೆ ಮೃತಿಯುಮಲಭ್ಯಂ॥

(ದುಃಖವನ್ನು ನಟಿಸಿ) ಅಹಹ! ಮಂದಭಾಗ್ಯನಾದ ನನಗೆ ಪ್ರಾಣ ಪರಿತ್ಯಾಗಕ್ಕೂ ಅವಕಾಶವಿಲ್ಲವಲ್ಲ! ಇರಲಿ.

ಕಂ॥ ಇಂತತಿದಾರುಣಮೆನಿಸಿದ।
ಸಂತಾಪಕೆ ಧೈರ್ಯಮೇ ಪ್ರತಿಕ್ರಿಯೆಯಲ್ತೇ॥
ಇಂತೀಗಳೆರೆಯನಾಜ್ಞೆಯ।
ನಂತರಿಸಿದೊಡದುವೆ ಘೋರದೋಷಮೆನಿಕ್ಕುಂ॥

ಆದುದರಿಂದ ಈಗ ಸಹಿಸಲಶಕ್ಯವಾದ ದುಃಖಾಗ್ನಿಯಲ್ಲಿ ಬೇಯುತ್ತಲಿರುವ ಈ ನನ್ನನ್ನು ವಿವೇಕಜಲದಿಂದ ಸಮಾಧಾನಪಡಿಸಿಕೊಂಡು ಒಡೆಯನಾಜ್ಞೆಯಂತೆ ನಡೆಯುವೆನು. ಏಕೆಂದರೆ—

ವೃ॥ ಒದವಿದನಾದಿವಿಭ್ರಮಗಳಿಂ ನಡುವೊಳ್ ಸ್ಫುಟಮಸ್ಫುಟಂ
ಕರಂ। ತುದಿಮೊದಲೊಳ್ ಜಗತ್ಪ್ರಕೃತಿಯೆಂಬುದು ಪಂಚತೆ
ಪಂಚರೂಪಮು॥ ಣ್ಮಿದ ಭವವಾರ್ಧಿವೀಚಿತತಿಯಿಂದೆ ವಿಯೋ
ಗಮೆ ಯೋಗಸನ್ನಿಭಂ। ಪುದಿದ ವಿಮೋಹದಿಂ ಪೆರತನಾಸ
ರಿಯೆಂ ಸಲೆಶೋಕಹೇತುವಂ॥

ಶೈಬ್ಯೆ—(ಮೂರ್ಛೆಯಿಂದೆಚ್ಚೆತ್ತು) ಇದೇನು? ಇನ್ನೂ ಈ ಪ್ರಾಣಗಳು ನನ್ನನ್ನು ಬಿಟ್ಟು ಹೋಗಲಿಲ್ಲವೆ? ಈಗ ಮಾಡತಕ್ಕದ್ದೇನು: (ಕಣ್ಣೀರನ್ನು ಒರಸಿಕೊಂಡು) ಇರಲಿ ಶ್ಮಶಾನದಲ್ಲಿರುವ ಈ ಮರಕ್ಕೆ ನೇಣುಹಾಕಿಕೊಂಡು ಪ್ರಾಣಬಿಡುವೆನು. (ಹಗ್ಗವನ್ನು ತೆಗೆದುಕೊಳ್ಳುವಳು)

ರಾಜ—(ತ್ವರೆಯಿಂದ) ನಾನು ಬದುಕಿದ್ದಕ್ಕೆ ಇದೊಂದು ಫಲವು ಬೇರೆ ಸಂಭವಿಸಿತು. ಮಂದಭಾಗ್ಯನಾದ ನಾನು ಈಗ ಮಾಡತಕ್ಕದ್ದೇನು) (ಆಲೋಚಿಸಿ) ಇರಲಿ! ("ಕ್ಷಿತಿಯೊಳ್" ಎಂಬ ಪದ್ಯವನ್ನು ಗಟ್ಟಿಯಾಗಿ ಹೇಳುವನು.)

ವೃ॥ ಕ್ಷಿತಿಯೊಳ್ ಪುಟ್ಟಿದ ಜೀವರಾಶಿಯುಸಿತುಂ ತಂತಮ್ಮ ಸತ್ಕರ್ಮಸಂ | ತತಿಯಿಂದಂ ಪರಲೋಕಮಂ ಪಡೆದು ತಾವಾನಂದದಿಂದಿರ್ಪವಾ॥ ಸತಿಯುಂ ವಿಕ್ರಯಿಸುತ್ತ ತನ್ನೊಡಲನನ್ಯರ್ಗೀಡು ಗೆಯ್ದಿನ್ನದು | ಸ್ಥಿತಿಯುಂ ನೋಡಿ ನಗುತ್ತಮಿರ್ಪರಕಟಾ ಲೋಕಾಂತರಾವಾಸಿಗಳ್ ॥

ಶೈಬ್ಯೆ—(ಕೇಳಿ, ಭಯದೊಡನೆ ಕೂಡಿ ಹಗ್ಗವನ್ನು ಬಿಸುಟು) ಛೀ! ಛೀ! ಮರಣಮಹೋತ್ಸವಾಸಕ್ತಚಿತ್ತಳಾದ ನಾನು ಪರಾಧೀನಳೆಂಬುದನ್ನು ಮರೆತಿದ್ದೆನು. ಮತ್ತೊಂದು ಜನ್ಮದಲ್ಲಿಯೂ ಈ ದಾಸಭಾವವನ್ನು ಅನುಭವಿಸಬೇಕಾಗುತ್ತಿತ್ತಲ್ಲಾ. (ಮೇಲೆನೋಡಿ ನಿಟ್ಟುಸುರುಬಿಟ್ಟು) ಎಲೈ ಪೂಜ್ಯವಾದ ದೈವವೆ! ನಿನ್ನಿಂದ ನಾನು ಸಾಯುವುದಕ್ಕೂ ಇಲ್ಲದಹಾಗಾಯಿತಲ್ಲ. ಹಾ! ಹಾ! ಮಂದಭಾಗ್ಯಳಾದ ನಾನು ಕೆಟ್ಟೆನು. (ಎಂದು ನೆಲದಮೇಲೆಬಿದ್ದು ಬೇಗನೆ ಎದ್ದು ಕಣ್ಣೀರನ್ನು ಒರಸಿಕೊಂಡು) ಪ್ರತೀಕಾರವಿಲ್ಲದ ಈದುರವಸ್ಥೆಗಾಗಿ ಎಷ್ಟು ಅತ್ತರೇನು? ಆದುದರಿಂದ ಕಾಲೋಚಿತವಾಗಿ ಈ ಶಿಶುವನ್ನು ಸಂಸ್ಕರಿಸಿ ಬಳಿಕ ಈ ನನ್ನ ದಾಸ್ಯಕ್ಕೆ ಯೋಗ್ಯವಾದ ಶುಶ್ರೂಷೆಯಿಂದ ಆ ಬ್ರಾಹ್ಮಣನನ್ನು ಆರಾಧಿಸುತ್ತ ಪುನರ್ಜನ್ಮವಿಲ್ಲದಂತೆ ಮಾಡಿಕೊಳ್ಳುವದಕ್ಕಾಗಿ ವ್ರತೋಪವಾಸನಿಯಮಗಳಿಂದ ಈ ಶರೀರವನ್ನು ದಂಡಿಸುವೆನು. (ಎಂದು ಚಿತಿಯನ್ನು ಒಟ್ಟುವಳು)

ರಾಜ—(ನೋಡಿ ದುಃಖದಿಂದ) ಆಹ! ಈಕೆಯು ಕಾಲೋಚಿತ

ಕೃತ್ಯಕ್ಕೆ ಉಪಕ್ರಮಿಸಿದಳು. (ಸ್ವಗತ) ದೇವಿ! ಭಾಪು ಭಾಪು! ಈ ದುರವಸ್ಥೆಯಲ್ಲಿಯೂ ತಪ್ಪಿ ನಡೆಯಲಿಲ್ಲ. ಆದುದರಿಂದ ನಾನು ಕೂಡ ಅಲ್ಲಿಗೆ ಹೋಗಿ ಒಡೆಯನಾಜ್ಞೆಯನ್ನು ನೆರವೇರಿಸುವೆನು. (ಎಂದು ಸಮೀಪಕ್ಕೆ ಬಂದು ದುಃಖಲಜ್ಜೆಗಳೊಡನೆ) ಎಲೆ ದೇವಿ! (ಎಂದು ಅರ್ಧೋಕ್ತಿಯಲ್ಲಿ ಮುಖವನ್ನು ಮುಚ್ಚಿಕೊಳ್ಳುವನು) ಎಲೆ ಮಹಾತ್ಮಳೆ!

ಕಂ॥ ತಿಳಿಸದೆನಗೀವ ಮೃತಕಂ।
ಬಳಮಂ ತಾಂ ಕುಡದೆ ಜನಮುದಾರಾದೊಡಮೀ॥
ಇಳೆಯೊಳ್ ಶ್ಮಶಾನಯೋಗ್ಯಂ।
ಗಳೆನಿಪ ಕಜ್ಜಗಳನುಜ್ಜುಗಿಸದಿರವೇಳ್ಕುಂ॥

ಆದುದರಿಂದ ಮೃತಕಂಬಳವನ್ನು ಕೊಡು. (ಎಂದು ಕಣ್ಣೀರನ್ನು ತಡೆದುಕೊಂಡು ಕೈನೀಡುವನು)

ಶೈಬ್ಯೆ—(ಭಯದೊಡನೆ) ಎಲೈ ಭದ್ರಕನೆ! ದೂರದಲ್ಲಿರು. ಕೊಡುವೆನು ಸ್ವಲ್ಪತಾಳು.

ರಾಜ—(ಲಜ್ಜೆಯನ್ನು ಅಭಿನಯಿಸುವನು)

ಶೈಬ್ಯೆ—(ಮಗುವಿನ ಶರೀರದಿಂದ ವಸ್ತ್ರವನ್ನು ತೆಗೆದುಕೊಡುವಕಾಲದಲ್ಲಿ ರಾಜನ ಕೈಯನ್ನು ನೋಡಿ ಆಶ್ಚರ್ಯದೊಡನೆ ತನ್ನಲ್ಲಿ ತಾನು) ಇದೇನು? ಚಕ್ರವರ್ತಿಲಕ್ಷಣದಿಂದ ಕೂಡಿರುವ ಈ ಹಸ್ತವು ಇಂತಹ ಕೆಲಸಕ್ಕೆ ಪ್ರವರ್ತಿಸಿರುವುದು? (ಸಮೀಪಕ್ಕೆ ಬಂದು ಅವಯವಗಳನ್ನೆಲ್ಲ ನೋಡಿ ಗುರುತು ಹಿಡಿದು) ಇದೇನು? ಆರ್ಯಪುತ್ರನಂತೆ ತೋರುವುದು? (ತ್ವರೆಯಿಂದ) ಹಾ! ಆರ್ಯಪುತ್ರನೆ! ರಕ್ಷಿಸು! ರಕ್ಷಿಸು! (ಎಂದು ಬೀಳುವಳು)

ರಾಜ—(ಹಿಂದಕ್ಕೆ ಸರಿದು) ಎಲೆ ದೇವಿ! ಚಂಡಾಲದಾಸ್ಯದಿಂದ ದೂಷಿತನಾದ ನನ್ನನ್ನು ಮುಟ್ಟಬೇಡ. ಸೈರಿಸು. ಸೈರಿಸು.

ಶೈಬ್ಯೆ—(ಸಮಾಧಾನ ಮಾಡಿಕೊಂಡು) ಹಾ! ಹಾ! ಇದೇನಿದು!

ರಾಜ—ದೇವಿ ! ಮತ್ತೇನು ? ಪೂರ್ವಜನ್ಮದಲ್ಲಿ ಮಾಡಿದ ದುಷ್ಕರ್ಮಗಳ ಫಲವು. ಆದುದರಿಂದ ಅಳಬೇಡ. ಅದನ್ನು ಕೊಡು.

ಶೈಬ್ಯೆ—(ದುಃಖದಿಂದ ಕೊಡುವಳು)

(ಆಕಾಶದಿಂದ ಪುಷ್ಪವೃಷ್ಟಿಯಾಗುವುದು. ಇಬ್ಬರೂ ಆಶ್ಚರ್ಯದೊಡನೆ ನೋಡುವರು)

ರಾಜ—ಇದೇನು ! ಆಕಾಶದಿಂದ ಪುಷ್ಪವೃಷ್ಟಿಯಾಗುವುದು.

(ತೆರೆಯುಲ್ಲಿ)

ಕಂ॥ ಅದ್ಭುತವೀದಾನಂ ಮೇ ।
ಣದ್ಭುತವೀಕ್ಷಾಂತಿಧೈರ್ಯಸೌಶೀಲ್ಯಂ ತಾ ॥
ನದ್ಭುತವೀಜ್ಞಾನಮುಮ ।
ತ್ಯದ್ಭುತವೀ ಸತ್ಯಮಲ್ತೆಭೂಪೋತ್ತಮನಾ ॥

ಶೈಬ್ಯೆ—ಇದುಯಾರು ! ಆರ್ಯಪುತ್ರನ ಗುಣಸಲ್ಲಾಪದಿಂದ ನನ್ನ ಮನಸನ್ನು ಸಂತೋಷಪಡಿಸುತ್ತಿರುವರು ? ಅಥವಾ ಆರ್ಯಪುತ್ರನಿಗೆ ಇಂತಹ ದುರವಸ್ಥೆ ಪ್ರಾಪ್ತವಾಗಿರುವಾಗ ಗುಣಸಲ್ಲಾಪವನ್ನು ಕೇಳಿ ಪ್ರಯೋಜನವೇನು ? ಸರ್ವಥಾ ಧರ್ಮವು ಕಾಪಾಡತಕ್ಕದಲ್ಲ. ಎಲ್ಲವೂ ಅರಣ್ಯರೋದನವೇಸರಿ. ತತ್ವಜ್ಞಾನವೂ ಅಂಧಕಾರನರ್ತನವಂತಾಯಿತು.

(ಧರ್ಮಪುರುಷನು ಪ್ರವೇಶಿಸುವನು)

ಧರ್ಮಪುರುಷ—ಎಲೌ ಮಹಾಪತಿವ್ರತೆಯೆ ! ಮಹಾರಾಜ ಹರಿಶ್ಚಂದ್ರನೆ ! ನಾನು ಕಾಪಾಡತಕ್ಕವನಲ್ಲವೆ ? ನೋಡು.

ವೃ॥ ಅನಿಬರ್ ಪಾರ್ಥಿವರೀ ಧರಾವಲಯದೊಳ್ ಸದ್ಧರ್ಮವರ್ಮಾದಿಯಾ । ಗೆನಿತಾನುಂ ಸುಕೃತಂಗಳಂ ನೆಗಳ್ದೊಡಂ ದುಷ್ಪ್ರಾಪವಾಗಿರ್ಪುದೆಂ ॥ ಪೆನೆ ಯೋಗೀಂದ್ರಸುಗಮ್ಯಮವ್ಯಯಮೆನಿಪ್ಪಾಬ್ರಹ್ಮಸಾಯುಜ್ಯಮಂ । ನಿನಗೀಗಳ್ ದಯೆಗೆಯ್ವೆನೆಂಬ ಸಲವಿಂದೆಯ್ತಂದೆ ನಾಂ ಭೂಪತೀ ॥

ಆದುದರಿಂದ ಸಾಕು ದುಃಖಿಸಬೇಡ. ಎಲೆ ವತ್ಸ ರೋಹಿತಾಶ್ವನೆ! ಏಳು, ಏಳು.

ರಾಜ—(ನೋಡಿ ಸಂತೋಷದೊಡನೆ) ಇದೇನು ? ಪೂಜ್ಯನಾದ ಧರ್ಮನೆ ? ಪೂಜ್ಯನೆ ! ನಮಸ್ಕರಿಸುವೆನು.

ಶೈಬ್ಯೆ—ಪೂಜ್ಯನೆ ! ನಮಸ್ಕರಿಸುವೆನು.

ರೋಹಿತಾಶ್ವ-- (ಮೆಲ್ಲನೆ ಕಣ್ಣು ತೆರೆಯುವನು.)

ಧರ್ಮ—ಕಂ ॥ ಚೇತರಿಸೆಲೆ ವತ್ಸನೆ ನಿಜ ।
ತಾತನ ವರಧರ್ಮದಿಂದೆ ಪಾಲಿತನಾದೈ ॥
ಭೂತಲಮುಂ ಪಾಲಿಸುನೀ ।
ನಾತೆರದಿಂ ಪೋಗಿಬಂದ ಹರಣಗಳಿಂದಂ ॥

ರೋಹಿತಾಶ್ವ—(ಬೇಗನೆ ಎದ್ದು) ಅಮ್ಮ ! ಇದೇನು ? ಇಲ್ಲಿಗೆ ನೀನು ಏತಕ್ಕೆ ಬಂದೆ ? ನಿನ್ನನ್ನು ಯಾರು ಕರೆದುಕೊಂಡು ಬಂದರು.

ಶೈಬ್ಯೆ—ವತ್ಸನೆ ! ಇನ್ನು ಯಾರು ? ನಮ್ಮ ಭಾಗ್ಯಗಳು.

ಧರ್ಮ—ಎಲೈ ವತ್ಸನೆ ! ಬ್ರಹ್ಮಲೋಕಕ್ಕೆ ಅತಿಥಿಯಾಗಿರುವ ನಿನ್ನ ತಂದೆಯನ್ನು ನೋಡು.

ರೋಹಿ—ತಂದೆಯೆ ! ರಕ್ಷಿಸು ! ರಕ್ಷಿಸು ! (ಎಂದು ತಬ್ಬಿಕೊಳ್ಳುವುದಕ್ಕೆ ಹೋಗುವನು)

ರಾಜ—(ಹಿಂದಕ್ಕೆ ಸರಿದು) ಚಂಡಾಲದಾಸ್ಯದಿಂದ ದೂಷಿತನಾಗಿರುವ ನನ್ನನ್ನು ಮುಟ್ಟಬೇಡ. ಮುಟ್ಟಬೇಡ.

ಧರ್ಮ—ರಾಜನೆ ! ಸಾಕು. ಸಾಕು. ಈ ಕೃಪಣಾಲಾಪಗಳನ್ನು ಬಿಡು. ಕೇಳು.

ವೃ॥ ವನಿತಾಸಂಯುತನಾಗಿ ನಿನ್ನ ಸತಿಯುಂ ಕೊಂಡೊಯ್ದು ವಿಪ್ರೇಂ
ದ್ರನಾರ್ । ನಿನತಾರಾಜ್ಯಮುಮೆಲ್ಲಿ ವಿಕ್ರಯಿಸಿ ನಿನ್ನಂ ಕೊಂ
ಡ ಚಂಡಾಲನಾ ॥ ರನಿತುಂ ತತ್ವಮನೆಲ್ಲಮಂ ತಿಳಿವವೊಲ್
ತದ್ದಿವ್ಯನೇತ್ರಂಗಳಂ। ನಿನಗೀಗಳ್ ದಯೆಗೆಯ್ವೆನಾನೊಲವಿಸಿಂ
ಕೈಕೊಳ್ಳಿದಂ ಭೂಪತೀ ॥

ಯಾರಲ್ಲಿ ಪರಿಜನರು ! ವಿಮಾನ ! ವಿಮಾನ !

ಪುರುಷ—(ಪ್ರವೇಶಿಸಿ) ಪೂಜ್ಯನಾದ ಧರ್ಮನೆ ! ಏನು ಅಪ್ಪಣೆ ?

ಧರ್ಮ—ಇತ್ತ ಬಾ !

ಪುರುಷ—ಇದೊ ಬಂದಿರುವೆನು.

ಧರ್ಮ—ಮಹಾರಾಜನೆ ! ವಿಮಾನವನ್ನು ಏರಿ ದಿವ್ಯಚಕ್ಷುಸ್ಸುಗಳಿಂದ
ನೋಡಿ ಇದರ ನಿಜಾಂಶವನ್ನೆಲ್ಲಾ ತಿಳಿದುಕೊ.

ರಾಜ—ಪೂಜ್ಯರ ಅಪ್ಪಣೆ ! (ಎಂದು ವಿಮಾನವನ್ನು ಏರಿ ಉತ್ಕೃಷ್ಟ
ವಾದ ವೇಷವನ್ನು ತಳೆದು ಧ್ಯಾನಿಸಿ) ಆಹ ! ಪ್ರಮಾದ ! ಪ್ರಮಾದ !
ವಿದ್ಯಾಪ್ರಾಪ್ತಿಯಿಂದ ಸಂತುಷ್ಟನಾದ ವಿಶ್ವಾಮಿತ್ರನು ನಮ್ಮ ಮಂತ್ರಿ
ಗಳಧೀನದಲ್ಲಿಯೇ ರಾಜ್ಯವನ್ನಿಟ್ಟಿರುವನು.

ಧರ್ಮ—ಎಲೈ ರಾಜನೆ ! ನಿನ್ನ ಸತ್ಯವನ್ನು ಪರೀಕ್ಷಿಸುವುದಕ್ಕಾ
ಗಿಯೆ ಈ ಮಹರ್ಷಿಯು ಹೀಗೆ ಮಾಡಿದನೆ ಹೊರತು ರಾಜ್ಯಾಭಿ
ಲಾಷೆಯಿಂದಲ್ಲ. ಚಿಂತಿಸಬೇಡ. ಇದನ್ನೆಲ್ಲಾ ಚೆನ್ನಾಗಿ ನೋಡು.

ರಾಜ—(ಪುನಃ ಧ್ಯಾನವನ್ನು ನಟಿಸಿ ಮುಗುಳುನಗೆಯೊಡನೆ) ಎಲೆದೇವಿ!
ದೈವಯೋಗದಿಂದ ವೃದ್ಧಿಯೊಂದುವೆ.

ವೃ॥ ನಿಜಪತ್ನೀಯುತನಾಗಿ ನಿನ್ನನೊಲವಿಂ ಕೊಂಡೊಯ್ದುವಂ ತ
ತ್ವದಿಂ । ದ್ವಿಜನಲ್ಲಾ ತನುವಾ ಮಹೇಶನೆ ವಲಂ ಸಾರ್ತಂದ

ನಾರೂಪದಿಂ ॥ ನಿಜದಿಂದೆನ್ನನೆ ವಿಕ್ರಯಕ್ಕೆ ಪಡೆದಾತಂ ಧರ್ಮ
ನೀಂಗಳ್ ಹೃದಂ। ಬುಜದೊಳ್ ನಾಂಟಿದ ಶಲ್ಯಸಂಹತಿಗಳೆಲ್ಲಂ
ಪೋದುವಬ್ಜಾಸನೇ ॥

ಧರ್ಮ—ಇನ್ನು ಈ ರೋಹಿತಾಶ್ವನಿಗೆ ರಾಜ್ಯಾಭಿಷೇಕವನ್ನು ಮಾಡು.

ರಾಜ—ಪೂಜ್ಯರ ಅಪ್ಪಣೆ.

ಧರ್ಮ–ಆಸನ,ಛತ್ರ,ಚಾಮರ, ಸಿಂಹಾಸನಾದಿಗಳೆಲ್ಲ ಸಿದ್ಧವಾಗಲಿ.

ವೃ॥ ಇದೆನೋಡೈ ತಂದುದಿತ್ತಲ್ ಮಣಿಗಣಕಿರಣಾಕೀರ್ಣಸಿಂಹಾ
ಸನಂ ಮ। ತ್ತಿದೆ ಚಂಚಚ್ಚಂದ್ರಕಾಂತಿಪ್ರಸರಪರಿಲಸಚ್ಚಾ
ಮರಂ ಹೇಮದಂಡಂ॥ಇದೆತಾಂ ರಾಕಾಶಶಾಂಕಪ್ರತಿಭಟಧವಳ
ಚ್ಛತ್ರಮುತ್ಯುಜ್ವಲಂ ಮ। ತ್ತಿದೆ ನೋಡಿತ್ತಲ್ ಚತುಸ್ಸಾಗರ
ಸಲಿಲಸುಸಂಪೂರ್ಣಸೌವರ್ಣಕುಂಭಂ ॥

(ಧರ್ಮಪುರುಷನೂ ಹರಿಶ್ಚಂದ್ರನೂ ರೋಹಿತಾಶ್ವನಿಗೆ ಅಭಿಷೇಕವನ್ನು ಮಾಡುವರು)

ಧರ್ಮ—(ಮೇಲೆ ನೋಡಿ) ಆಹ! ವಿಮಾನಚಾರಿಗಳಾದ ದೇವತೆಗಳೆಲ್ಲರೂ ರೋಹಿತಾಶ್ವನ ಅಭಿಷೇಕವನ್ನು ಅಭಿನಂದಿಸುತ್ತಿರುವರು.

ವೃ॥ ಇದಿರೊಳ್ ತೀರ್ಥಘಟಂಗಳಂ ತಳೆದು ನಿಂದಿರ್ಕುಂ ನದೀಸಂ
ಘಮಿಂ। ತಿಹೆ ದಿಙ್ಮಂಡಲಮಂ ಪಳಂಚಲೆವುದೀಗಂಭೀರಭೇ
ರೀರವಂ॥ ಮುನಿವಿಂ ಸತೀರ್ಥಪ್ರವಸ್ಸರಸ್ಸಮುವಯುಂ ಮಂದಾರ
ಮಂ ಬೀರುತಿಂ । ತಿವೆ ಲೋಕಾಧಿಪರೆಣ್ಬರೀ ನೃಪತಿಯಂ
ಸ್ವಸ್ವಾಂಶದಿಂ ಸೇವಿಸರ್ ॥

ಮಾಡಬೇಕಾದುದನೆಲ್ಲ ಮಾಡಿದುದಾಯ್ತು. ಬ್ರಹ್ಮಲೋಕಕ್ಕೆ ಹೊರಡುವುದಕ್ಕೆ ಸಿದ್ಧನಾಗು.

ರಾಜ—ಎಲೈ ಪೂಜ್ಯನೆ !

ವೃ॥ ಕೆರಳ್ದಾ ಕೌಶಿಕನೌಡುಗಚ್ಚೆ ಭರದಿಂ ಸಂತರ್ಜಿಸುತ್ತಿರ್ದೊಡಂ । ತೊರೆದೆವೆಮ್ಮೆಲ್ಲರನೆಲ್ಲಿ ಪೋಪೆ ಯೊಡನುಯ್ ಹಾನಾಥ ನೀನೆಮ್ಮುಮಂ ॥ ಶರಣಾರಿನ್ನೆಮಗೆಂದು ಕಣ್ಬನಿವಿಡುತ್ತೈತಂದ ಪೌರರ್ಕಳಂ । ತೊರೆದಾತ್ಮಂಭರಿಯಾಗುತೆಂತು ತಳರ್ವೆಂ ನೀನಿತ್ತ ಲೋಕಂಗಳಂ ॥

ಧರ್ಮ—ಎಲೈ ರಾಜನೆ ! ತಮ್ಮ ತಮ್ಮ ಕರ್ಮಾನುರೂಪಗಳಾದ ಫಲಗಳನ್ನು ಅನುಭವಿಸತಕ್ಕ ಪ್ರಜೆಗಳು ಇಂಥಾ ಭಾಗ್ಯವನ್ನು ಹ್ಯಾಗೆತಾನೆ ಪಡೆಯುವರು.

ರಾಜ—ಪೂಜ್ಯರೆ !

ಕಂ॥ ನಿಮಿಷಾರ್ಧವಾದೊಡಂ ನಾಂ ।
ರಮಿಸುವೆನಾಪ್ರಜೆಗಳೊಡನೆ ತತ್ತ್ವಪದದೊಳ್ ॥
ಸಮನಿಕೆ ಮೇಣ್ ಮತ್ಸುಕೃತಾ ।
ಗಮದಿಂ ನೀನಿತ್ತಲೋಕಮೆನೊಡನವರ್ಗುಂ ॥

ಧರ್ಮ – (ಆಶ್ಚರ್ಯದೊಡನೆ) ಆಹ ! ಈ ರಾಜರ್ಷಿಯ ನಡತೆಯು ಸರ್ವೋತ್ಕೃಷ್ಟವಾದದ್ದು. ಎಲೈ ರಾಜನೆ ! ಈ ನಿನ್ನ ಪುಣ್ಯದಾನ ದಿಂದಲೂ ಉಂಟಾದ ಬೇರೊಂದು ಪುಣ್ಯದಿಂದ ಆ ಪ್ರಜೆಗಳಿಗೂ ನಿನಗೂ ಶಾಶ್ವತಗಳಾದ ಲೋಕಗಳು ಉಂಟಾಗಲಿ. ಇನ್ನು ನಿನಗೆ ಆಗಬೇಕಾದದ್ದು ಏನು ! ಹೇಳು.

ರಾಜ—ಎಲೈ ಪೂಜ್ಯರೆ ! ಇದಕ್ಕಿಂತಲೂ ಆಗಬೇಕಾದ್ದೇನಿರುವುದು ?

ವೃ॥ ವರವಿದ್ಯಾತ್ರಯಲಾಭದಿಂ ಮುನಿಯುಮೆಮ್ಮೊಳ್ ವೈರಮಂ
ಬಿಟ್ಟನೀ। ತರಳಂ ಜೀವಿಸಿ ಸಾರ್ವಭೌಮತೆಯನಾಂತಂ ಮೇ
ಣ್ಭವದ್ದರ್ಶನಂ ॥ ದೊರದತ್ತೆನ್ನಯ ಭಾಗ್ಯದಿಂ ಪಡೆದೆನಾಂ
ತದ್ಬ್ರಹ್ಮಸಾಲೋಕ್ಯಮಂ । ಪೆರವಾವಭ್ಯುದಯಂಗಳುಂಟೆ
ನಗೆ ಮತ್ತಿನ್ನಾವುದಂ ಪ್ರಾರ್ಥಿಪೆಂ ॥

ವೃ॥ ಇಳೆಯಾಣ್ಮರ್ ಜಯಶೀಲರಕ್ಕೆ ಸುಜನರ್ ಸಂಮೋದದಿಂ
ದಿರ್ಕ್ಕೆ ಭೂ। ವಲಯಂ ಸಸ್ಯಸಮೃದ್ಧಮಕ್ಕೆ ಧರೆಯೊಳ್
ಧರ್ಮಂ ನೆಗಳ್ದಿರ್ಕ್ಕೆಮಂ ॥ ಜುಳಕಾವ್ಯಂಗಳನಾಲಿಸುತ್ತ
ಪಲವುಂ ದೋಷಂಗಳಂ ಮುಚ್ಚಿ ತ। ಮ್ಮೊಲವಿಂ ತದ್ಗುಣ
ಲೇಶದಿಂದೆ ಸುಗುಣಜ್ಞರ್ ಸಂತಸಂದಾಳ್ಗೆ ತಾಂ ॥

ಪಂಚಮಾಂಕಂ ಸಮಾಪ್ತಂ.

ಕಂ॥ ವರಗುಣಯುತ ಚಾಮಮಹೀ।
ಶ್ವರನಾಸ್ಥಾನದೊಳೆ ನೆಗೆಳ್ದ ಬಸವಕವೀಂದ್ರಂ॥
ವಿರಚಿಸುತೆ ಪಂಚಮಾಂಕಂ।
ಬರವೀಕಾವ್ಯಮನೆಪರಮಪದಮಂ ಸಾರ್ದಂ॥

ಕಂ॥ ಕೃತಿಯಿದು ನಡುವೋಳ್ ವಿಘ್ನ।
ಪ್ರತಿಹತಮೆನಿಸಿರ್ದುದೆಂದು ಚಿಂತಿಸುತಂ ಪಂ॥
ಡಿತರೊಲ್ದು ಬೆಸಸಲವರಾ।
ಣತಿಯಿಂದಳಸಿಂಗರಾರ್ಯನುಳಿದುದನುಸಿರ್ದಂ॥

PRINTED BY J. M. MYSOREVALLA AT THE G. T. A. PRESS.